ಮತ್ತು ಕಾಶ್ಮೀರ್‌ನಲ್ಲಿರಬಹುದು, ಆಂದ್ರ ಪ್ರದೇಶದಲ್ಲಿ ನಕ್ಸಲೈಟ್ಸ್ ಇರಬಹುದು, ಅವರು ಏನು ಮಾಡುತ್ತಾರೆಂದರೆ ಬೆಂಗಳೂರು ಸೇಫ್ ಪ್ಲೇಸ್ ಎಂದು ಇಲ್ಲಿಗೆ ಬರುತ್ತಾರೆ. ತಮಗೆ ಗೊತ್ತಿದೆ ಮಾನ್ಯ ರಾಜೀವ್ ಗಾಂಧಿಯವರ ಹತ್ಯೆಯನ್ನು ಮಾಡಿದ ಎಲ್.ಟಿ.ಟಿ.ಇ. ದವರು ಕೋಣನ ಕುಂಟೆಯಲ್ಲಿ ಬಂದು ವಾಸವಾಗಿದ್ದರು. ಹೀಗೆ ಅವರು ಕ್ರೈಮ್ ಬೇರೆ ಕಡೆ ಮಾಡುತ್ತಾರೆ, ವಾಸ ಮಾಡಲು ಹಾಗೂ ತಮ್ಮ ಮುಂದಿನ ಆ್ಯಕ್ಟಿವಿಟಿ ಮಾಡಲು ಇಲ್ಲಿಗೆ ಬಂದುಬಿಡುತ್ತಾರೆ. ಆವಾಗ ಏನಾಗುತ್ತದೆ ಇಲ್ಲಿರುವಂಥ ಜನರಿಗೆ ತಾವು ಮಾಡಿದಂಥ ಅಪರಾಧಗಳನ್ನು ಮುಚ್ಚಿಟ್ಟುಕೊಳ್ಳಲು ಇಲ್ಲಿರುವ ಅಸಮಧಾನವಾಗಿರತಕ್ಕಂಥ ಯುವಕರಿಗೆ ತೆಗೆದುಕೊಂಡು ಟ್ರೇನಿಂಗ್ ಕೊಟ್ಟು ಪ್ರಚೋದನೆ ಮಾಡತಕ್ಕಂಥ ಕೆಲಸಕ್ಕೆ ದಾರಿಯಾಗುತ್ತದೆ. ಅದರ ಬಗ್ಗೆ ಕೂಡ ತಾವು ಕ್ರಮ ತೆಗೆದುಕೊಳ್ಳಬೇಕು. ಏನು ಆಗಲ್ಲ, ಏನು ಆಗಲ್ಲ ಎಂದು ಸುಮ್ಮನೆ ಕುಳಿತರೆ ಆಗುವುದಿಲ್ಲ. ತಮಗೆ ಗೊತ್ತಿದೆ ಹೀಗೆ ಕುಳಿತಿರುವಾಗ ವೀರಪ್ಪನ್ ಬಂದು ನಮ್ಮ ಹತ್ತಿಪ್ಪತ್ತು ಜನರನ್ನು ಸಾಯಿಸಿ ಬಿಟ್ಟು ಹೋದ. ಹೀಗೆ ಅನೇಕ ಬಾರಿ ಆಗಿರುವುದನ್ನು ನಾವು ಮರೆಯಬಾರದು. ಅವರು ಮಾಡುವುದನ್ನು ಮಾಡಿಯೇ ಮಾಡುತ್ತಾರೆ. ಅದರ ಬಗ್ಗೆ ಸ್ವಲ್ಪ ಪ್ರಿಕಾಶ್‌ನರಿ ಮೆಜರ್ಸ್ ತೆಗೆದುಕೊಳ್ಳಬೇಕು. ನಮ್ಮಲ್ಲಿ ಆ ಸಂಸ್ಕೃತಿ ಇಲ್ಲ ಆದರೆ ನಮ್ಮ ಅಕ್ಕಪಕ್ಕದಲ್ಲಿ ಆ ಒಂದು ಸಂಸ್ಕೃತಿ ಇದೆ. ಅದರ ಪರಿಣಾಮ ಆಗುತ್ತದೆ. ಅದನ್ನು ತಡೆಗಟ್ಟಲು, ಅದು ಆಗದ ಹಾಗೇ ನೋಡಿಕೊಳ್ಳಲು ತಾವು ಪೋಲೀಸ್ ಕಮೀಷನರ್‌ಗೆ, ಪೋಲೀಸರಿಗೆ, ಅದರ ಬಗ್ಗೆ ಜಾಗೃತಿ ವಹಿಸಲು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ತಮಿಳುನಾಡಿನ ಜೈಲಿನಿಂದ ಎಲ್‌ಟಿಟಿಯವರು ತಪ್ಪಿಸಿಕೊಂಡು ಬಂದಿದ್ದಾರೆ. ಅವರು ನಮ್ಮ ರಾಜ್ಯಕ್ಕೆ ಬಂದಿರಬಹುದಾದ ಸೂಚೆಗಳಿವೆ. ಆದಕಾರಣ ನಮ್ಮ ಶಾಸನ ಸಭೆಗೆ ಬರತಕ್ಕಂಥ ಶಾಸಕರುಗಳು, ವಿಧಾನಸೌಧ ಮತ್ತು ಶಾಸಕರ ಭವನಕ್ಕೆ ಬರುವಂಥ ನಮ್ಮ ರಾಜ್ಯದ ಜನರಿಗೆ ರಕ್ಷಣೆ ನೀಡುವಂಥ ದೃಷ್ಟಿಯಿಂದ ಹಾಗೂ ಸಭಾಧ್ಯಕ್ಷರ ಕೊಠಡಿಗೂ ಎಲ್ಲಾ ರೀತಿಯ ರಕ್ಷಣೆ ಕೊಡುವ ದೃಷ್ಟಿಯಿಂದ ಸ್ವಲ್ಪ ಬಿಗಿ ಭದ್ರತೆಯನ್ನು ರಾತ್ರಿ ಹಗಲು ಮಾಡುವುದು ಅವಶ್ಯಕವಾಗಿದೆ ಎಂದು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಎರಡು ವಿಚಾರಗಳು ಪ್ರಸ್ತಾಪವಾಗಿವೆ. ಹಿರಿಯ ಸದಸ್ಯರಾಗಿರುವಂಥ ಶ್ರೀ ಮಲ್ಲಿಕಾರ್ಜುನಖರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ಪಕ್ಕದ ರಾಜ್ಯದಲ್ಲಿ ಆದಂಥ ಘಟನೆಗಳ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಪೋಲೀಸ್‌ನವರು ಬಹಳ ಜಾಗರೂಕತೆಯಿಂದ ಮುಂಜಾಗ್ರತಾ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಹಾಗೂ ಕೇಂದ್ರ ಸರ್ಕಾರದ ನಮ್ಮ ಏಜೆನ್ಸಿಯ ಜೊತೆ ಹಾಗೂ ಪಕ್ಕದ ಪೋಲೀಸ್‌ನವರ ಜೊತೆ ಸಂಯೋಜನೆ ಮಾಡಿಕೊಂಡು ಎಷ್ಟು ಸಾಧ್ಯವಿದೆ ಅಷ್ಟನ್ನು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ತಿಳಿಸಲಿಚ್ಛಿಸುತ್ತೇನೆ. ಇನ್ನು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಒಂದು ವಿಚಾರವನ್ನು ನಮ್ಮ ಮುಂದಿಟಿದ್ದಾರೆ. ಈ ವಿಚಾರದಲ್ಲಿ ವಿಧಾನಸಭೆ, ವಿಧಾನ ಪರಿಷತ್ತು ಹಾಗೂ ಶಾಸಕರ ಭವನದಲ್ಲಿ ಭದ್ರತೆಯ ದೃಷ್ಟಿಯಲ್ಲಿ ಸಭಾಧ್ಯಕ್ಷರೇ ತೀರ್ಮಾನ ತೆಗೆದುಕೊಳ್ಳಬಹುದು. ಸಭಾಧ್ಯಕ್ಷರು ಕರೆಯುವ ಸಭೆಯಲ್ಲಿ ಉನ್ನತ ಅಧಿಕಾರಿಗಳನ್ನು ಕರೆಸುತ್ತೇನೆ. ನಾನೂ ಕೂಡ ಸಲಹೆಗಳನ್ನು ಕಾರ್ಯಗತ ಮಾಡುತ್ತೇನೆ.

ಅಧ್ಯಕ್ಷರು: ಈಗ ಬರಗಾಲ ವಿಷಯವಾಗಿ ಚರ್ಚೆ ಪಾರಂಭ ಮಾಡೋಣ. ಮಾನ್ಯ ವಾಟಾಳ್ ನಾಗರಾಜ್:

ವಿಷಯ: ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಬಗ್ಗೆ ಚರ್ಚೆ.

3.50 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಬರಗಾಲ ಪರಿಸ್ಥಿತಿಯ ಬಗ್ಗೆ ತುರ್ತಾಗಿ ಚರ್ಚೆ ಮಾಡಲಿಕ್ಕಾಗಿ ಈ ಸದನವನ್ನು ಕರೆಯಬೇಕು ಎಂದು ಹೇಳಿ ನಾವುಗಳು ಬಹಳ ಒತ್ತಾಯ ಮಾಡಿದಾಗ ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳ ಸಭೆಯನ್ನು ಕರೆದು ಅದರಲ್ಲಿ ಕಂದಾಯ ಸಚಿವರು, ಅರ್ಥ ಸಚಿವರು ಎಲ್ಲರನ್ನೂ ಸೇರಿಸಿ ಒಂದು ವಿವರಣೆಯನ್ನು ನೀಡಿ ತಾವು ಕೈಗೊಂಡಿರತಕ್ಕಂಥ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಆ ಸಂದರ್ಭದಲ್ಲಿ ನಾವು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದು ಆಯಿತು. ಅದಾದನಂತರ ಅವರು ಅನೇಕ ಕಾರ್ಯಕ್ರಮಗಳನ್ನು ಹಾಕಿ ಈ ಪರಿಸ್ಥಿತಿಯನ್ನು ಶಮನ ಮಾಡಬೇಕು ಎನ್ನತಕ್ಕಂಥ ತೀವ್ರ ಪ್ರಗತಿಯಲ್ಲಿ ಚಿಂತನೆ ನಡೆಯಿತು. ಅಂದರೆ ಯಾವ ಮಟ್ಟದಲ್ಲಿ ಚಿಂತನೆ ಆಯಿತು ಆ ಪ್ರಕಾರ ಕಾರ್‍ಯಕ್ರಮ ಯಶಸ್ವಿ ಆಗಲಿಲ್ಲ. ಇದರ ಜೊತೆಗೆ ಒಂದು ಬರಗಾಲ ಉಸ್ತುವಾರಿ ಸಮಿತಿಯನ್ನು ಸಹ ಮಾಡಿದರು. ಈ ಬರಗಾಲ ಉಸ್ತುವಾರಿ ಸಮಿತಿ ಏನು ಮಾಡಬೇಕೆಂದು ಸೂತ್ರವನ್ನು ಕೊಡಲಿಲ್ಲ. ಬರಗಾಲ ಪ್ರದೇಶಗಳನ್ನು ಒಳಗೊಂಡ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಯಿತು. ಹಾಗೆ ಸಮಿತಿ ರಚನೆಯಾಗಿದೆ ಎಂದು ಹೇಳಿ ಆದೇಶ ಬಂದಿದೆ. ಆದರೆ ಈ ಸಮಿತಿ ಏನು ಕೆಲಸ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಏನನ್ನೂ ಹೇಳಿಲ್ಲ. ನನಗನ್ನಿಸುತ್ತದೆ ಈ ಸಮಿತಿಯವರಿಗೆ ಯಾವುದೇ ವಿಧವಾದ ಅಧಿಕಾರವೂ ಇಲ್ಲ. ಎಲ್ಲಾದರೂ ರಸ್ತೆ ಕೆಟ್ಟಿದ್ದರೆ ದುರಸ್ತಿ ಪಡಿಸುವುದಕ್ಕೆ ಅಧಿಕಾರ ಇಲ್ಲ, ಯಾವುದಾದರೂ ಕೆರೆಯ ಹೂಳನ್ನು ತೆಗೆಸಬೇಕು ಎಂದರೆ ಅದಕ್ಕೂ ಅಧಿಕಾರ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡಿಸುವುದಕ್ಕಾಗಲೀ, ದನಕರುಗಳಿಗೆ ಮೇವಿನ ವ್ಯವಸ್ಥೆ ಮಾಡಿಸುವುದಕ್ಕಾಗಲೀ ಅಧಿಕಾರ ಇಲ್ಲ. ಯಾವ ರೀತಿಯ ಅಧಿಕಾರವನ್ನು ಕೊಡದೇ ಸಮಿತಿಯನ್ನು ಮಾಡಿದ್ದಾರೆ. ಈ ಬರಗಾಲ ಉಸ್ತುವಾರಿ ಸಮಿತಿಯ ಕೆಲಸ ಏನು ಎನ್ನತಕ್ಕಂಥದ್ದು ನನಗಂತೂ ಇನ್ನೂ ಅರ್ಥವಾಗಿಲ್ಲ. ನಾವು ಈ ಸಮಿತಿಯ ಸಭೆಯನ್ನು ಸೇರುವುದಕ್ಕೆ ಹೋಗುವುದಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಕಂದಾಯ ಸಚಿವರು ಹೇಳಬಹುದು. ಹಿಂದೆ ನೀವು ಮೂರು ಸಭೆ ಕೂಡ ಸೇರಲಿಲ್ಲ ಎಂದು. ಈಗ ನಿಮ್ಮ ಸಮಿತಿಯ ವ್ಯವಸ್ಥೆ ಏನು, ಸಮಿತಿ ಏನು ಕೆಲಸ ಮಾಡಬೇಕು ಎನ್ನುವ ನಿರ್ಭಂಧವಾಗಲೀ, ಸೂತ್ರವಾಗಲೀ ಇಲ್ಲ. ಸುಮ್ಮನೇ ನಮ್ಮನ್ನು ಮೆಚ್ಚಿಸುವುದಕ್ಕೆ ಈ ಸಮಿತಿ ರಚನೆಯಾಗಿದೆ. ಇದೊಂದು ಕಣ್ಣೊರೆಸುವ ತಂತ್ರ. ಇದರಲ್ಲಿ ಗ್ರಾಮ ಪಂಚಾಯತಿ ಸದಸ್ಯರು, ಗ್ರಾಮ ಪಂಚಾಯತಿ ಅಧ್ಯಕ್ಷರು, ತಾಲ್ಲೂಕು ಪಂಚಾಯತಿ ಸದಸ್ಯರು, ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತಿ ಸದಸ್ಯರು ಇವರುಗಳೇ ಯಾವ ರಸ್ತೆ ಮಾಡಿಸಬೇಕಾದರೂ ಇವರೇ, ಕೆರೆ ಹೂಳು ತೆಗೆಸಬೇಕಾದರೂ ಇವರೇ, ದನಕರುಗಳಿಗೆ ಮೇವು ಕೊಡಿಸಬೇಕಾದರೂ ಇವರೇ, ಗುತ್ತಿಗೆ ತೆಗೆದುಕೊಳ್ಳಬೇಕಾದರೂ ಇವರೇ, ಇಲ್ಲಿ ಶಾಸಕರು ಏನೂ ಇಲ್ಲ. ಇಲ್ಲಿ ಶಾಸಕರ ಮಾತಿಗೆ ಬೆಲೆಯೇ ಇಲ್ಲ. ಆದುದರಿಂದ ನಾನು ಈ ಸಮಿತಿಯಲ್ಲಿ ಇರುವುದಕ್ಕೆ ನನಗೆ ಇಚ್ಛೆಯಿಲ್ಲ. ಈ ಸಮಿತಿಯಲ್ಲಿ ಭಾಗವಹಿಸುವುದಕ್ಕೆ ನಾನು ನಿಸ್ತೇಜ. ಒಳ್ಳೆಯ ಸೂತ್ರವಿಲ್ಲದ, ವೈಜ್ಞಾನಿಕವಲ್ಲದ ಈ ಸಮಿತಿಗೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಒಬ್ಬ ತಹಸೀಲ್ದಾರರಿಗಿರತಕ್ಕಂಥ ಅಧಿಕಾರ, ಒಬ್ಬ ಶೇಕ್‌ದಾರರಿಗಿರತಕ್ಕಂಥ ಅಧಿಕಾರಕ್ಕಿಂತಲೂ ಕಡಿಮೆ ಅಧಿಕಾರ ಇರತಕ್ಕಂಥ ಸಮಿತಿ ಇದಾಗಿದೆ. ನಮ್ಮ ಕ್ಷೇತ್ರದಲ್ಲಿ ಬರಗಾಲ ವ್ಯವಸ್ಥೆ ಏನಾಗಿದೆ, ಇದಕ್ಕೆ ಯಾವ ರೀತಿ ವ್ಯವಸ್ಥೆ ಮಾಡಬೇಕು ಎಂಬುದರ ಬಗ್ಗೆ ವಿಚಾರ ಮಾಡಲು ಸಂತೋಷ ಪಡುತ್ತೇನೆ. ಆದರೆ ಈ ರೀತಿಯ ಸಮಿತಿ ಮಾಡಿತಕ್ಕಂಥದ್ದನ್ನು

ನೋಡಿದರೆ ಇದು ನಿಜವಾಗಿಯೂ ಒಳ್ಳೆಯ ವೈಜ್ಞಾನಿಕವಾಗಿ ಮಾಡಿರತಕ್ಕಂಥ ಸಮಿತಿಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಇಂಥ ಸಮಿತಿಯ ಸಭೆಯಲ್ಲಿ ನಾನು ಭಾಗವಹಿಸುವುದಿಲ್ಲ, ಆದರೆ ಮಿಕ್ಕ ಸದಸ್ಯರುಗಳ ಭಾಗವಹಿಸುವುದು ಅಥವಾ ಬಿಡುವುದು ಅವರಿಗೆ ಸಂಬಂಧಪಟ್ಟದ್ದುದು, ಯಾವ ರೀತಿಯ ನಿಲುವನ್ನು ತಾಳುತ್ತಾರೋ ಅದು ಅವರಿಗೆ ಸೇರಿದ್ದುದು. ನನ್ನ ಪ್ರಕಾರ ಹೇಳುವುದಾದರೆ ಈ ಸಮಿತಿಯ ಸಭೆಯನ್ನು ಕರೆಯುವುದೇ ಒಂದು ಅಗೌರವ. ಮಾನ್ಯ ಅಧ್ಯಕ್ಷರೇ, ತಮಗೆ ಹೇಳಬೇಕೆಂದರೆ ಇದರಲ್ಲಿ 1000 ರೂ ಗಳ ಕೆಲಸವನ್ನು ಮಾಡಿಸಬೇಕಾದರೂ ಇದಕ್ಕೆ ಅಧಿಕಾರವಿಲ್ಲ, ಕೆರೆಯ ಹೂಳನ್ನು ತೆಗೆಸುವ ವಿಚಾರದಲ್ಲಾಗಲೀ, ರಸ್ತೆ ದುರಸ್ತಿಪಡಿಸುವ ವಿಚಾರದಲ್ಲಾಗಲೀ ಈ ಸಮಿತಿಗೆ ಒಂದು ಸಣ್ಣ ಅಧಿಕಾರವೂ ಇಲ್ಲ, ನಮ್ಮಲ್ಲಿ ಅತ್ಯಂತ ಕಳಕಳಿಯ ಮನವಿ ಏನೆಂದರೆ, ತಕ್ಷಣ ಒಂದು ಆದೇಶ ಹೊರಡಿಸಿ ತಕ್ಷಣ ಇದನ್ನು ಹಿಂತೆಗೆದುಕೊಳ್ಳುವುದೇ ಒಳ್ಳೆಯ ಕ್ರಮ. ಏಕೆಂದರೆ ನಾನು ಇಂಥ ಸಭೆಯನ್ನು ಕರೆಯುವುದಿಲ್ಲ. ನಾನು ಇದಕ್ಕೆ ಹೋಗುವುದೂ ಇಲ್ಲ. ತಾವು ಯಾರನ್ನೂ ಬೇಕಾದರೂ ನೇಮಿಸಿಕೊಳ್ಳಬಹುದು. ಇಂಥ ಸಮಿತಿಗಳು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡುವುದಿಲ್ಲ. ಕರ್ನಾಟಕದಲ್ಲಿ ಬರಗಾಲ ಹೊಸದಾಗಿ ಏನೂ ಬಂದಿಲ್ಲ. ಈ ಹಿಂದೆ ಹಲವಾರು ಸರ್ಕಾರಗಳು ಇದ್ದಾಗಲೂ ಕೂಡ ಬಂದಿದೆ. ಅತಿವೃಷ್ಟಿ-ಅನಾವೃಷ್ಟಿಗಳು ಕಾಣಿಸಿಕೊಂಡಿವೆ. ಇವೊತ್ತು ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ನೇರವಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುತ್ತೇನೆ. ಯಾವುದೋ ಬೇರೆ ಇಲಾಖೆಗಳಲ್ಲಿ ಖರ್ಚು ಮಾಡಿರತಕ್ಕಂಥದ್ದನ್ನು ಸೇರಿಸಿ ಮತ್ತು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಿಗೆಲ್ಲಾ ಕೊಟ್ಟಿರುವುದನ್ನೆಲ್ಲಾ ಸೇರಿಸಿ ಅಷ್ಟನ್ನೂ ಬರಗಾಲ ಕಾಮಗಾರಿಗಳಿಗಾಗಿ ಖರ್ಚು ಮಾಡಿದ್ದೇವೆ ಎನ್ನತಕ್ಕಂಥದ್ದು ಸರಿಯಲ್ಲ. ನಾನು ಕೇಳುತ್ತೇನೆ, ನೇರವಾಗಿ ಕೇವಲ ಬರಗಾಲಕ್ಕಾಗಿಯೇ ನಿಮ್ಮ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ ಎಂಬುದನ್ನು ಸ್ಪಷ್ಟಪಡಿಸಬೇಕು. ಇವೊತ್ತಿನ ಪರಿಸ್ಥಿತಿಯೇನೋ ಸ್ವಲ್ಪ ಉತ್ತಮವಾಗಿದೆ. ಇದಕ್ಕಿಂತ ಮುಂದೆ ಅಂದರೆ ಮಳೆ ಬರುವುದಕ್ಕಿಂತ ಮುಂಚೆ ಕೊಟ್ಯಾಂತರ ರೂಪಾಯಿ ನಷ್ಟವಾಗಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಬೆಳೆಯನ್ನು ಬಿತ್ತಿದ್ದರೆ ಬಿತ್ತಿದ ಬೆಳೆ ಒಣಗಿರಬಹುದು. ಬೀಜ ಬಿತ್ತಿ ಮೊಳಕೆ ಬರುವ ಕಾಲದಲ್ಲಿ ರೈತರಿಗೆ ನಷ್ಟವಾಗಿರಬಹುದು, ಇಂಥ ಪರಿಸ್ಥಿತಿಗಳು ಇದ್ದಾಗ ತಾವು ರೈತರಿಗೆ ಯಾವ ರೀತಿಯ ಸಹಾಯಧನವನ್ನು ಕೊಡತಕ್ಕಂಥ ವ್ಯವಸ್ಥೆಯನ್ನೂ ಕೂಡ ಮಾಡಲಿಲ್ಲ. ಯಾವುದೇ ಒಂದು ಸರಿಯಾದ ವ್ಯವಸ್ಥೆಯನ್ನು ನೀವು ಮಾಡಲಿಲ್ಲ. ರೈತರ ಬಗ್ಗೆ ಅಲಕ್ಷ್ಯತನವನ್ನು ತೋರಿದಿರಿ, ಕೆರೆಗಳಲ್ಲಿ ಹೂಳು ತೆಗೆಸತಕ್ಕಂಥ ಕೆಲಸವನ್ನೂ ಕೂಡ ಸರಿಯಾಗಿ ಮಾಡಲಿಲ್ಲ. ಸುಮ್ಮನೇ ಒಂದು ಜಿಲ್ಲೆಗೆ 5ಲಕ್ಷ 10ಲಕ್ಷ ಕೊಟ್ಟು ಬರಗಾಲವನ್ನು ಬಗೆಹರಿಸಲಿಕ್ಕೆ ಹೊರಟಿದ್ದು ನಿಮ್ಮ ಅಲಕ್ಷ್ಯತನ. ಈ ರೀತಿಯಲ್ಲಿ ಬರಗಾಲ ಪರಿಸ್ಥಿತಿಯನ್ನು ನಿವಾರಣೆ ಆಗುತ್ತದೆ ಎನ್ನುವುದು ಸರಿಯಾದುದಲ್ಲ. ಪ್ರಮುಖವಾದ ಕಾರ್ಯಗಳ ಬಗ್ಗೆ ಪ್ರಾಮಾಣಿಕವಾಗಿ ಸರ್ಕಾರ ಚಿಂತನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಚಿಂತನೆ ಮಾಡುವುದಿಲ್ಲವೆಂದು ಹೇಳುತ್ತಿದ್ದೀರಾ? ರೈತರ ಪರವಾಗಿ ಹೋರಾಟ ಮಾಡಿದಂಥ ಮಾನ್ಯ ಬೈರೇಗೌಡರಿದ್ದಾರೆ, ಮಾನ್ಯ ಜಾಲಪ್ಪನವರಿದ್ದಾರೆ ಮಣ್ಣಿನ ಮಗನಾದ ಮಾನ್ಯ ದೇವೇಗೌಡರಿದ್ದಾರೆ. ಇಷ್ಟೆಲ್ಲಾ ಜನರಿದ್ದರೂ ಅವರು ಚಿಂತನೆ ಮಾಡುವುದಿಲ್ಲವೆಂದು ಹೇಗೆ ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಜಾಲಪ್ಪನವರು ಮತ್ತು ಬೈರೇಗೌಡರು ಇವತ್ತು

ಬಾಯಿಕಳೆದುಕೊಂಡಿದ್ದಾರೆ. ಅವರು ಈ ಕಡೆ ಇದ್ದಾಗ ಬಹಳ ಜೋರಾಗಿ ಕೂಗಾಡುತ್ತಿದ್ದರು. ಇನ್ನು ಮಣ್ಣಿನ ಮಗ ಎಂದು ಯಾರನ್ನು ನಾವು ಕರೆಯುತ್ತಿದ್ದೇವೋ ಅವರು ಈಗ ''ವಾಯುಪುತ್ರ'' ಆಗಿದ್ದಾರೆ. ಏಕೆಂದರೆ ಅವರು ಯಾವಾಗಲೂ ಹೆಲಿಕ್ಯಾಪ್ಟರ್‌ನಲ್ಲೇ ಹಾರಾಡುತ್ತಿದ್ದಾರೆ. ವಾಯು ಪುತ್ರನಿಗೂ ಮಣ್ಣಿನ ಮಗನಿಗೂ ಏನೇನೂ ಸಂಬಂಧವೇ ಇಲ್ಲದಂತಾಗಿದೆ. ಇನ್ನು ಮುಂದೆ ನಿಮ್ಮ ಮುಖಂಡರನ್ನು, ನಿಮ್ಮ ನಾಯಕರನ್ನು ಮಣ್ಣಿನ ಮಗ ಎಂದು ಕರೆಯುವುದನ್ನು ನಾವು ಹಿಂತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಅವರು ವಾಯುಪುತ್ರ ಗಾಳಿ ಪುತ್ರ ಎಂದು ಕರೆಯುತ್ತೇವೆ. ಈ ನಾಮಕರಣವನ್ನು ನಾನೂ ಮತ್ತು ಮಾನ್ಯ ಖರ್ಗೆಯವರೂ ಸೇರಿ ಗೌರವಯುತವಾಗಿ ಹೆಸರಿಡುತ್ತಿದ್ದೇವೆ. ಇದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ತಾವು ಸ್ವೀಕಾರ ಮಾಡುತ್ತೀರೆಂದು ಅಂದುಕೊಂಡಿದ್ದೇವೆ.

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಮಣ್ಣಿನ ಮಗ ಎಂಬುದನ್ನು ಬಿಟ್ಟು ವಾಯುಪುತ್ರ ಎಂದು ಕರೆಯುತ್ತೇವೆಂದು ಹೇಳುತ್ತಿದ್ದೀರಿ. ವಾಯುಪುತ್ರ ಎಂದರೆ ಆಂಜನೇಯ. ಆತ ಸಂಜೀವಿನಿ ಪರ್ವತವನ್ನೆ ಹೊತ್ತು ತಂದ ದೇವರು. ಆದೇವರ ಹೆಸರನ್ನು ಇಡುತ್ತಿರುವುದು ಇನ್ನೂ ಸಂತೋಷವಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ಆ ಆಂಜನೇಯ ಬೇರೆ. ಆದರೆ ಈ ಆಂಜನೇಯ ನಾಟಕದ ಆಂಜನೇಯ.ಆ ಆಂಜನೇಯ ಪುಷ್ಪಕ ವಿಮಾನದಲ್ಲಿ ಹೋಗುತ್ತಿದ್ದ ಆದರೆ ಈ ಆಂಜನೇಯ ಹೆಲಿಕ್ಯಾಪ್ಟರ್‌ನಲ್ಲಿ ಹೋಗುತ್ತಿದ್ದಾರೆ. ಮಾನ್ಯ ಬೈರೇಗೌಡರಿಗೆ ಆತ್ಮ ಇದ್ದರೆ, ಹೃದಯ ಇದ್ದರೆ ಅವರು ಅವುಗಳನ್ನು ಶೋಧನೆ ಮಾಡಿಕೊಳ್ಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಅವರು ಹೊರದೇಶಕ್ಕೆ ಹೋಗಿದ್ದಾಗ ಆತ್ಮ ಮತ್ತು ಹೃದಯವನ್ನು ಅಲ್ಲೇ ಬಿಟ್ಟು ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಬೈರೇಗೌಡರ ಬಗ್ಗೆ ನನ್ನ ತಕರಾರು ಏನೂ ಇಲ್ಲ ಅವರ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೇನೆ. ನಾನು ಮಾನ್ಯ ಬೈರೇಗೌಡರಲ್ಲಿ ಒಂದು ಮಾತು ಕೇಳಬಯಸುತ್ತೇನೆ. ನೀವು ಮಾತನಾಡುವುದರಲ್ಲಿ ಏತಕ್ಕೆ ಹಿಂದೆ ಬಿದ್ದಿದ್ದೀರಿ? ಇತ್ತೀಚೆಗೆ ನೀವು ಎಲ್ಲೂ ಮಾತನಾಡುತ್ತಿಲ್ಲ. ನಿಮ್ಮ ಮುಖಂಡರಿಗೆ ಜೈ ಜೈ, ಎಂದು ಹೇಳಿಕೊಂಡಿರುವುದನ್ನು ನೋಡಿದರೆ ನೀವೇನು ಜಯ ವಿಜಯರೇ? ದಿನಬೆಳಗಾದರೆ ನೀವು ನಿಮ್ಮ ಮುಖ್ಯ ಮಂತ್ರಿಗಳನ್ನು ಹೊಗಳಿ, ಹೊಗಳಿ ಅವರನ್ನು ಆಕಾಶಕ್ಕೆ ಕಳುಹಿಸುತ್ತಿದ್ದೀರಿ. ದಯವಿಟ್ಟು ಇದನ್ನು ಮಾಡಬೇಡಿ. ನೀವು ಹೋಗುತ್ತಿರುವ ಮಾರ್ಗ ಸರಿಯಲ್ಲವೆಂದು ಹೇಳುವಂಥ ಶಕ್ತಿಯನ್ನು ನೀವು ಹೊಂದಿದ್ದೀರಿ? ನೀವು ಆ ಶಕ್ತಿಯನ್ನು ಹೊಂದಿದ್ದೀರಾ ಎಂಬುದನ್ನು ನಿಮ್ಮ ಎದೆಯನ್ನು ಮುಟ್ಟಿಕೊಂಡು ಹೇಳಿ. ನೀವು ಮೌನವಾಗಿರುವುದನ್ನು ನೋಡಿದರೆ ನೀವು ಆ ಶಕ್ತಿಯನ್ನು ಹೊಂದಿಲ್ಲವೆಂದು ಖಾತರಿ ಆಗುತ್ತದೆ. ಬಹುಶ: ನೀವು ಆ ಶಕ್ತಿಯನ್ನು ಕಳೆದುಕೊಂಡಿದ್ದೀರಿ. ಶಕ್ತಿಹೀನರಾಗಿದ್ದೀರಿ. ನಿಮ್ಮ ಮುಖಂಡರನ್ನು ಕಂಡರೆ ನಿಮಗೆ ಎಲ್ಲೂ ಇಲ್ಲದಂಥ ಭಯ, ಭಕ್ತಿ, ಪ್ರೀತಿ, ವಿಶ್ವಾಸ, ಅಭಿಮಾನ ಎಲ್ಲಾ ತೋರಿಸುತ್ತೀರಿ. ನೀವು ಕೈಕಟ್ಟಿಕೊಂಡು ನಿಂತುಕೊಳ್ಳತಕ್ಕ ದೃಶ್ಯವನ್ನು ನೋಡಿದರೆ ಎಂಥ ಪರಿಸ್ಥಿತಿ ಬಂತು ಎನಿಸುತ್ತದೆ. ಈ ಪ್ರಜಾ ಪ್ರಭುತ್ವದಲ್ಲಿ ಇಂಥ ಪರಿಸ್ಥಿತಿ ನಿರ್ಮಾಣ ಆಗಲೇಬಾರದು.

ಶ್ರೀ ಬಸವರಾಜ ರಾಯರೆಡ್ಡಿ:- ನಮಗೆ ನಾಯಕರಾದರೂ ಇದ್ದಾರೆ. ಆದರೆ ನಿಮಗೆ ನಾಯಕರೇ ಇಲ್ಲವಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಇದು ಒಬ್ಬ ನಾಯಕರನ್ನು ನೋಡತಕ್ಕ ಲಕ್ಷಣವೇ ? ಅವರು ಹೇಳಿದ್ದಕ್ಕೆಲ್ಲಾ ನೀವು ಕೈಮುಗಿದುಕೊಂಡು ಗಂಭೀರವಾಗಿ ನಿಂತುಕೊಂಡಿದ್ದೀರಿ ಆದರೆ ನೀವು ಮಾಡತಕ್ಕಂಥಾದ್ದು ಸರಿಯಲ್ಲವೆಂದು ಹೇಳತಕ್ಕ ಶಕ್ತಿ ನಿಮಗೆ ಇದೆಯೇ ? ನಾಗೇಗೌಡರೇ ನೀವು ಈ ಮಾತನ್ನು ಹೇಳುತ್ತೀರಾ? ಇಲ. ಮಾನ್ಯ ನಾಗೇಗೌಡರು ನಮ್ಮ ಕಡೆ ಇದ್ದಾಗ ಚೆನ್ನಾಗಿದ್ದರು. ವಿರೋಧ ಪಕ್ಷದಲ್ಲಿದ್ದಾಗ, ಕಾಂಗ್ರೆಸ್ ಪಕ್ಷದಲ್ಲಿದ್ದಾಗ ಅವರ ಧ್ವನಿ ಜೋರಾಗಿತ್ತು. ಆದರೆ ಇವತ್ತು ಅವರ ಧ್ವನಿ ಸಂಪೂರ್ಣವಾಗಿ ಹೋಗಿದೆ. ಕಿರುಗಾವಲಿನಲ್ಲಿ ಗೆದ್ದಮೇಲೆ ಅವರ ಧ್ವನಿ ಇನ್ನೂ ಹೋಗಿದೆ. ಇದನ್ನು ನೋಡಿ ನನಗೆ ಅವರ ಬಗ್ಗೆ ತುಂಬಾ ಅನುಕಂಪ ಇದೆ. ಈ ಮಾತನ್ನು ಕೇಳಿ ಅವರು ಮೌನವಾಗಿದ್ದಾರೆಂದರೆ ನನ್ನ ಮಾತನ್ನು ಅವರು ಸ್ವೀಕರಿಸಿದ್ದಾರೆಂದು ಅರ್ಥ. ಅವರ ಪರಿಸ್ಥಿತಿ ಆ ರೀತಿ ಆಗಿದೆ. ಇವತ್ತು ಅವರು ಚಿಂತಾಜನಕರಾಗಿದ್ದಾರೆ. ಅವರ ಪರವಾಗಿ ನಾವೇ ಮಾತನಾಡಬೇಕಾಗಿದೆ. ಬೇರೆ ಯಾರೂ ಕೂಡ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕೇವಲ ನಾಗೇಗೌಡರ ಬಗ್ಗೆ ಮಾತ್ರ ಅನುಕಂಪದ ಮಾತುಗಳನ್ನು ಹೇಳುತ್ತಿದ್ದೀರಿ ಅದೇ ಜಾಲಪ್ಪನವರ ಬಗ್ಗೆ ನಿಮಗೆ ಏತಕ್ಕೆ ಅನುಕಂಪವಿಲ್ಲ? ನೀವು ಈ ರಾಜ್ಯದ ಜನರಿಗೆ ಅನ್ಯಾಯ...

ಶ್ರೀ ವಾಟಾಳ್ ನಾಗರಾಜ್:- ನೀವು ಎಷ್ಟೇ ಹೇಳಿದರೂ ನಾನು ಜಾಲಪ್ಪನವರನ್ನು ಬೈಯುವುದಿಲ್ಲ. ಏನಾದರೂ ಮಾಡಿ ಜಾಲಪ್ಪನವರನ್ನು ಬೈಸಬೇಕೆಂದು ನೀವು ಪ್ರಯತ್ನ ಮಾಡುತ್ತಿದ್ದೀರಿ. ಈಗಲೇ ಜಾಲಪ್ಪನವರನ್ನು ನಾವು ಬೈದುಕೊಂಡು ಕುಳಿತುಕೊಳ್ಳುವುದು ಸರಿಯಲ್ಲ. ಅವರಿಗೂ ಒಂದು ಅವಕಾಶವನ್ನು ಕೊಡೋಣ. ಮಾನ್ಯ ಜಾಲಪ್ಪನವರು ಹಿಂದೆ ನಮ್ಮ ಕಡೆ ಇದ್ದಾಗ್ಗೆ ಮಾನ್ಯ ಶ್ರೀನಿವಾಸ್‌ರವರು ಕುಳಿತುಕೊಳ್ಳುತ್ತಿದ್ದ ಜಾಗದಲ್ಲಿ ಅಂದರೆ ಈಗ ಶ್ರೀಮತಿ ಪ್ರಮಿಳಾರವರು ಕುಳಿತುಕೊಳ್ಳುತ್ತಿರುವ ಜಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ಆಗ ಅವರಿಗೆ ಬಹಳ ಕಳೆ ಇತ್ತು. ಈಗ ಅದು ಹೋಗಿಬಿಟ್ಟಿದೆ. ಜಾಲಪ್ಪನವರೇ ತಾವೇ ಹೇಳಿ, ಆಗ ಪ್ರತಿಯೊಂದು ಸಂದರ್ಭದಲ್ಲೂ ಎದ್ದುನಿಂತು ಮಾತನಾಡುತ್ತಿದ್ದಿರಿ. ಸತ್ಯವನ್ನು ಹೇಳಿ ಯಾವುದನ್ನೂ ಮರೆಮಾಚಬೇಡಿ. ನಾನು ಇವತ್ತು ಸಚಿವನಾಗಿ ಇಂಥ ಒಂದು ಪರಿಸ್ಥಿತಿಗೆ ಸಿಕ್ಕಿಕೊಂಡು ಬಿಟ್ಟೆನಲ್ಲಾ ಎಂದು ಒಂದು ತೊಂದರೆಯಲ್ಲಿದ್ದೀರಿ.

ಶ್ರೀ ಆರ್.ಎಲ್.ಜಾಲಪ್ಪ:- ಅಲ್ಲೇನೋ ನಿಂತು ಮಾತನಾಡುತ್ತಿದ್ದೆ ಸರಿ. ಆದರೆ ಇಲ್ಲೂ ನಾನು ನಿಂತು ಮಾತನಾಡುವುದಕ್ಕೆ ಶುರು ಮಾಡಿದರೆ ನೀವೆಲ್ಲಾ ಸುಮ್ಮನಿರಬೇಕಾಗುತ್ತದೆ. ಈಗ ಮಾತನಾಡುವ ಅವಕಾಶ ನಿಮ್ಮದು, ಅದನ್ನು ಕೇಳುವ ಅವಕಾಶ ನಮ್ಮದು.

ಶ್ರೀ ವಾಟಾಳ್ ನಾಗರಾಜ್:- ಈಗ ನಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟು ಅವರು ಸುಮ್ಮನಿದ್ದಾರೆ, ಇರಲಿ. ಸಂತೋಷ. ಜಾಲಪ್ಪನವರ ಬಗ್ಗೆ ನನಗೆ ಗೌರವ ಇದೆ. ಯಾವ ತಕರಾರೂ ಇಲ್ಲ. ಅದೇ ರೀತಿ ಮಾನ್ಯ ಬೈರೇಗೌಡರ ಬಗ್ಗೆ ಕೂಡ ತಕರಾರಿಲ್ಲ. ಇದನ್ನು ಅನೇಕ ಸಾರಿ ಹೇಳಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರ ಬಗ್ಗೆ ತಕರಾರಿಲ್ಲ, ಇವರ ಬಗ್ಗೆ ತಕರಾರಿಲ್ಲ, ಎಂದು ಹೇಳುತ್ತೀರಲ್ಲಾ ಹಾಗಾದರೆ ಇನ್ನು ಯಾರ ಬಗ್ಗೆ ತಕರಾರು ಇದೆ? ಅದನ್ನಾದರೂ ಹೇಳಿ. ಇದು ನಮಗೆ ಸಂಕಟ ಪರಿಸ್ಥಿತಿ ಆಗಿದೆ. ನೀವು ನಮ್ಮಕಡೆ ಇದ್ದು ಅವರ ಬಗ್ಗೆ ತಕರಾರಿಲ್ಲ, ಇವರ ಬಗ್ಗೆ ತಕರಾರಿಲ್ಲ, ವಾಯು ಪುತ್ರನ ಬಗ್ಗೆ ತಕರಾರಿಲ್ಲ ಎಂದರೆ, ಇನ್ನು ಯಾರ ಬಗ್ಗೆ ನಿಮ್ಮ ತಕರಾರು? ಮತ್ತೆ ನಮ್ಮ ಬಗ್ಗೆಯೇ ನಿಮ್ಮ ತಕರಾರು? ನಮ್ಮದು ಈಗಾಗಲೇ ಮುಗಿದು ಹೋಗಿದೆಯಲ್ಲಾ.

ಶ್ರೀ ವಾಟಾಳ್ ನಾಗರಾಜ್:- ಇವರ ಬಗ್ಗೆ ನಾವು ತಕರಾರು ತೆಗೆದು ಏನು ಮಾಡೋಣ ಇವರು ಕೆಳಗೆ ಬಿದ್ದುಹೋಗಿದ್ದಾರೆ. ಇವರ ಬಗ್ಗೆ ನಮ್ಮ ತಕರಾರು ಇಲ್ಲವೇ ಇಲ್ಲ. ಇದನ್ನು ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು.

ಇನ್ನು ಎರಡನೆಯದು ಎಂದರೆ, ನಮ್ಮ ರಾಜ್ಯ ಸರ್ಕಾರದವರು ನನಗೆ ಗೊತ್ತಿರುವ ಮಟ್ಟಿಗೆ 3 ಸಾರಿ ಬರಗಾಲದ ಬಗ್ಗೆ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದನ್ನು ನೋಡಿದ್ದೇನೆ. ಬರಗಾಲ ಪರಿಸ್ಥಿತಿ ಬಂದಾಗ ಹಿಂದೆ ನಮ್ಮ ರಾಜ್ಯ ಸರ್ಕಾರ ಎಷ್ಟು ಕಷ್ಟದ ಪರಿಸ್ಥಿತಿಗೆ ಸಿಕ್ಕಿದೆ ಎಂಬ ಬಗ್ಗೆ ಹಿಂದಿನ ಮಾನ್ಯ ಆರ್ಥಿಕ ಮಂತ್ರಿಗಳಾದ ಮಾನ್ಯ ರಾಜಶೇಖರ ಮೂರ್ತಿಯವರು ಸುಮಾರು 300 ಕೋಟಿ ರೂಗಳನ್ನು ಕೊಡಬೇಕೆಂದು ಕೇಳಿಕೊಂಡರು. ಆದರೆ ಕೇಂದ್ರ ಸರ್ಕಾರದವರು ಇದರ ಬಗ್ಗೆ ಒಂದು ನಿಗದಿ ಮಾಡಿದ್ದಾರೆ. ಬರಗಾಲವಾಗಲಿ, ಅತಿ ವೃಷ್ಟಿಯಾಗಲಿ, ಅನಾವೃಷ್ಟಿ ಆಗಲಿ, ವರ್ಷಕ್ಕೆ ಇಂತಿಷ್ಟು ಕೊಡಬೇಕೆಂದು ಅವರು ನಿಗದಿ ಮಾಡಿಕೊಂಡಿದ್ದಾರೆ. ಅದನ್ನು ಬಿಟ್ಟು ಅವರು ಬೇರೆ ಹಣವನ್ನು ಕೊಡಲೇ ಇಲ್ಲ. ಇತ್ತೀಚೆಗೆ ನಮ್ಮ ರಾಜ್ಯ ಸರ್ಕಾರದವರು ಕೇಂದ್ರಸರ್ಕಾರಕ್ಕೆ ಒಂದು ಮನವಿಯನ್ನು ಬಹಳ ಸುಂದರವಾಗಿ ಮುದ್ರಣ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಆದರೆ ಇವತ್ತಿನವರೆಗೂ ಕೇಂದ್ರ ಸರ್ಕಾರ ಇವರ ಬಗ್ಗೆ ಗಮನವನ್ನು ಕೊಡಲೇ ಇಲ್ಲ. ಅಷ್ಟೇ ಅಲ್ಲ, ಈ ರಾಜ್ಯದಲ್ಲಿ ಉಂಟಾಗಿರುವಂಥ ಬರಗಾಲದ ಪರಿಸ್ಥಿತಿಯನ್ನು ನೋಡಲು ಕೇಂದ್ರ ಸರ್ಕಾರದಿಂದ ಯಾವ ಪ್ರತಿನಿಧಿಯೂ ಕೂಡ ಬರಲೇ ಇಲ್ಲ. ನಾನಾದರೂ ಹೇಳುತ್ತೇನೆ, ನಮ್ಮ ಕರ್ನಾಟಕವನ್ನು ಕೇಂದ್ರ ಸರ್ಕಾರ ಎಲ್ಲ ರೀತಿಯಿಂದಲೂ ಕಡೆಗಣಿಸಿದ್ದಾರೆ. ಅದೇ ಆಂಧ್ರ ಪ್ರದೇಶದಲ್ಲಿ ಈ ಪರಿಸ್ಥಿತಿ ಬಂದಿದ್ದರೆ ಮಾನ್ಯ ಪ್ರಧಾನ ಮಂತ್ರಿಗಳು ಹೇಳದೇ ಕೇಳದೇ ಬಂದಿರುತ್ತಿದ್ದರು. ಆಂಧ್ರದ ಉದ್ದಗಲಕ್ಕೂ ನೋಡಿಕೊಂಡು ಹೋಗುತ್ತಿದ್ದರು. ತಮಿಳ್ನಾಡಿಗೂ ಕೂಡ ಬಂದಿರುತ್ತಿದ್ದರು. ಆದರೆ ಇವತ್ತು ನಮ್ಮ ಕರ್ನಾಟಕವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ. ನಮ್ಮ ಸರ್ಕಾರದವರು ಮೇಲಿಂದಮೇಲೆ ಕೇಂದ್ರಕ್ಕೆ ಹೋಗಿ ಕೈಮುಗಿದು, ಕಾಡಿ ಬೇಡಿದರೂ ಕೂಡ ನಮ್ಮ ಕರ್ನಾಟಕವನ್ನು ಅವರು ಕಡೆಗಣಿಸಿದ್ದಾರೆ. ಆದ್ದರಿಂದ ನಾನಾದರೂ ಹೇಳುತ್ತೇನೆ. ಇಡೀ ಸದನದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಒಂದು ನಿರ್ಣಯವನ್ನು ಮಾಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ. ಬರಗಾಲದ ವಿಚಾರದಲ್ಲಿ ಕೇಂದ್ರ ಸರ್ಕಾರ ನಮ್ಮ ಕರ್ನಾಟಕ ರಾಜ್ಯವನ್ನು ಕಡೆಗಣಿಸಿದ್ದಾರೆಂದು ಒಂದು ಖಂಡನಾ ನಿರ್ಣಯವನ್ನು ಮಾಡೋಣ. ಕೇಂದ್ರ ಸರ್ಕಾರವು ಮೊದಲಿನಿಂದ ನಮಗೇನು ಮಾಡಿದೆ? ಹಿಂದೆ ನಾವು ಕಳುಹಿಸಿದಂಥ ಮನವಿಗಳನ್ನು ಯಾವರೀತಿ ಅನುಷ್ಠಾನಕ್ಕೆ ತಂದಿದ್ದಾರೆ? ಯಾವರೀತಿ ಒಪ್ಪಿದ್ದಾರೆ? ಯಾವರೀತಿ ಕಡೆಗಣಿಸಿದ್ದಾರೆ, ಈ ಎಲ್ಲ ವಿಚಾರಗಳನ್ನೂ ಸಮಗ್ರವಾಗಿ ಚರ್ಚೆಮಾಡಿ, ಕೇಂದ್ರ ಸರ್ಕಾರಕ್ಕೆ ನಾವೆಲ್ಲರೂ ಒಮ್ಮತದಿಂದ ಒಂದು ಖಂಡನಾ ನಿರ್ಣಯವನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡುತ್ತೇನೆ. ಇನ್ನು ಈ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಸದನದ ಮುಂದೆ ಮಂಡಿಸಬೇಕು. ಈಗ ಅವರು ಹೇಳಿರತಕ್ಕ ವಿಚಾರಗಳಿಗೂ, ಅವರು ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳಿಗೂ ಒಂದಕ್ಕೊಂದು ಸಂಬಂಧವೇ ಇಲ್ಲ. ಒಂದುಕಡೆ ಜಿಲ್ಲಾಪರಿಷತ್ತು, ಇನ್ನೊಂದು ಕಡೆ ತಾಲ್ಲೂಕು ಪಂಚಾಯತಿ, ಮತ್ತೊಂದು ಕಡೆ ಗ್ರಾಮ ಪಂಚಾಯತಿ ಬರಗಾಲ ಪರಿಸ್ಥಿತಿಯ ನಿವಾರಣೆಗಾಗಿ ಸಮಗ್ರವಾಗಿ ಕೆಲಸ ಮಾಡತಕ್ಕ ಏಜೆನ್ಸಿ ಯಾವುದು? ಇದಕ್ಕೆ ಯಾವುದಾದರೂ ಒಂದು ಸಂಸ್ಥೆ ಇರಬೇಕಲ್ಲಾ ಅದಕ್ಕೆ ಯಾರು ಹೊಣೆ? ಇದರಲ್ಲಿ ಒಂದಕ್ಕೊಂದಕ್ಕೆ ಕೊಂಡಿ ಇಲ್ಲ. ಜಿಲ್ಲಾ ಪರಿಷತ್ತಿಗೂ, ತಾಲ್ಲೂಕು ಪಂಚಾತಿಯಿಗೂ ಸಂಬಂಧವಿಲ್ಲ. ತಾಲ್ಲೂಕು ಪಂಚಾಯಿತಿಗೂ ಗ್ರಾಮ

ಪಂಚಾಯಿತಿಗೂ ಸಂಬಂಧವಿಲ್ಲ. ಈ ಹೊಂದಾಣಿಕೆ ಇಲ್ಲದ ಕಾರಣ ಬರಗಾಲ ಪರಿಸ್ಥಿತಿ ನಿವಾರಣಾ ಕೆಲಸಕ್ಕೆ ಸಂಪೂರ್ಣವಾಗಿ ಗ್ರಹಣ ಹಿಡಿದಿದೆ. ಸ್ವಲ್ಪವೂ ಪರಸ್ಪರ ಹೊಂದಾಣಿಕೆ ಇಲ್ಲ.

4. 10 ಪಿ.ಎಂ.

ಈ ಪರಿಸ್ಥಿತಿ ನಿರ್ಮಾಣವಾಗಿದೆ, ಕೆಲವು ಕಡೆ ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ತಾವು ತಾಲ್ಲೂಕಿನ ಯಾವ ಒಂದು ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ತಾಲ್ಲೂಕು ಪಂಚಾಯಿತಿ ಕ್ರಿಯಾ ಯೋಜನೆಯನ್ನು ರಚನೆ ಮಾಡತಕ್ಕಂಥದ್ದು, ಆ ತಾಲ್ಲೂಕು ಪಂಚಾಯ್ತಿಗೆ ಸಂಪೂರ್ಣವಾದ ಅಧಿಕಾರವಿದೆ. ಈ ಕ್ರಿಯಾ ಯೋಜನೆಯನ್ನು ಬದಲಾವಣೆ ಮಾಡತಕ್ಕಂತಹ ಅಧಿಕಾರ ತಾಲ್ಲೂಕಿನ ಕಾನೂನಿನಲ್ಲೆ ಇರಬೇಕು ಬೇರೆ ಯಾರಿಗೂ ಇಲ್ಲ. ಅದು ಇರುವುದು ಬರೀ ತಾಲ್ಲೂಕು ಪಂಚಾಯ್ತಿಗೆ. ಆದರೆ ಈಗ ಏನು ನಡೆಯುತ್ತಿದೆ ಎಂದರೆ, ತಾಲ್ಲೂಕು ಪಂಚಾಯಿತಿಗೆ ಕ್ರಿಯಾಯೋಜನೆ ಒಪ್ಪಿಯಾದಮೇಲೆ, ಜಿಲ್ಲಾ ಪಂಚಾಯಿತಿಯಲ್ಲಿ ಜಿಲ್ಲಾ ಪಂಚಾಯಿತಿಯ ಪ್ರಬಲವಾದಂತಹ ಸದಸ್ಯರುಗಳು ಆ ಯೋಜನೆಯನ್ನು ಬದಲಾವಣೆ ಮಾಡುತ್ತಿದ್ದಾರೆ. ಆ ಯೋಜನೆಯನ್ನು ಕಡೆಗಣಿಸುತ್ತಿದ್ದಾರೆ. ಈ ಪರಿಸ್ಥಿತಿಯನ್ನು ನೋಡಿದರೆ ಒಂದು ಕಡೆ ತಾಲ್ಲೂಕು ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಡಬೇಕೆಂದು ಹೇಳುತ್ತೀರಿ,ಮತ್ತೊಂದು ಕಡೆ ಕ್ರಿಯಾ ಯೋಜನೆ ಮಾಡಿದಂತಹ, ಕಾನೂನು ಬದ್ಧವಾದ ಕ್ರಿಯಾ ಯೋಜನೆಯನ್ನು ಕಡೆಗಣಿಸಿ ಕೆಲಸ ಮಾಡುವಂತಹ ವ್ಯವಸ್ಥೆ ನಡೆದಿದೆ. ಒಂದೊಂದು ತಾಲ್ಲೂಕು ಪಂಚಾಯಿತಿಯಾಗಲಿ, ಜಿಲ್ಲಾ ಪಂಚಾಯಿತಿಯಾಗಲಿ, ಗ್ರಾಮ ಪಂಚಾಯಿತಿಯಾಗಲಿ ಒಂದಕ್ಕೊಂದು ಸಂಬಂಧವಿಲ್ಲದೆ ಅಧಿಕಾರಿಗಳು ಇವತ್ತು ಯಾರ ಮಾತನ್ನು ಕೇಳದೇ ತಾಲ್ಲೂಕು ಪಂಚಾಯಿತಿಸದಸ್ಯರ ಮಾತನ್ನು ಕೇಳಬೇಕೇ, ತಾಲ್ಲೂಕು ಅಧ್ಯಕ್ಷರ ಮಾತನ್ನು ಕೇಳಬೇಕೆ? ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಮಾತನ್ನು ಕೇಳಬೇಕೆ? ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಮಾತನ್ನು ಕೇಳಬೇಕೆ ಶಾಸಕರ ಮಾತನ್ನು ಕೇಳಬೇಕೆ? ಒಂದು ತಾಲ್ಲೂಕಿನಲ್ಲಿ ಒಬ್ಬ ಅಧಿಕಾರಿ ಎಷ್ಟು ಜನರ ಮಾತನ್ನು ಕೇಳಬೇಕು? ಅವರು ಬಹಳ ಗೊಂದಲದಲ್ಲಿದ್ದಾರೆ, ಒಂದು ಸೂತ್ರವಿಲ್ಲ, ವ್ಯವಸ್ಥೆ ಇಲ್ಲ. ಒಂದು ತಾಲ್ಲೂಕು ಪಂಚಾಯಿತಿಯಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯನ್ನು ಮಾಡಿದ್ದೀರಿ, ಒಬ್ಬ ಕಾರ್ಯನಿರ್ವಾಹಕ ಅಧಿಕಾರಿ ಎಂದು ಹೊಸದಾಗಿ ಮಾಡಿದ್ದೀರಿ. ಇಬ್ಬರಿಗೂ ಒಂದೇ ಜೀಪು ಮುಂದೆ ಅವರು ಕುಳಿತು ಕೊಳ್ಳಬೇಕು ಹಿಂದೆ ಇವರು ಕುಳಿತುಕೊಳ್ಳಬೇಕು. ಯಾವ ಘಳಿಗೆಯಲ್ಲಿ ಆ ಜೀಪನ್ನು ತೆಗೆದುಕೊಂಡು ಹೋಗಬೇಕು. ಯಾವ ಘಳಿಗೆಯಲ್ಲಿ ಕೆಲಸಕ್ಕೆ ಹೋಗಬೇಕು. ಅವರ ಕಾರ್ಯಾಲಯ ಯಾವುದು, ಇವರ ಕಾರ್ಯಾಲಯ ಯಾವುದು ಇದು ಯಾವುದು ನಿರ್ಧಾರವಾಗಿಲ್ಲ. ಈ ತಕ್ಷಣದವರೆಗೆ ಇದು ಯಾವುದು ನಿರ್ಧಾರವಾಗಿಲ್ಲ. ನೀವು ಈ ಅವ್ಯವಸ್ಥೆಯ ಪರಮಾವಧಿಯಲ್ಲಿ ತಾಲ್ಲೂಕು ಪಂಚಾಯಿತಿಯನ್ನು ಇಟ್ಟಿದ್ದೀರಿ. ಅಧಿಕಾರಿಗಳು ಅತ್ಯಂತ ದಿಕ್ಕು ತಪ್ಪಿದ್ದಾರೆ. ಎಲ್ಲಿ ಯಾರ ಮಾತನ್ನು ಕೇಳಬೇಕು ಎನ್ನುವಂತಹ ಅನಿಶ್ಚಿತ ಪರಿಸ್ಥಿತಿ ನಿರ್ಮಾಣವಾಗಿದೆ. ಇದುವರೆಗೂ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ, ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರಿಗೆ ಎಷ್ಟು ವರ್ಷ ಇವರಿಗೆ ಅವಧಿ ಎಂಬುದು ಈ ತಕ್ಷಣದವರಿಗೂ ನಿಗಧಿಯಾಗಿಲ್ಲ. ಇದು ಗೌರವವನ್ನು ತರತಕ್ಕದ್ದಲ್ಲ. ತಾಲ್ಲೂಕು ಪಂಚಾಯಿತಿ ರಚನೆಯಾಗಿ ಚುನಾವಣೆಯಾಗಿ, ಅಧ್ಯಕ್ಷರ ಆಯ್ಕೆಯಾಗಿ, ಉಪಾಧ್ಯಕ್ಷರು ಆಯ್ಕೆಯಾಗಿದ್ದು ಅತನ ಅಧಿಕಾರ ಒಂದು ವರ್ಷ ಇರಬೇಕೇ, ಒಂದೂವರೆ ವರ್ಷವಿರಬೇಕೇ ಎಂಬುದು ಇವತ್ತಿನವರೆಗೂ ನಿರ್ಧಾರವಾಗಿಲ್ಲ. ಈ ಪರಿಸ್ಥಿತಿಯಲ್ಲಿ ನಾವು ಅತ್ಯಂತ ಗಂಭೀರವಾದಂತಹ ಪರಿಸ್ಥಿತಿಯಲ್ಲಿದ್ದೇವೆ. ಹಿಂದೆ ಒಂದು ಸಾರಿ ಕೃಷ್ಣ

ಸ್ವಾಮಿ ವರದಿ ಬರುತ್ತದೆಂದು ತಾವು ಹೇಳಿದ್ದೀರಿ, ಈಗ ಆ ಕೃಷ್ಣಸ್ವಾಮಿಯನ್ನು ತಾವು ಬಿಟ್ಟಿರಿ. ಇನ್ನು ಯಾರು ವರದಿಯನ್ನು ಕೊಡುವವರು? ಆ ವರದಿಯು ಯಾವಾಗ ಬರುತ್ತದೆ.? ಆ ವರದಿಯ ವ್ಯವಸ್ಥೆ ಏನು? ಆ ವರದಿಯಿಂದ ಸರ್ಕಾರಕ್ಕೆ ಏನಾಯಿತು? ಯಾವುದು ಗೊತ್ತಿಲ್ಲ ಸ್ವಾಮಿ. ಸ್ವಲ್ಪ ಹೆಚ್ಚು ಕಡಿಮೆ ಚುನಾವಣೆ ನಡೆದು ಸುಮಾರು 5 ತಿಂಗಳು ಆದರೂ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಆಯ್ಕೆಯಾಗಿದ್ದಾರೆ, ಅವರ ಅವಧಿ ಎಷ್ಟು ಎಂದು ಈ ಕ್ಷಣದವರೆಗೂ ನಿಗದಿಯಾಗಿಲ್ಲ. ಇದು ಎಲ್ಲಿಯಾದರೂ ಉಂಟೇ, ತಾವು ಎಲ್ಲಿಯಾದರೂ ಹೇಳಿದ್ದರೆ ಎಲ್ಲೂ ಕಾಣಲಿಲ್ಲ. ಇದಕ್ಕೆ ಸರ್ಕಾರದ ಆಡಳಿದ ಯಂತ್ರ ಚೆನ್ನಾಗಿದೆಯೇ, ಆಡಳಿತ ಯಂತ್ರ ಚೆನ್ನಾಗಿ ನಡೆಯುತ್ತಿದೆಯೇ? ಸರ್ಕಾರದ ಆಡಳಿತ ಇದೆಯೇ ಆಡಳಿತ ಇದ್ದರೆ ಸ್ಪಷ್ಟವಾಗಿ ಹೇಳಬೇಕು ಆಡಳಿತ ಪಕ್ಷದವರು, ಈ ಚುನಾಯಿತ ಅಧ್ಯಕ್ಷರು, ಉಪಾಧ್ಯಕ್ಷರುಗಳಿಗೆ ಎಷ್ಟು ಅವಧಿ ಇದರ ವ್ಯವಸ್ಥೆ ಯಾವುದನ್ನು ಹೇಳಿಲ್ಲ. ಸುಮ್ಮನೆ ಕೆಲವು ಕಡೆ ಹೇಳುತ್ತೇನೆ, ಅಧ್ಯಕ್ಷರುಗಳಿಗೆ ಕಾರ್ಯಾಲಯಗಳಿಲ್ಲ, ಕಾರ್ಯನಿರ್ವಾಹಕ ಅಧಿಕಾರಿ ಎಲ್ಲಿ ಕುಳಿತುಕೊಳ್ಳಬೇಕು ಎಂಬ ವ್ಯವಸ್ಥೆ ಇಲ್ಲ. ಕ್ಷೇತ್ರಾಭಿವೃದ್ಧಿ ಅಧಿಕಾರಿಯು ಎಲ್ಲಿರಬೇಕೆಂದು ವ್ಯವಸ್ಥೆ ಇಲ್ಲ. ತಾಲ್ಲೂಕು ಪಂಚಾಯಿತಿಯಲ್ಲಿ ಏನು ನಡೆಯಬೇಕು ಎಂಬ ವ್ಯವಸ್ಥೆ ಇಲ್ಲ. ಬರೀ ಅವ್ಯವಸ್ಥೆಯಾಗಿ ನಡೆಯುತ್ತಿದೆ. ಶಾಸಕರುಗಳು ಒಂದು ಕಡೆ, ಶಾಸಕರನ್ನು ಕಡೆಗಣಿಸಿ ಕಟ್ಟಕಡೆಯ ವ್ಯಕ್ತಿಗಳನ್ನಾಗಿ ಮಾಡಿದ್ದಾರೆ. ಅದನ್ನು ನಾಳೆ ನಾನು 20 ಅಂಶದ ಕಾರ್ಯಕ್ರಮ ಎಂದು ಏನು ಮಾಡಿದ್ದಾರೆ, ಈ 20 ಅಂಶಗಳ ಕಾರ್ಯಕ್ಕಮದ ಬಗ್ಗೆ ನಾನು ಒಂದು ಸ್ಪಷ್ಟವಾಗಿ ಈ ಸದನದ ಮುಂದೆ ಹೇಳುತ್ತೇನೆ. ನಮ್ಮ ಶಾಸಕರು ಯಾರ‍್ಯಾರು 20 ಅಂಶದ ಕಾರ್ಯಕ್ರಮದಲ್ಲಿ ಇರಬೇಕೆಂದು ಹೇಳುತ್ತೇನೆ. ಅವರ ಪ್ರೀತಿ ವಿಶ್ವಾಸವಿರಲಿ ಆ ಬಗ್ಗೆ ಸುದೀರ್ಘವಾಗಿ ನಾನು ನಾಳೆ ಹೇಳುತ್ತೇನೆ. ನಾಳೆ ಅದನ್ನು ಶೂನ್ಯ ವೇಳೆಯಲ್ಲಿ ತರಬೇಕೆಂದು ಮಾಡಿದ್ದೇನೆ. ತಮಗೆ ಹೇಳುತ್ತೇನೆ, ಅಧಿಕಾರ ವಿಕೇಂದ್ರಿಕರಣವೆಂದು ಹೇಳಿ ಈ ರೀತಿಯಾದಂತಹ ಕಾರ್ಯಕ್ರಮವನ್ನು ಮಾಡಬಾರದು, ಒಂದು ರೀತಿಯಲ್ಲಿ ಅಗೌರವ. ತಾಲ್ಲೂಕು ಪಂಚಾಯಿತಿಯ ಸಭೆಯಲ್ಲಿ ಈ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ಅಲ್ಲಿಗೆ ಹೋಗುವ ಹಾಗಿಲ್ಲ. ನಮ್ಮ ವ್ಯವಸ್ಥೆಯಲ್ಲಿಲ್ಲ. ಆದರೆ ಶಾಸಕರುಗಳು ಹೋಗಬಹುದು. ಆದರೆ ಶಾಸಕರು ಎಲ್ಲಿ ಕುಳಿತುಕೊಳ್ಳಬೇಕೆಂದು ಇನ್ನು ನಿಗದಿಯಾಗಿಲ್ಲ. ಸ್ಥಳ ಎಲ್ಲಿ ಎಂದು ನಿಗದಿಯಾಗಿಲ್ಲ. ಇದು ಸ್ಪಷ್ಟವಾಗಬೇಕು. ಇದು ಆಗಲಿಲ್ಲವೆಂದರೆ ನಾನು ಆಗಲೇ ಹೇಳಿದ್ದೇನೆ. ಶಾಸಕರು ಕುಳಿತುಕೊಳ್ಳುವಂತಹ ಸ್ಥಳ ಎಲ್ಲಿ ಎಂದು ಅದನ್ನು ನಿಗದಿಪಡಿಸಲಿಲ್ಲವೆಂದು ಹೇಳಿದರೆ ನಾವು ಅರಳಿ ಮರದ ಕೆಳಗೆ ಶಾಸಕರ ಕಾರ್ಯಾಲಯವನ್ನು ಪ್ರಾರಂಭಿಸುತ್ತೇವೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಈ ವರೆಗೆ ನನ್ನ ಎಚ್ಚರಿಕೆಗೆ ಸರ್ಕಾರದಿಂದ ಮಾನ್ಯತೆ ದೊರಕಿಲ್ಲ. ಆದ್ದರಿಂದ ಮುಂದಿನ ಕ್ರಿಯೆ ಏನು ಉಳಿದಿರತಕ್ಕದ್ದು ಈ ಬಗ್ಗೆ ನಾನು ನಾಳೆ ಸ್ಪಷ್ಟವಾದ ನೀತಿಯನ್ನು ಮಾಡುತ್ತೇನೆಂದು ಹೇಳಿ ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಮತ್ತೊಮ್ಮೆ ಹೇಳುತ್ತೇನೆ ಕಂದಾಯ ಸಚಿವರಿಗೆ ಹೇಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್:-ಮಾನ್ಯ ಅಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಒಂದು ಪಂಚಾಯಿತಿ ಸಿಸ್ಟಂ ಎಂದು ತೆಗೆದುಕೊಂಡು ಬಂದು ಸುಮಾರು 6 ತಿಂಗಳಾಯಿತು.

(ಗೊಂದಲ)

ಸದಸ್ಯರುಗಳು ಆಯ್ಕೆಯಾಗಿ 6 ತಿಂಗಳಾಗಿದೆ. ಈಗ ಬರಗಾಲ ಬಂದಿದೆ. ಸದಸ್ಯರಿಗೆ ಏನು ಮಾಡಬೇಕು ಎಂದು ಗೊತ್ತಿಲ್ಲ. ಈಗ ನನ್ನ ಕ್ಷೇತ್ರದ ಬಗ್ಗೆಯೇ ಹೇಳುತ್ತಿದ್ದೇನೆ. 6 ತಿಂಗಳಿಂದ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹಾಕಿಲ್ಲ. ಇವರು ಚುನಾವಣೆಯನ್ನು ಮಾಡಬೇಕಾಗಿತ್ತೆ ವಿನಃ

ಮುಂದಕ್ಕೆ ಏನು ಮಾಡುವುದು ಬೇಕಾಗಿಲ್ಲ. ಈ ಪರಿಸ್ಥಿತಿಯನ್ನು ತಂದಿದ್ದಾರೆ. ಇವತ್ತು ಬರಗಾಲವಾಗಿರುವಂತಹ ನಮ್ಮ ವೀರಾಜಪೇಟೆ ಕ್ಷೇತ್ರವೇನಿದೆ ಅಲ್ಲಿ ಮೂರು ದಿವಸಗಳಿಂದ ಮಳೆ ಬೀಳುತ್ತಿರಬಹುದು, ಅದು ಬೇರೆ ವಿಷಯ. ಆ ನೀರಿನಿಂದ ಏನು ನಮ್ಮ ಬೆಳೆ ಉತ್ತಮವಾಗಿ ಬರುವುದಿಲ್ಲ. ಆದರೆ 6 ತಿಂಗಳುಗಳ ಹಿಂದೆ ಆಯ್ಕೆಯಾದಂತಹ ಪ್ರತಿನಿಧಿಗಳು ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿಲ್ಲ. ಒಂದು ಸಭೆಯನ್ನು ಮಾಡಬೇಕು ಎಂದರೆ ಕಾರ್ಯನಿರ್ವಾಹಕ ಅಧಿಕಾರಿ ಬೇಕು ಎಂದು ಹೇಳುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿಯನ್ನು 6 ತಿಂಗಳುಗಳಿಂದ ಹಾಕಿಲ್ಲ ಅವರುಗಳು ಏನು ಮಾಡಬೇಕು? ಸ್ವಾಮಿ.

ಉಪಾಧ್ಯಕ್ಷರು:- ಈಗ ಮಾತನಾಡುತ್ತಿರುವುದು ಬರಗಾಲದ ಬಗ್ಗೆ, ನಾಳೆ ಅದರ ಬಗ್ಗೆ ಮಾತನಾಡಿ.

ಶ್ರೀ ಎಚ್.ಡಿ.ಬಸವರಾಜ್:-ಈ ಸಂದರ್ಭದಲ್ಲಿ 6 ತಿಂಗಳುಗಳಿಂದ ಕಾರ್ಯನಿರ್ವಾಹಕ ಅಧಿಕಾರಿಯನ್ನು ಹಾಕಿಲ್ಲವೆಂದು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಯಾಕೆಂದರೆ ಬರಗಾಲದ ಬಗ್ಗೆ ಆ ಜನ ಪ್ರತಿನಿಧಿಗಳಿಗೆ ಎಷ್ಟು ಕಾಳಜಿ ಇದೆ ಎಂದರೆ ಏನು ಕೆಲಸವನ್ನು ಮಾಡಬೇಕಾದರೂ ಒಂದು ಸಭೆಯನ್ನು ನಡೆಸಬೇಕು ಎಂದರೆ ಕಾರ್ಯ ನಿರ್ವಾಹಕ ಅಧಿಕಾರಿಗಳು ಬೇಕು ಎಂದು ಹೇಳುತ್ತಿದ್ದಾರೆ. ಆ ರೀತಿಯಾಗಿ ವೀರಾಜಪೇಟೆಯಲ್ಲಿ 6 ತಿಂಗಳುಗಳಿಂದ ಒಂದು ಸಭೆಯೂ ಕೂಡ ನಡೆದಿಲ್ಲ. ಈಗ ಯಾವುದೇ ಜನೋಪಯೋಗಿ ಕೆಲಸ ನಡೆಯಬೇಕಾದರೆ ಒಂದು ಸಭೆ ರೆಜಲ್ಯೂಷನ್ ಪಾಸ್ ಮಾಡಿಕೊಂಡು ಬನ್ನಿ ಎಂದು ಹೇಳುತ್ತಾರೆ. ಒಂದು ರೆಜಲ್ಯೂಷನ್ ಪಾಸ್ ಮಾಡಬೇಕಾದರೆ, ಒಬ್ಬ ಕಾರ್ಯನಿರ್ವಾಹಕ ಅಧಿಕಾರಿ ಬೇಕು ಎಂದು ಹೇಳುತ್ತಾರೆ. ಈ ತರಹ ವ್ಯವಸ್ಥೆ ಇರುವಾಗ ಆ ಚುನಾವಣೆಯನ್ನು ನಡೆಸಿ, ತಾಲ್ಲೂಕು ಪಂಚಾಯಿತಿಯ ವ್ಯವಸ್ಥೆಯನ್ನು ತೆಗೆದುಕೊಂಡು ಬಂದು ಏನು ಪ್ರಯೋಜನ? ಏನು ಸಾಧನೆ ಮಾಡಿದ ಹಾಗೆ ಆಯಿತು ಸ್ವಾಮಿ. ನಾವು ವಿಕೇಂದ್ರಿಕರಣ ಮಾಡಿ ಜನಗಳ ಕೈಯಲ್ಲಿಯೇ ಸರ್ಕಾರವನ್ನು ಕೊಟ್ಟಿದ್ದೇವೆ, ಗ್ರಾಮಾಂತರದಲ್ಲಿ ಅವರೇ ಆಡಳಿತ ಮಾಡಿಕೊಳ್ಳಬಹುದು ಎಂದು ಹೇಳುತ್ತಿದ್ದಾರೆ. ಈ ವ್ಯವಸ್ಥೆಯಲ್ಲಿ ಏನಾಗಿದೆ, ಯಾವುದೋ ರೀತಿಯಲ್ಲಿ ಮಧ್ಯದಲ್ಲಿ ತೆಗೆದುಕೊಂಡು ಬಂದು ಅಧಿಕಾರವನ್ನು ಕೊಟ್ಟು ಕೊಡದ ಹಾಗೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಈ ವ್ಯವಸ್ಥೆ ಬರಗಾಲದ ಬಗ್ಗೆ ಕಾರ್ಯಕ್ರಮವನ್ನು ಮಾಡುವವರು ಯಾರು? ತಾಲ್ಲೂಕು ಪಂಚಾಯಿತಿಯೇ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಈ ವ್ಯವಸ್ಥೆಯೇ ಸರಿಇಲ್ಲ ಅಲ್ಲಿಯ ಅಧಿಕಾರಿಗಳು ಯಾವ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂಬುದು ನಿರ್ಣಯವಾಗಿಲ್ಲ ಆದ್ದರಿಂದ ನಾನು ಕಂದಾಯ ಸಚಿವರಿಗೆ ಮನವಿಯನ್ನು ಮಾಡುತ್ತಿದ್ದೇನೆ. ಇದನ್ನು ಒಂದು ಛಲವೆಂದು ತೆಗೆದುಕೊಂಡು ಕೇಂದ್ರ ಸರ್ಕಾರದವರು ಯಾವ ರೀತಿಯಲ್ಲಿ ನಮ್ಮನ್ನು ಕಡೆಗಣಿಸುತ್ತಿದ್ದಾರೆ ಅದರ ಬಗ್ಗೆ ನಿರ್ಣಯವನ್ನು ಮಾಡಬೇಕು ಎನ್ನುವುದು ನನ್ನ ಸ್ಪಷ್ಟವಾದಂಥ ನಿಲುವು. ತಮಗೆ ಹೇಳುವುದಾದರೆ ಅಧ್ಯಕ್ಷರೇ, ನನ್ನ ಕ್ಷೇತ್ರ, ನನ್ನ ತಾಲ್ಲೂಕು ಚಾಮರಾಜನಗರ ತಾಲ್ಲೂಕಿನಲ್ಲಿ ಕನಿಷ್ಠ 10 ಕೋಟಿ ರೂ ಬೆಳೆ ಈ ಬರಗಾಲದಲ್ಲಿ ನಷ್ಟವಾಗಿದೆ. ನಾನಾ ರೀತಿಯಲ್ಲಿ ಇವತ್ತು ಸಹ ಅವರುಗಳು ಬಹಳ ತೊಂದರೆಯಲ್ಲಿದ್ದಾರೆ. ಅವರನ್ನು ನೋಡತಕ್ಕಂತಹ, ಅವರಿಗೆ ಸಹಾಯ ಮಾಡತಕ್ಕಂತಹ ವ್ಯವಸ್ಥೆಯಾಗಲೀ, ಸಹಾಯ ಮಾಡತಕ್ಕಂಥದ್ದು ಆಗಲಿ ಇಲ್ಲ. ಕೆರೆಯಲ್ಲಿ ನೀರು ಇಲ್ಲ. ರಸ್ತೆಗಳು ರಿಪೇರಿಯಾಗಿಲ್ಲ. ನೀರು ಇಲ್ಲ, ನನ್ನ ತಾಲ್ಲೂಕಿನಲ್ಲಿ ಇಂಥ ಭೀಕರವಾದಂತಹ

ಪರಿಸ್ಥಿತಿ ನಿರ್ಮಾಣವಾಗಿದೆ. ಕುಡಿಯತಕ್ಕಂತಹ ನೀರಿಲ್ಲ. ಗರಿಷ್ಟ ಇನ್ನು 100 ಕೊಳವೆ ಬಾವಿಗಳನ್ನಾದರೂ ನನ್ನ ಕ್ಷೇತ್ರಕ್ಕೆ ಕೊಡಬೇಕು. ನನ್ನ ಕ್ಷೇತ್ರ ಗಡಿ ಪ್ರದೇಶ, ಹಿಂದುಳಿದಿರತಕ್ಕಂತಹ ಪ್ರದೇಶ, ಈ ಪ್ರದೇಶದ ಬೆಳವಣಿಗೆ ಬಗ್ಗೆ ನಾನು ಯಾಕೆ ಹೇಳುತ್ತೇನೆಂದರೆ ನನ್ನ ಕ್ಷೇತ್ರವೇ ಹೀಗೆ ಇರಬೇಕಾದರೆ, ಕರ್ನಾಟಕದ 125 ತಾಲ್ಲೂಕುಗಳಲ್ಲಿ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ತಮ್ಮ ಕಾರ್ಯಕ್ರಮವು ಪ್ರಾಮಾಣಿಕ ಚಿಂತನೆಯಿಂದಾಗಬೇಕು ಎನ್ನತಕ್ಕಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎ.ಜಿ. ಪಾಟೀಲ್ (ಸಂಕೇಶ್ವರ):- ಮಾನ್ಯ ಅಧ್ಯಕ್ಷರೆ, ನನಗೆ ಬರಗಾಲದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಪ್ರಪ್ರಥಮವಾಗಿ ಧನ್ಯವಾದಗಳನ್ನು ಸಲ್ಲಿಸುತ್ತಾ, ಇಂದು ಇಡೀ ರಾಷ್ಟ್ರದಲ್ಲಿ ಬರಪೀಡಿತ ಪ್ರದೇಶ 4 ಕೋಟಿ 97 ಲಕ್ಷ ಹೆಕ್ಟೇರ್ ಇದೆ: ಅದರಲ್ಲೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಕೋಟಿ 3 ಲಕ್ಷ ಹೆಕ್ಟೇರ್ ಇದೆ. ಅಂದರೆ ಅಂದಾಜು ಇಡೀ ರಾಷ್ಟ್ರದ 23 ಪರ್ಸೆಂಟ್ ನಮ್ಮ ರಾಜ್ಯದಲ್ಲಿ ಬರಗಾಲ ಪ್ರದೇಶಗಳನ್ನು ನಾವು ಕಾಣುತ್ತಿದ್ದೇವೆ. ಇಡೀ ರಾಷ್ಟ್ರದಲ್ಲಿ ಬರಪೀಡಿತ ಪ್ರದೇಶದ ಜನಸಂಖ್ಯೆ 4 ಕೋಟಿ 80 ಲಕ್ಷ: ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಒಂದು ಕೋಟಿ 15 ಲಕ್ಷ. ಅಂದರೆ ಅಂದಾಜು 25 ಪರ್ಸೆಂಟ್. ಈ ಬರಗಾಲದ ಬವಣೆಯಿಂದ ಜನತೆ ತತ್ತರಿಸುತ್ತಿದೆ. ಇವತ್ತು ನಾವು ಕಾಣುತ್ತಿರುವುದು ಮಳೆಯ ಅಭಾವ; ನೀರಿನ ಅಭಾವ. ಹಾಗೂ ಕೃಷಿ ಉತ್ಪನ್ನ ಮಾಡದೆ ಇರತಕ್ಕದ್ದು. ಇಂಥ ಅಭಾವವನ್ನು ಇವತ್ತು ನಾವು ಕಾಣುತ್ತಿದ್ದೇವೆ. ಏಕೆಂದರೆ ಸಕಾಲದಲ್ಲಿ ಮಳೆ ಬಾರದೆ ಇರುವುದರಿಂದ ಈ ಕೃಷಿ ಬಿತ್ತನೆ ತಡವಾದುದರಿಂದ ಇವತ್ತು ನಾವು ಯಾವುದೇ ಕೃಷಿ ಉತ್ಪನ್ನ ಬಾರದೆ ಇರತಕ್ಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಇದರಿಂದ ಜಲಾಶಯಗಳಲ್ಲಿ, ಹೈಡ್ರೋ ಎಲೆಕ್ಟ್ರಿಕ್ ಪ್ರದೇಶಗಳಲ್ಲಿ ನೀರು ತುಂಬದೆ ಇದ್ದುದರಿಂದ ವಿದ್ಯುತ್ ಅಭಾವವನ್ನು ಕಾಣುತ್ತಿದ್ದೇವೆ. ಸುಮಾರು ವರ್ಷಗಳ ಮಳೆಯ ಅಂಕಿ ಅಂಶಗಳನ್ನು ನೋಡಿದಾಗ ಇಡೀ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಪ್ರದೇಶಗಳು ಹೆಚ್ಚಿನ ಬರಗಾಲವನ್ನು ಅನುಭವಿಸುತ್ತಾ ಇರತಕ್ಕದ್ದು ತಮಗೆಲ್ಲರಿಗೂ ಗೊತ್ತಿರತಕ್ಕ ಸಂಗತಿ. ಅದರಲ್ಲೂ ವಿಶೇಷವಾಗಿ ಬಿಜಾಪುರ ಜಿಲ್ಲೆ ರಾಜ್ಯದಲ್ಲಿ ಹೆಚ್ಚಿನ ಬರವನ್ನು ಅನುಭವಿಸಿದಂತ ಜಿಲ್ಲೆ. ಈಗ ಮಾನ್ಯ ಕಂದಾಯ ಸಚಿವರು ಈ ಬರಗಾಲದ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಅಂಕಿ ಅಂಶಗಳನ್ನು ನೋಡಿದಾಗ ನನಗೆ ಬಹಳ ವಿಪರ್ಯಾಸ ಎನಿಸುತ್ತದೆ. ಏಕೆಂದರೆ ಬಿಜಾಪುರ ಜಿಲ್ಲೆ ಯಲ್ಲಿ ಕೇವಲ 4 ತಾಲ್ಲೂಕುಗಳು ಬರಗಾಲವನ್ನು ಅನುಭವಿಸುತ್ತಿರತಕ್ಕ ಸಂಗತಿಯನ್ನು ಹೇಳಿದ್ದೇನೆ. ಆದರೆ ನನ್ನ ತಿಳಿವಳಿಕೆ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಕನಿಷ್ಠ ಹತ್ತು ತಾಲ್ಲೂಕುಗಳು ಸಂಪೂರ್ಣವಾಗಿ ಬರದ ಅಭಾವವನ್ನು ಎದುರಿಸುತ್ತಿವೆ. ಕೆಲವು ಪ್ರದೇಶಗಳು ಇವತ್ತಿನವರೆಗೂ ಒಂದು ಹನಿ ಮಳೆಯನ್ನು ಕಂಡಿಲ್ಲ. ಅದು ಅಲ್ಲದೆ ಪ್ರತಿ ಜಿಲ್ಲೆಗೂ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ. ಅನೇಕ ಕಡೆ ನಾವು ಬರಗಾಲದ ಕೆಲಸವನ್ನು ಪ್ರಾರಂಭ ಮಾಡಿದ್ದೇವೆಂಬ ಹೇಳಿಕೆಯನ್ನು ನೋಡುತ್ತಿದ್ದೇವೆ. ಅಂಕಿಅಂಶಗಳು ಕೇವಲ ಕಾಗದ ಪತ್ರಗಳಲ್ಲಿ ಇವೆ ಎಂಬ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಇವತ್ತಿನವರೆಗೆ ನನ್ನ ಮತಕ್ಷೇತ್ರದಲ್ಲಿ ಕಂದಾಯ ಇಲಾಖೆ ಏನು ರಿಪೋರ್ಟ್ ಕಳುಹಿಸಿದ್ದಾರೆ, ಅತೀ ಬರಗಾಲವನ್ನು ಎದುರಿಸುವಂತ ಹಳ್ಳಿಗಳಲ್ಲಿ ಪ್ರಥಮ ಆದ್ಯತೆಯಲ್ಲಿ ಕೆಲಸ ಪ್ರಾರಂಭ ಮಾಡಬೇಕು, ಅಲ್ಲಿ ನೀರಿನ ಸಲುವಾಗಿ ಕೆಲಸ ಪ್ರಾರಂಭ ಮಾಡಬೇಕು, ಮೇವಿನ ಸಲುವಾಗಿ ವ್ಯವಸ್ಥೆ ಮಾಡಬೇಕೆಂದು ಏನು ರಿಪೋರ್ಟ್ ಕಳುಹಿಸಿದ್ದಾರೆ ಅಲ್ಲಿ ಇವತ್ತಿನವರೆಗೆ ಏನೂ ಕೆಲಸ ಪ್ರಾರಂಭವಾಗಿಲ್ಲ. ಇವತ್ತು ನಾವು 21 ನೇ ಶತಮಾನದ ಮಾತು

ಮಾತನಾಡುತ್ತೇವೆ. ಇವತ್ತಿಗೂ ನನ್ನ ಮತಕ್ಷೇತ್ರದಲ್ಲಿ ತಗಲಬಾಗಿ, ಅದಾವುಡಿ ಹಾಗು ಭದ್ರ ಗ್ರಾಮಗಳಿಗೆ ಕಳೆದ 4 ತಿಂಗಳಿಂದ ವಾಟರ್ ಟ್ಯಾಂಕ್‌ಗಳಿಂದ ನೀರು ಸರಬರಾಜಾಗುತ್ತಿದೆ. ಅಲ್ಲಿ ಖಾಯಂ ಆಗಿ ಯಾವುದೇ ನೀರಿನ ಸೌಲಭ್ಯ ಇಲ್ಲ. ನಾವು ಅಧಿಕಾರಿಗಳ ಸಂಗಡ 3 ಮೀಟಿಂಗ್ ಮಾಡಿದ್ದೇವೆ. ಅವರು ಹೇಳುತ್ತಾರೆ, ನಮಗೆ ಇನ್ನೂ ದುಡ್ಡು ಬಂದಿಲ್ಲ ಎಂದು. ಕೃಷಿ ಇಲಾಖೆಯವರನ್ನು ಕೇಳಿದರೆ ಅದು ಮಾಡಿ, ಇದು ಮಾಡಿ ಎಂದು ಆದೇಶ ಮಾತ್ರ ಬಂದಿದೆ, ದುಡ್ಡು ಬಂದಿಲ್ಲವೆಂಬ ಮಾತು ಹೇಳುತ್ತಾರೆ. ನನ್ನ ಮತಕ್ಷೇತ್ರದಲ್ಲಿ ಎರಡು ದಿನಗಳಲ್ಲಿ ಎರಡು ಬೋರ್ ಹಾಕಿದ್ದು ನೋಡುತ್ತಿದ್ದೇವೆ. ಬಹಳ ಖೇದದಿಂದ ಈ ಮಾತು ಹೇಳುತ್ತಿದ್ದೇನೆ. ಏಕೆಂದರೆ ನಾವು ಈಗ ಮಳೆಗಾಲದ ಮಧ್ಯದಲ್ಲಿದ್ದೇವೆ. ಬರಗಾಲದ ಪ್ರಾರಂಭದ ಹಂತದಲ್ಲಿದ್ದೇವೆ. ಇದೇ ಪರಿಸ್ಥಿತಿಯಲ್ಲಿ ಸರ್ಕಾರ ಈ ರೀತಿ ಬರಗಾಲದ ಅಭಾವವನ್ನು ನೀಗಿಸಲು, ಹಳ್ಳಿಗಳ ಸಮಸ್ಯೆಗಳನ್ನು ನೀಗಿಸಲು ಇಂಥ ಕಷ್ಟ ತೆಗೆದುಕೊಳ್ಳಬೇಕಾದರೆ ನಾವು ಮುಂಬರುವ ನವೆಂಬರ್ ನಂತರ ಮೇವರೆಗೆ ಅತೀ ಬರಗಾಲವನ್ನು ಎದುರಿಸುವ ಪ್ರಸಂಗ ಇದ್ದು ಸರ್ಕಾರ ಅದಕ್ಕೆ ಯಾವ ರೀತಿ ಸ್ಪಂದಿಸುತ್ತದೆಂಬ ಸಂಶಯ ಸ್ಪಷ್ಟವಾಗಿ ಬರುತ್ತಿದೆ. ಆದ್ದರಿಂದ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಯಾವುದೇ ಕೆಲಸ ಕಾರ್ಯಗಳನ್ನು ಸರ್ಕಾರದ ಇನ್ನಿತರ ಯಾವುದೇ ಬಾಬಿನ ಹಣವನ್ನು ಬರಗಾಲಕ್ಕೆ ಬಿಡುಗಡೆ ಮಾಡಿ ನನ್ನ ಮತ ಕ್ಷೇತ್ರದಲ್ಲಿ ಜನರು ಗುಳೆ ಹೋಗುವ ಪ್ರಸಂಗ ಏನಿದೆ ಅದನ್ನು ತಪ್ಪಿಸಬೇಕು. ಮೇವಿನ ಸಲುವಾಗಿ ತಾವು ದಯವಿಟ್ಟು ವ್ಯವಸ್ಥೆ ಮಾಡಬೇಕು. ನನ್ನ ಮತ ಕ್ಷೇತ್ರದ ಹಳ್ಳಿಗಳಿಗೆ ನೀರಿನ ಖಾಯಂ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಂಡು ಇನ್ನೂ ವಿಶೇಷವಾಗಿ ಬರಗಾಲದ ಸಲುವಾಗಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು, ಅದು ಕೇವಲ ಅಂಕಿಸಂಖ್ಯೆ ಆಗಬಾರದೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜು (ವಿರಾಜಪೇಟೆ):- ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಮಾತನಾಡಲಿಕ್ಕೆ ಈ ಸಭೆಯಲ್ಲಿ ಒಂದು ಅವಕಾಶ ಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಕೃತಜ್ಞತೆ ಸಲ್ಲಿಸಿ, ಈ ಸಂದರ್ಭದಲ್ಲಿ ಬರಗಾಲದ ಬಗ್ಗೆ ಜನರು ಹೇಗೆ ಕಷ್ಟಪಡುತ್ತಿದ್ದಾರೆಂಬುದನ್ನು ಈ ಸದನದಲ್ಲಿ ಪ್ರತಿಪಾದನೆ ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಸಾಮಾನ್ಯವಾಗಿ ಬರಗಾಲ ಎಂದರೆ ಉತ್ತರ ಕರ್ನಾಟಕದವರಿಗೆ ಪ್ರತಿ ವರ್ಷ ಬರುವುದರಿಂದ ಅವರಿಗೆ ಒಂದು ಅಭ್ಯಾಸವಾಗಿದೆ. ಆದರೆ ನಾವು ಕೊಡಗು ಜಿಲ್ಲೆಯವರು ಬರಗಾಲ ಹೇಗಿದೆ ಎಂಬ ಅನುಭವ ನಮಗೆ ಇಲ್ಲ. ಆ ಅನುಭವ ನಿಮಗೆ ಬಹಳಷ್ಟು ಕಡಿಮೆ ಇದೆ ಎಂದು ಹೇಳಿಕೊಂಡರೂ ತಪ್ಪಾಗಲಾರದು. ನಾವು ಪ್ರತಿ ಸಾರಿ ಸುರಿಯುತ್ತಿದ್ದ ಮಳೆಯನ್ನು ಎದುರು ನೋಡುತ್ತಿದ್ದವರು ಈ ವರ್ಷ ಮಳೆ ಬಾರದೆ ಕಂಗಾಲಾಗಿದ್ದೇವೆ. ಈ ಬರದ ಅನುಭವ ನಮಗೂ ಈಗ ತಟ್ಟಿದೆ. ಕಳೆದ ಒಂದು ವಾರದಲ್ಲಿ ಸಾಕಷ್ಟು ಮಳೆಯಾಗುತ್ತಿರಬಹುದು. ಆದರೆ ಪ್ರತಿ ಸಮಯದಲ್ಲಿ ಅಂದರೆ ಯಾವ ಯಾವ ಸಮಯದಲ್ಲಿ ಏನೇನು ಮಾಡಬೇಕಾಗಿತ್ತು ಅಂದರೆ ನಾಟಿ ಕೆಲಸವನ್ನು ನಾವು ಆಗಸ್ಟ್‌ನಲ್ಲಿ ಮಾಡಿ ಮುಗಿಸಬೇಕಾಗಿತ್ತು. ಆ ಕೆಲಸವನ್ನು ಆಗಸ್ಟ್‌ನಲ್ಲಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಮಳೆ ಸಮರ್ಪಕವಾಗಿ ಬರಲಿಲ್ಲ. ಕೆಲವು ಪ್ರದೇಶಗಳಲ್ಲಿ ಮಳೆ ಸಮರ್ಪಕವಾಗಿ ಬಂದಿದೆ ಅನ್ನಿಸಿ ಕೆಲವರು ನಾಟಿ ಕೆಲಸ ಆರಂಭ ಮಾಡಿದರು. ಆ ನಾಟಿ ಕೆಲಸ ಮಾಡಿದ್ದು ಏನಾಯಿತೆಂದರೆ ಒಣಗುವ ಪರಿಸ್ಥಿತಿ ಬಂತು. ಇನ್ನು ಕೆಲವರು ಮಳೆ ಬರುತ್ತದೆ, ಆಗ ನಾಟಿ ಪ್ರಾರಂಭ ಮಾಡೋಣವೆಂದು ಕುಳಿತುಕೊಂಡರು. ಅವರಿಗೆ ಯಾವುದೇ ಕೆಲಸ ಮಾಡುವುದಕ್ಕೆ ಆಗಲಿಲ್ಲ. ಕಳೆದ 3-4 ದಿನಗಳಿಂದ

ಬಹಳಷ್ಟು ಪ್ರಮಾಣದಲ್ಲಿ ಮಳೆ ಬರುತ್ತಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ತುಂಬಾ ನಿಧಾನವಾಗಿ ಬಂದ ಮಳೆಯಿಂದ ನಮಗೆ ಬೆಳೆ ತೆಗೆಯಬಹುದಾದ ಸಾಧ್ಯತೆ ಬಹಳಷ್ಟು ಇದೆ ಎಂದು ನನಗನ್ನಿಸುವುದಿಲ್ಲ. ಜೊತೆಗೆ ತಮಗೆ ಗೊತ್ತಿದೆ, ಕೊಡಗಿನಲ್ಲಿ ನಾವು ಯಾವುದೇ ನೀರಾವರಿ ಯೋಜನೆ ಹಾಕಿಕೊಂಡು ಅಥವಾ ನೀರನ್ನು ಸಂಗ್ರಹ ಮಾಡಿಕೊಂಡು ಭತ್ತ ಬೆಳೆಯುವುದಿಲ್ಲ. ಅಲ್ಲಿ ಎರಡೇ ಎರಡು ಬೆಳೆ ಬೆಳೆಯುವುದು. ಅತಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಒಂದು ಭತ್ತ. ಅಲ್ಲಿ ಬೀಳುವ ಮಳೆಯ ನೀರನ್ನು ಸಂಗ್ರಹ ಮಾಡಿಕೊಂಡು ಭತ್ತ ಬೆಳೆಯುತ್ತಾರೆ. ಎರಡನೆಯದು ಕಾಫಿ. ಈ ವರ್ಷ ನಮ್ಮಗೆ ಅನ್ನಿಸುತ್ತದೆ, ಭತ್ತವನ್ನು ಯಾವ ಪ್ರಮಾಣದಲ್ಲಿ ನಿರೀಕ್ಷೆ ಮಾಡಿದ್ದೆವು ಆ ಪ್ರಮಾಣದಲ್ಲಿ ಪ್ರತಿ ಶತ 25 ಪ್ರಮಾಣವನ್ನು ನಾವು ಮುಟ್ಟುವುದಿಲ್ಲ ಅನ್ನಿಸುತ್ತದೆ. ಆ ರೀತಿ ಒಂದು ಬರ ವಿಚಿತ್ರ ರೀತಿಯಲ್ಲಿ ಈ ವರ್ಷ ಸೃಷ್ಟಿಯಾಗಿದೆ. ಎರಡನೆಯದಾಗಿ, ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಯಾವಾಗಲೂ ನಾವು ಏಪ್ರಿಲ್ ತಿಂಗಳಿನಿಂದ ಆಚೆಗೆ ಕುಡಿಯುವ ನೀರಿಗೆ ಒದ್ದಾಡುತ್ತಿದ್ದೆವು. ಆದರೆ ಮಳೆ ಈ ರೀತಿ ಕೈ ಕೊಟ್ಟಿದ್ದರಿಂದ ಬಹಳ ತೊಂದರೆಯಾಗಿದೆ. ಕೆಲವಾರು ಪ್ರದೇಶಗಳಲ್ಲಿ ಅಂದರೆ ಕೊಡಗಿನಲ್ಲಿ ಎಲ್ಲಾ ಕಡೆ ಮಳೆಯಾಗಿದೆ ಎಂದು ನಾನು ಒಪ್ಪಿಕೊಳ್ಳುವುದಿಲ್ಲ.ಅದರಲ್ಲೂ ಕೆಲವು ಭಾಗ ಉಳಿದುಕೊಂಡಿದೆ. ಆ ಪ್ರದೇಶಗಳಲ್ಲಿ ನೀರಿಗಾಗಿ ಕಂಗಾಲು ಪಡುತ್ತಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಈಗಾಗಲೇ ಬರದ ಬಗ್ಗೆ ನಿಮ್ಮ ಅಧ್ಯತೆಯಲ್ಲಿ ಒಂದು ಸಮಿತಿ ನೇಮಕ ಮಾಡಿದ್ದೇವೆಂದು, ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದರು, ಆ ಸಮಿತಿಯ ಸೂತ್ರ ಏನಿದೆ ಆ ಸಮಿತಿ ಸೂಚಿಸುವಂಥ ಕೆಲಸಗಳನ್ನು ಯಾವ ರೀತಿ ಕೈಗೆತ್ತಿಕೊಳ್ಳಬೇಕು ಅದರ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಶಾಸಕರಾಗಿ ನಾವು ಬೇಕಾದಷ್ಟು ಕೆಲಸ ಮಾಡುತ್ತಿದ್ದುದನ್ನು ತಪ್ಪಿಸಿ ಸರ್ಕಾರ ಕೊಟ್ಟಿದ್ದ ಸೌಲಭ್ಯವನ್ನು ತಪ್ಪಿಸಿಬಿಟ್ಟು ಈಗ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಎಂದು ಬೇಕಾದಷ್ಟು ವ್ಯವಸ್ಥೆ ಮಾಡಿದ್ದೀರಿ. ಆ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿದ್ದೀರಾ? ಅದು ಕೂಡ ಇಲ್ಲ. ನನ್ನ ಕ್ಷೇತ್ರದಲ್ಲಿ ಹೇಳಿಕೊಳ್ಳಬೇಕಾದರೆ 6 ತಿಂಗಳಾಯಿತು ಚುನಾವಣೆ ನಡೆದು. ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿಯಲ್ಲಿ ಏನು ಮಾಡಿದ್ದೀರಿ? ಈ ವರ್ಷದ ಕ್ರಿಯಾ ಯೋಜನೆಯನ್ನು ತಾಲ್ಲೂಕು ಪಂಚಾಯಿತಿಯಲ್ಲಿ ತಯಾರು ಮಾಡಬೇಕು. ಅದನ್ನು ತಯಾರು ಮಾಡುವುದಕ್ಕೆ ಇದುವರೆಗೆ ಒಂದೇ ಒಂದು ಸಭೆ ನಡೆದಿಲ್ಲ. ಆ ಸಭೆಯನ್ನು ನಡೆಸಬೇಕಾದರೆ ಕಾರ್ಯ ನಿರ್ವಾಹಕ ಅಧಿಕಾರಿ ಬೇಕು ಎಂದು ಹೇಳುತ್ತಾರೆ. ಕಾರ್ಯ ನಿರ್ವಾಹಕ ಅಧಿಕಾರಿ ಯಾರನ್ನು ಅಲ್ಲಿ ನೇಮಕ ಮಾಡಿದ್ದಾರೆ, ಆ ಅಧಿಕಾರಿ ಬಂದು ತಮ್ಮ ಅಧಿಕಾರವನ್ನು ತೆಗೆದುಕೊಂಡಿಲ್ಲ. ಅಧಿಕಾರ ತೆಗೆದುಕೊಂಡಿಲ್ಲವೆಂದರೆ ಸಭೆಯನ್ನು ಮಾಡುವ ಹಾಗೆ ಇಲ್ಲ. ಸಭೆಯನ್ನು ಮಾಡುವ ಹಾಗೆ ಇಲ್ಲವೆಂದರೆ ನಾವು ಕ್ರಿಯಾ ಯೋಜನೆಯನ್ನು ಕಳುಹಿಸುವ ಹಾಗೆ ಇಲ್ಲ. ಕ್ರಿಯಾ ಯೋಜನೆ ಇಲ್ಲವೆಂದರೆ 1995-96 ರಲ್ಲಿ ಏನು ಕೆಲಸಗಳನ್ನು ಮಾಡುವ ಹಾಗೆ ಇಲ್ಲ. ಯಾವ ರಸ್ತೆ ಕೆಲಸಮಾಡಬೇಕಾದರೆ, ಕೆರೆ ಕೆಲಸ ಮಾಡಬೇಕಾದರೆ, ನೀರಾವರಿ ಯೋಜನೆ ತೆಗೆದುಕೊಳ್ಳಬೇಕಾದರೆ ಕ್ರಿಯಾ ಯೋಜನೆ ಬೇಕೇ ಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಪ್ರತಿಯೊಬ್ಬರೂ ನಮ್ಮನ್ನು ಕೇಳುತ್ತಿದ್ದಾರೆ ನೀವು ಶಾಸಕರಾಗಿ ವಿಧಾನಸಭೆಯಲ್ಲಿ ಏನು ಮಾಡುತ್ತಿದ್ದೀರಿ ಎಂದು. ಆರು ತಿಂಗಳಾಯಿತು ಚುನಾವಣೆಯಾಗಿ. ಇಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯನ್ನು ಏತಕ್ಕೆ ಹಾಕಿಸಲಿಲ್ಲ? ಈ ಕ್ಷೇತ್ರದ ಪ್ರಗತಿ ಬಗ್ಗೆ ನಿಮಗೆ ಕಾಳಜಿ ಇಲ್ಲವೇ ಎಂದು ಕೇಳುತ್ತಿದ್ದಾರೆ. ನೀವೂ ಕೆಲಸ ಮಾಡುವುದಿಲ್ಲ, ಕೆಲಸ ಮಾಡುವವರಿಗೂ ಕೂಡ ಒಂದು ಅವಕಾಶ ಕೊಡುವುದಿಲ್ಲ ಎಂದು

ಹೇಳುತ್ತಿದ್ದಾರೆ. ಈ ಧೋರಣೆ ಏತಕ್ಕೆ ಬೇಕಾಗಿದೆ ಸ್ವಾಮಿ? ಈ ತರಹ ಧೋರಣೆ ಇಟ್ಟುಕೊಂಡಿದ್ದರೆ ಖಂಡಿತವಾಗಿ ಆ ಕ್ಷೇತ್ರದಲ್ಲಿ ಏತಕ್ಕೆ ಚುನಾವಣೆ ಮಾಡಿದಿರಿ ಎಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಸರ್ಕಾರವನ್ನು ಪ್ರಶ್ನೆ ಮಾಡುತ್ತಿದ್ದೇನೆ. ಅದರ ಅವಶ್ಯಕತೆ ಏನಿತ್ತು? ಸುಮಾರು 18 ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಪ್ರತಿ ಸಾರಿ ನಾನು ಕ್ಷೇತ್ರಕ್ಕೆ ಹೋದಾಗ ಕೇಳುತ್ತಿದ್ದಾರೆ, ಆರು ತಿಂಗಳಿಂದ ಜನರು ಬಂದು ನೀರಿನ ಬಗ್ಗೆಯಾಗಲೀ ರಸ್ತೆ ಬಗ್ಗೆಯಾಗಲೀ ನಮ್ಮನ್ನು ಕೇಳುತ್ತಿದ್ದಾರೆ. ಅವರಿಗೆ ನಾವು ಏನು ಉತ್ತರ ಹೇಳಬೇಕು ಎಂಬುದನ್ನು ಹೇಳಿ ಎಂದು ನನ್ನನ್ನು ಕೇಳುತ್ತಿದ್ದಾರೆ. ಸರ್ಕಾರ ನಿರ್ಲಕ್ಷ್ಯದಿಂದ ಅವರ ಪಾಡಿಗೆ ಅವರು ಮೌನವಾಗಿದ್ದಾರೆ. ಜನತಾ ದರ್ಶನದಲ್ಲಿ ತುತ್ತೂರಿ ಹೊಡೆಯುತ್ತಿದ್ದಾರೆ. ನಿಮ್ಮ ಕೈಗೇ ಸರ್ಕಾರವನ್ನು ಕೊಟ್ಟಿದ್ದೇವೆ. ನೀವು ಏನು ನಿರ್ಧಾರ ಮಾಡಿಕೊಳ್ಳುತ್ತೀರೋ ಅದು ನಿಮಗೆ ಸಂಬಂಧಪಟ್ಟಿದ್ದು. ನಿಮಗೆ ಬೇಕಾದಷ್ಟು ಹಣ ಕೊಟ್ಟಿದ್ದೇವೆ ಎಂದು. ಎಲ್ಲಿ ಕೊಟ್ಟಿದ್ದೀರಿ ಸ್ವಾಮಿ ಏನು ಮಾಡಿದ್ದೀರಿ? ಆರು ತಿಂಗಳಿಂದ ಅದರ ಬಗ್ಗೆ ಚಿಂತನೆಯೇ ಇಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಅಧ್ಯಕ್ಷರಿಗೆ ಪರಿಮಿತಿ ಏನಿದೆ? ಏನು ಮಾಡಬೇಕು ಏನು ಇಲ್ಲ, ಅದರ ಬಗ್ಗೆ ಏನಾದರೂ ಒಂದು ಸೂತ್ರಗಳನ್ನೇನಾದರೂ ನೀವು ಕಳುಹಿಸಿಕೊಟ್ಟಿದ್ದೀರಾ? ಅದೂ ಕೂಡ ಇಲ್ಲ. ಈ ಬರ ಬಂದಿರುವ ಪರಿಸ್ಥಿತಿಯಲ್ಲಿ, ವಿಚಿತ್ರ ಪರಿಸ್ಥಿತಿ ಮತ್ತೆ ಎರಡನೆಯದಾಗಿ ಬರ ಬಂದಿರುವಂಥ ಪರಿಸ್ಥಿತಿಯಲ್ಲಿ ಅಲ್ಲಿನ ಸದಸ್ಯರು ಏನು ಮಾಡಬೇಕಾಗಿದೆ ಸ್ವಾಮಿ? ಸರ್ಕಾರ ಏತಕ್ಕೆ ಈ ರೀತಿ ನಿರ್ಲಕ್ಷ್ಯ ತೋರಿಸುತ್ತಾ ಇದೆ? ಎಲ್ಲ ಕ್ಷೇತ್ರದಲ್ಲೂ ಆ ತರಹ ಮಾಡುತ್ತಿದೆಯೋ ಅಥವಾ ನನ್ನ ಕ್ಷೇತ್ರದಲ್ಲಿ ಮಾತ್ರ ಆರೀತಿ ಮಾಡುತ್ತಿದೆಯೋ ಎಂದು ಒಂದು ಸಂದೇಹ ನನಗೆ ಬಂದಿದೆ. ಈಗ ನನಗೆ ಮುಖ್ಯವಾಗಿ ಬೇಕಾಗಿರುವುದು ಏನೆಂದರೆ ಒಬ್ಬ ಕಾರ್ಯನಿರ್ವಾಹಕ ಅಧಿಕಾರಿಯನ್ನು ಆ ಕ್ಷೇತ್ರದಲ್ಲಿ ಹಾಕಿ. ಬರದ ಬಗ್ಗೆ ಆ ಕ್ಷೇತ್ರದ ಜನ ಪ್ರತಿನಿಧಿಗಳು ತಮ್ಮಲ್ಲಿ ಚರ್ಚೆ ಮಾಡಿ ಒಂದು ಯೋಜನೆಯನ್ನೋ, ಒಂದು ರೆಸಲ್ಯೂಷನ್ನೋ ಮಾಡಿ ಎಲ್ಲೆಲ್ಲಿ ಬಾವಿ ತೆಗೆಸಬೇಕು ಅಂತ ಒಂದು ಕನಿಷ್ಠ ಸೌಲಭ್ಯವನ್ನು ಕೊಡುವಂಥ ಒಂದು ವ್ಯವಸ್ಥೆಯನ್ನಾದರೂ ಆಯ್ಕೆಯಾದಂಥ ಜನ ಪ್ರತಿನಿಧಿಗಳು ಮಾಡುವಂಥದ್ದಕ್ಕೆ ತಾವು ಸಹಕಾರ ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಇವತ್ತು ಒತ್ತಾಯ ಮಾಡುತ್ತಿದ್ದೇನೆ. ಕೊನೇ ಪಕ್ಷ ಈಗಲಾದರೂ ಕುಡಿಯುವ ನೀರಿನ ಬಗ್ಗೆ ನಾವು ಯೋಜನೆ ಮಾಡಿದರೆ ಮುಂಬರುವ ದಿನಗಳಲ್ಲಿ ನಿಜವಾಗಿಯೂ ಏನೋ ಒಂದು ರೀತಿಯಲ್ಲಿ ಜನಕ್ಕೆ ಅನುಕೂಲವಾಗುತ್ತದೆ. ಏಕೆಂದರೆ ಈ ವರ್ಷದ ಕ್ರಿಯಾ ಯೋಜನೆ ನನಗೆ ತಿಳಿದಿರುವ ಮಟ್ಟಿಗೆ ಬಹುಶಃ ಅದು ಆ ಕಾರ್ಯನಿರ್ವಾಹಕ ಅಧಿಕಾರಿ ಬರುವುದಿಲ್ಲ, ಅವರು ತಯಾರು ಮಾಡುವುದಕ್ಕಾಗುವುದಿಲ್ಲ, ಅಂದರೆ 1995-96 ನೇ ಸಾಲಿನಲ್ಲಿ ವಿರಾಜಪೇಟೆಯಲ್ಲಿ ಯಾವುದೇ ಒಂದು ಪ್ರಗತಿ ಇಲ್ಲ. ಅದು ಜನತಾ ದಳದ ಸರ್ಕಾರದ ಒಂದ ಸಾಧನೆ. ಈ ಸಾಧನೆಯನ್ನು ನಾನು ಜನತೆಗೆ ಹಾಗೆಯೇ ಹೇಳುತ್ತೇನೆ. ಏಕೆಂದರೆ ಸದನದಲ್ಲೂ ಕೂಡ ನಾನು ಪ್ರತಿಪಾದನೆ ಮಾಡಿ ಸಾಕಾಗಿಹೋಯಿತು ನನಗೆ, ಸಂಬಂಧಪಟ್ಟ ಮುಖ್ಯಮಂತ್ರಿಯಿಂದ ಎಲ್ಲಾ ಅಧಿಕಾರಿ ವರ್ಗದವರಿಗೂ ಜೊತೆಗೆ ಎಲ್ಲ ಮಂತ್ರಿಗಳಿಗೂ ಸಂಬಂಧಪಟ್ಟವರಿಗೆ ನಾನು ಅಹವಾಲನ್ನು ಸಲ್ಲಿಸಿದ್ದಾಯಿತು; ನನ್ನ ಅಹವಾಲಿಗೂ ಯಾವುದೇ ಒಂದು ಪ್ರತಿಕ್ರಿಯೆ ಸರ್ಕಾರದಿಂದ ಬರುತ್ತಾ ಇಲ್ಲ. ಆದ್ದರಿಂದ ನಾನೂ ಕೂಡ ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ ನನ್ನ ಕೈಯಲ್ಲಿ ಸಾಧ್ಯವಾದಷ್ಟು ನಾನು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿದ್ದೇನೆ. ಕೂಡ ಅಲ್ಲಿನ ಜನತೆಗೆ ನಾನು ಹೇಳುತ್ತೇನೆ. ಜನತೆಯ ಕ್ಷಮೆಯನ್ನು ಕೂಡ ನಾನು ಕೇಳುವುದಕ್ಕೆ ಸಿದ್ಧನಾಗಿದ್ದೇನೆ. ಮತ್ತೆ ನಮ್ಮ ಕೊಡಗಿನಲ್ಲಿ ಕೆಲವಾರು ಕೆರೆ ಕಟ್ಟೆಗಳಿವೆ.

ಸಣ್ಣನೀರಾವರಿ ಮಂತ್ರಿಗಳಲ್ಲಿ ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಆ ಒಂದು ಪ್ರದೇಶಕ್ಕೆ ಯಾವ ಒಬ್ಬ ಮಂತ್ರಿಗಳೂ ಭೇಟಿ ನೀಡದೆ ಹೂಳೆತ್ತುವ ಕೆಲಸ ವರ್ಷಾನುಗಟ್ಟಲೆಯಿಂದ ಆಗಿಯೇ ಇಲ್ಲ. ಒಟ್ಟು ಒಣಗಿಹೋಗಿದೆ, ಅದರ ಬಗ್ಗೆ ಯಾರೂ ಒಂದು ಯೋಚನೆ ಮಾಡಿಲ್ಲ. 28 ವರ್ಷ ಅದನ್ನು ಒಂದು ಪಕ್ಷದವರೇ ಸತತವಾಗಿ ಪ್ರತಿನಿಧಿಸುತ್ತಿದ್ದರು. ಆದರೆ ಅವರೂ ಅದರ ಬಗ್ಗೆ ಯೋಚನೆ ಮಾಡಲಿಲ್ಲ. ನನ್ನ ಮನಸ್ಸಿಗೆ ಬಹಳಷ್ಟು ಬೇಸರ ಆಗುತ್ತದೆ. ಅವರು ಯೋಚನೆ ಮಾಡಲಿಲ್ಲಅಂದರೆ ವಿರಾಜಪೇಟೆ ಕ್ಷೇತ್ರವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದ ಒಂದು ಮೀಸಲು ಕ್ಷೇತ್ರ. ಬಹಳಷ್ಟು ನಾವು ಉನ್ನತಿ ಮಾಡಿದ್ದೇವೆ, ಬೇಕಾದಷ್ಟು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ, ಖರ್ಚು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆಯೇ ವಿನಾಃ ಅದು ಬರೀ ಕಡತದಲ್ಲಿ ಇದೆಯೇ ವಿನಾಃ ಖಂಡಿತವಾಗಿ ನಿಜವಾಗಿ ನೋಡಿದರೆ ಅಲ್ಲಿರುವಂಥ ದಾರುಣ ಪರಿಸ್ಥಿತಿ ಇನ್ನೆಲ್ಲೂ ಇಲ್ಲ ಎಂದು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಕೇವಲ ನಾವು ಬೀದರ್ ಆ ಪ್ರದೇಶವನ್ನು ಮಾತ್ರ ನಾವು ಬರಗಾಲ ಅಂದುಕೊಂಡಿದ್ದೆವು. ನಮ್ಮ ಅರಣ್ಯ ಪ್ರದೇಶಗಳಲ್ಲಿ ಬಂದು ನೋಡಿ ಸ್ವಾಮಿ ಅಲ್ಲಿ ಬೇಕಾದಷ್ಟು ಗಿರಿಜನರಿಗೆ ನಾವು ಅನುಕೂಲ, ಸೌಲಭ್ಯ ಮಾಡಿಕೊಂಡು ಬಂದಿದ್ದೇವೆ ಎಂದು ಹೇಳಿಕೊಂಡು ಬಂದಿದ್ದಾರೆಯೇ ವಿನಾ: ಇವತ್ತಿನ ಬರದ ಪರಿಸ್ಥಿತಿಯಲ್ಲಿ ಅವರು ಎರಡು ಹೊತ್ತು ಊಟ ಮಾಡುವುದಿರಲಿ ಒಂದು ಹೊತ್ತು ಊಟಕ್ಕೆ ಏನು ಮಾಡಭೇಕು ಎಂದು ಯೋಚನೆ ಮಾಡುತ್ತಿದ್ದಾರೆ. ಅದರ ಜೊತೆಗೆ ಅರಣ್ಯಾಧಿಕಾರಿಗಳ ಕಿರುಕುಳ ಬೇರೆ, ಇವತ್ತು ಸರ್ಕಾರವನ್ನು ತಮ್ಮ ಮೂಲಕ ಪ್ರಶ್ನೆ ಮಾಡುತ್ತಿದ್ದೇನೆ. ಸಂರಕ್ಷಿಸಿರುವ ಅರಣ್ಯಗಳು ಕಡಿಮೆಯಾಗುತ್ತಿವೆ ಆದ್ದರಿಂದ ನೀವು ಗಿರಿಜನರು ಅರಣ್ಯಗಳಲ್ಲಿರಬೇಡಿ, ದೂರ ಹೋಗಿ, ನಿಮಗೆ ಬೇಕಾದರೆ ಬೇರೆ ಎಲ್ಲಾದರೂ ಜಾಗ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದೇ ನಿನ್ನೆ ಪತ್ರಿಕೆಯಲ್ಲಿ ಬಂದಿದೆ, ದಾಂಡೇಲಿಯಲ್ಲಿರುವ ಅರಣ್ಯವನ್ನು ಕೇಂದ್ರದ ಅನುಮತಿ ಪಡೆಯದೆ ಗಣಿ ಕೈಗಾರಿಕೆಗೆ ಮತ್ತು ಇತರ ವ್ಯವಹಾರಕ್ಕೆ ನೀವು ಬಿಟ್ಟುಕೊಡುತ್ತಿದ್ದೀರಲ್ಲ ಇಲ್ಲಿ ನಿರಂತಕವಾಗಿ ವರ್ಷಾನುಗಟ್ಟಲೆಯಿಂದ ಪರಂಪರಾನುಗತವಾಗಿ ಬೆಳೆದುಕೊಂಡು ಬಂದಿರುವ ಜನಗಳನ್ನು ನಿರ್ವಸಿತರನ್ನಾಗಿ ಮಾಡುತ್ತಿದ್ದೀರಲ್ಲ ಕಾರಣ ಏನು? ಇಲ್ಲಿ ಅರಣ್ಯವನ್ನು ಸಂರಕ್ಷಿಸಬೇಕು. ಅದೇ ದಾಂಡೇಲಿಯಲ್ಲಿ ಬಂದರೆ ಅದು ಬೇಕಾಗಿಲ್ಲ. ಗಣಿ ಕೈಗಾರಿಕೆಗೆ ಬಿಟ್ಟುಕೊಡುವುದಕ್ಕೆ ರೆಡಿ ಇದ್ದೀರಿ. ನಿಮಗೆ ಮನುಷ್ಯ ಜೀವನಕ್ಕಿಂತ ಬರೀ ಹಣ ಮುಖ್ಯವಾಗಿದೆ ಸ್ವಾಮಿ. ಅದರ ಜೊತೆಗೆ ಕಪಟತನ ಇದೆ. ಏನಿದೆ? ಅರಣ್ಯವನ್ನು ಮಾತ್ರ ನಾವು ರಕ್ಷಣೆ ಮಾಡಬೇಕು, ಆದ್ದರಿಂದ ಅಲ್ಲಿ ಪ್ರದೇಶದಲ್ಲಿ ನೀವು ಗಿರಿಜನರು ಹೊರಗಡೆ ಬನ್ನಿ ಅಂತ ಹೇಳುತ್ತಾ ಇದ್ದೀರಿ. ಆ ಪ್ರದೇಶದಲ್ಲಿ ಬೇಕಾದರೆ ನೀವು ಪಂಚತಾರಾ ಹೋಟೆಲ್ಲನ್ನು ಕಟ್ಟಲಿಕ್ಕೆ ರೆಡಿ ಇದ್ದೀರಿ. ಆದರೆ ಅಲ್ಲಿ ಗಿರಿಜನರು ಇರಬಾರದು. ಈ ಧೋರಣೆ ಸರ್ಕಾರದಿಂದ ಬದಲಾಗಬೇಕು. ಆ ಪ್ರದೇಶದಲ್ಲಿ ಈಗ ಬರಗಾಲದಿಂದ ಯಾವುದೇ ಒಂದು ಕೆಲಸ ಇಲ್ಲದೆ ಒದ್ದಾಡುತ್ತಿರುವಂಥ ಹತಭಾಗ್ಯರಾದಂಥ ಸಹೋದರರಿಗೆ ಯಾವುದಾದರೂ ಒಂದು ಯೋಜನೆ ಹಾಕಿಕೊಂಡು ಅವರಿಗೆ ಕನಿಷ್ಠ ಎರಡು ಹೊತ್ತು ಊಟ ಸಿಗುವಂಥ ವ್ಯವಸ್ಥೆ ಆಗುವಂಥ ಕೆಲಸಗಳನ್ನು ಮಾಡುವಂಥ ಯೋಜನೆಗಳನ್ನು ಸರ್ಕಾರ ಹಾಕಿಕೊಂಡು ಅವರಿಗೆ ಒಂದು ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ. ಈಗಾಗಲೇ ತಮಗೆ ಗೊತ್ತಿದೆ, ಜೆ.ಆರ್.ವೈ.ನಲ್ಲಿ ಮತ್ತು ಇ.ಎ.ಎಸ್.ನಲ್ಲಿ ಕೇಂದ್ರ ಸರ್ಕಾರದವರು ಬಹಳಷ್ಟು ಹಣ ಬಿಡುಗಡೆ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರದವರು ಸಮರ್ಪಕ ರೀತಿಯಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳದೆ 50 ಪರ್ಸೆಂಟ್ ಕೂಡ ನಾವು ಉಪಯೋಗ ಮಾಡಿಕೊಳ್ಳುತ್ತಿಲ್ಲ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಬೇಕಾದಷ್ಟು

ಇಂಥ ಕೆಲಸ ಕಾರ್ಯಗಳನ್ನು ಮಾಡಿದರೆ ಮನೆ ಬಾಗಿಲಿನಲ್ಲಿ ಕೃಷಿ ಕಾರ್ಮಿಕರಿಗೆ ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವವರಿಗೆ ನೀವು ಜವಾಹರ್ ನೆಹರೂ ರೋಜ್‌ಗಾರ್ ಯೋಜನೆಯಿಂದ ಮತ್ತೆ ಎಂಪ್ಲಾಯ್ಮೆಂಟ್ ಅಷ್ಯೂರೆನ್ಸ್ ಯೋಜನೆಯಿಂದ ಕೆಲಸವನ್ನು ಅವರು ಕೊಡಿಸುವಂಥ ಒಂದು ಪ್ರಯತ್ನವನ್ನು ತಾವು ಮಾಡಬೇಕು ಅಂತ ನಾನು ಕೇಳಿಕೊಳ್ಳುತ್ತೇನೆ. ಇದನ್ನು ಮಾಡಬೇಕಾದವರು ಯಾರು? ಕನಿಷ್ಠ 10 ಜನ ನಿರ್ವಸಿತರು ಅಂದರೆ ಕೃಷಿ ಕಾರ್ಮಿಕರು ಕೆಲಸ ಇಲ್ಲ ಎಂದು ಹೇಳುವಂಥ ಸಂದರ್ಭದಲ್ಲಿ ಅಲ್ಲಿಯ ಬಿ.ಡಿ.ಒ ಬಂದು ಅವರ ಪಟ್ಟಿ ತೆಗೆದುಕೊಂಡು ಅಲ್ಲಿ ಕೆಲಸವನ್ನು ಶುರು ಮಾಡುವಂಥ ಒಂದು ಕೆಲಸವನ್ನು ಮಾಡಬೇಕಾಗಿದೆ. ಆದರೆ ನಮ್ಮ ಕ್ಷೇತ್ರದಲ್ಲಿ ಏನಾಗಿದೆ ಸ್ವಾಮಿ? ಒಂದೇ ಒಂದು ತರಹದ ಕೆಲಸವನ್ನು ಇದುವರೆಗೂ ಶುರು ಮಾಡಿದ್ದೇ ಇಲ್ಲ. ಅವರು ಹೇಳುತ್ತಾರೆ, ಎಲ್ಲಲ್ಲಿ ಕೆಲಸ ಇಲ್ಲವೋ ಅವರೇ ಪಟ್ಟಿ ಹಿಡಿದುಕೊಂಡು ನಮ್ಮ ಆಫೀಸ್‌ಗೆ ಬನ್ನಿ, ನಾನು ಅಲ್ಲಿ ಒಂದು ಪಟ್ಟಿ ತಯಾರು ಮಾಡುತ್ತೇನೆ, ನೋಟೀಸ್ ಬೋರ್ಡ್‌ನಲ್ಲಿ ಹಾಕುತ್ತೇನೆ, ಆಮೇಲೆ ನೀವು ಶುರು ಮಾಡುವಿರಂತೆ, ಆಮೇಲೆ ನಿಮಗೆ ಏನೇನು ಬೇಕೋ ಅದನ್ನು ಕೊಡುತ್ತೇವೆ ಅನ್ನುತ್ತಾರೆ. ಈ ರೀತಿ ಒಂದು ಅಸಡ್ಡೆತನ, ಅಸಡ್ಡೆ ಧೋರಣೆ ಆ ಅಧಿಕಾರಿವರ್ಗದಲ್ಲಿದೆ. ಸರ್ಕಾರವನ್ನು ತಮ್ಮ ಮೂಲಕ ನಾನು ಕೇಳಿಕೊಳ್ಳುವುದು ಏನೆಂದರೆ ಆ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಿ. ಆ ಎಚ್ಚರಿಕೆ ನೀಡುವುದರ ಜೊತೆಗೆ ಅಲ್ಲಿ ಒಳ್ಳೆಯ ಕೆಲಸಗಳಾಗಲಿ. ಮತ್ತೆ ಆ ಕೃಷಿ ಕಾರ್ಮಿಕರಿಗೆ ಕೆಲಸ ಸಿಕ್ಕಿ ಕನಿಷ್ಠ ಎರಡು ಹೊತ್ತು ಆಹಾರ ಸಿಕ್ಕುವಂಥ ವ್ಯವಸ್ಥೆಯಾಗಲಿ ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿ ಕೊಳ್ಳುತ್ತಿದ್ದೇನೆ. ಅದನ್ನು ಮಾಡಬೇಕೆಂದು ಕೂಡ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಅಧ್ಯಕ್ಷರೇ, ಈಗಾಗಲೇ ನಾನು ನೀರಾವರಿ ಬಗ್ಗೆ ಹೇಳಿದೆ. ಮಾನ್ಯ ಮಂತ್ರಿಗಳು ಒಮ್ಮೆ ನಮ್ಮ ಕ್ಷೇತ್ರಕ್ಕೆ ಭೇಟಿ ಕೊಡಲಿ. ಬೇಕಾದಷ್ಟು ಯೋಜನೆಗಳನ್ನು ನಾವು ಹಾಕಿಕೊಳ್ಳಬಹುದು. ಕೊನೆಯ ಪಕ್ಷ ಮುಂದಿನ ದಿನಗಳಲ್ಲಿ ಬರವನ್ನು ನಾವು ತಡೆಹಿಡಿಯಬಹುದು ಎಂಬ ಉದ್ದೇಶದಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಕೊಡಗು ಪ್ರದೇಶಕ್ಕೆ ಭೇಟಿ ನೀಡಲಿ. ಆ ಪ್ರದೇಶದಲ್ಲಿ ಕುಡಿಯುವ ನೀರಿಗೆ ಹಾಗೆಯೇ ಕೆಲವು ಪ್ರದೇಶದಲ್ಲಿ ನೀರಾವರಿಗೆ ಅನುಕೂಲವಾಗಿರತಕ್ಕಂಥ ಜಮೀನಿಗೆ ನೀರು ಒದಗಿಸುವಂಥ ಯೋಜನೆಗಳನ್ನು ನಾನು ಒಬ್ಬ ತಾಂತ್ರಿಕ ಪದವೀಧರನಾಗಿರುವುದರಿಂದ ಹೇಳುತ್ತಿದ್ದೇನೆ. ಬೇಕಾದಷ್ಟು ಯೋಜನೆಗಳನ್ನು ಮಾಡಿ ಅಲ್ಲಿ ಬರ ಎಂದೆಂದೂ ಬರದೇ ಇರುವಂಥ ಒಂದು ಶಾಶ್ವತ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬಹುದಾಗಿದೆ. ಆದ್ದರಿಂದ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಸಂಬಂಧಪಟ್ಟ ಅಧಿಕಾರಿಗಳು ಆ ಪ್ರದೇಶಕ್ಕೆ ಭೇಟಿ ನೀಡಿ ನಾವು ನೀಡುವಂಥ ಸಲಹೆಗಳನ್ನು ದಯವಿಟ್ಟು ಪರಿಗಣನೆಗೆ ತೆಗೆದುಕೊಂಡರೆ ಖಂಡಿತವಾಗಿ ನಮ್ಮ ಪ್ರದೇಶದಲ್ಲಿ ಅಂದರೆ ಕೊಡಗು ಜಿಲ್ಲೆಯಲ್ಲಿ ಶಾಶ್ವತವಾದ ಬರ ಪರಿಹಾರವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಜೊತೆಗೆ ಕೊನೆಯದಾಗಿ ತಮ್ಮನ್ನು ಕೇಳಕೊಳ್ಳುವುದೇನೆಂದರೆ ಕಳೆದ ಆರು ತಿಂಗಳಿಂದ ಯಾವುದೇ ಒಂದು ಚಲನೆ ಇಲ್ಲದೆ ನಿಂತಿರುವ ತಾಲ್ಲೂಕು ಪಂಚಾಯಿತಿಗಳಿಗೆ ಒಂದು ಚಲನೆ ಕೊಡಬೇಕು. ಇದನ್ನು ಹೀಗೆ ಬಿಟ್ಟರೆ ಬಹಳಷ್ಟು ರೀತಿಯಲ್ಲಿ ಅಲ್ಲಿನ ಜನರು ದೊಂಬಿ ಎದ್ದು ಗಲಾಟೆ ಮಾಡುವ ಮಟ್ಟಿಗೆ ಸಿಕ್ಕಾಪಟ್ಟೆ ಆಕ್ರೋಷಿತರಾಗಿದ್ದಾರೆ.ಇದರಲ್ಲಿ ಪಕ್ಷಭೇದ ಮರೆತು ಮಾತನಾಡುತ್ತಿದ್ದೇನೆ. ಆದ್ದರಿಂದ ಅಂಥ ಒಂದು ಪ್ರಕೋಪಕ್ಕೆ ಸರ್ಕಾರ ಎಳೆಯಬಾರದು. ಆ ಪ್ರಕೋಪದಿಂದ ಸರ್ಕಾರ ವಿಮುಕ್ತಿಗೊಳಿಸಿ ಕಾರ್ಯನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಿದರೆ ಬಹಳಷ್ಟು ರೀತಿಯಲ್ಲಿ ಬರವನ್ನು ತಡೆಹಿಡಿಯುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕೆ ಯೋಜನೆ

ಹಾಕಿಕೊಂಡು ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ನೀಡಿದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4.40 ಪಿ.ಎಂ.

+ಶ್ರೀ ಬಿ.ಶಿವರಾಮು (ಗಂಡಸಿ):- ಮಾನ್ಯ ಅಧ್ಯಕ್ಷರೇ, ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಮುಂಗಾರು ಮಳೆ ಸಮರ್ಪಕವಾಗಿ ಬಾರದೆ ಈ ರಾಜ್ಯದಲ್ಲಿ ತೀವ್ರ ಬರಗಾಲ ಇತ್ತು ಎನ್ನತಕ್ಕಂಥದ್ದು ಮತ್ತು ಅದರ ಬಗ್ಗೆ ಸಮರ್ಪಕವಾದ ಕಾಮಗಾರಿಗಳನ್ನು ಸರ್ಕಾರ ತೆಗೆದುಕೊಳ್ಳಲಿಲ್ಲ ಎನ್ನುವುದರ ಬಗ್ಗೆ, 69 ನೇ ನಿಯಮದ ಬಗ್ಗೆ, ನಾವು ಚರ್ಚೆಯನ್ನು ಪ್ರಾರಂಭ ಮಾಡುವ ಹಿನ್ನೆಲೆಯಲ್ಲಿ ಕಂದಾಯ ಮಂತ್ರಿಗಳು ಈಗಾಗಲೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆ ಹೇಳಿಕೆಯನ್ನೆಲ್ಲಾ ಅವರು ಈಗಾಗಲೇ ಒಪ್ಪಿಕೊಂಡಿದ್ದಾರೆ. 175 ತಾಲ್ಲೂಕುಗಳಲ್ಲಿ 106 ತಾಲ್ಲೂಕುಗಳಿಗೆ ಅಭಾವದ ಪರಿಸ್ಥಿತಿ ಇತ್ತು ಎನ್ನುವುದನ್ನು ಹೇಳುವುದರ ಜೊತೆಗೆ ಉದ್ಯೋಗಗಳನ್ನು ಒದಗಿಸಲಿಕ್ಕೆ, ಕುಡಿಯುವ ನೀರಿಗೆ, ದನಕರುಗಳಿಗೆ ಮೇವುಗಳನ್ನು ಒದಗಿಸಲಿಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಎಷ್ಟು ಕೆಲಸವನ್ನು ಮಾಡಿದ್ದಾರೆ ಎನ್ನುವದರ ಬಗ್ಗೆ ಸಂಕ್ಷಿಪ್ತ ಹೇಳಿಕೆಯನ್ನು ಕೊಡುವುದರ ಮೂಲಕ ಅವರು ವಿವರಣೆಯನ್ನು ಕೊಟ್ಟಿದ್ದಾರೆ. ಅವರು ಹಣವನ್ನೇನೋ ಕೊಟ್ಟಿದ್ದಾರೆ ನಾವು ಇಲ್ಲ ಎಂದು ಹೇಳುವುದಿಲ್ಲ. ಎರಡು ಭಾಗ ಮಾಡತಕ್ಕಂಥದ್ದನ್ನು ಮಾಡಿ ಎಲ್ಲೆಲ್ಲಿ ಉದ್ಯೋಗ ಭರವಸೆ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಹಣ ಸಮರ್ಪಕವಾಗಿ ಸಾಕಷ್ಟು ಪ್ರಮಾಣದಲ್ಲಿ ಬರುತ್ತಾ ಇದೆಯೋ ಅದನ್ನು ಬಿಟ್ಟು ಉಳಿದಂಥ ತಾಲ್ಲೂಕುಗಳಲ್ಲಿ ಅವರು ಪ್ರಕೃತಿ ವಿಕೋಪ ಯೋಜನೆಯಲ್ಲಿ ಹಣ ಒದಗಿಸುವುದನ್ನು ಮಾಡಿದ್ದಾರೆ. ಈಗ ಅವರು ಏನು ಕೊಟ್ಟಂಥ ಈ ಎರಡೂ ಹಣ ಎಷ್ಟರಮಟ್ಟಿಗೆ ಈ ರಾಜ್ಯದಲ್ಲಿ ಸದುಪಯೋಗವಾಗಿದೆ ಆ ಬರಗಾಲದಲ್ಲಿ ಎನ್ನತಕ್ಕಂಥ ವಿಚಾರಕ್ಕೆ ನಾನು ಸೂಕ್ಷ್ಮವಾಗಿ ಎರಡು ವಿಚಾರವನ್ನು ಇಲ್ಲಿ ಮಾತನಾಡುವುದಕ್ಕೆ ಇಚ್ಛಿಪಡುತ್ತಾ ಇದ್ದೇನೆ. ಈಗ ಅವರ ಮಾಹಿತಿಯ ಪ್ರಕಾರ ಕೆಲಾಮಿಟಿ ರಿಲೀಫ್ ಫಂಡ್‌ನಲ್ಲಿ ಎಷ್ಟು ಹಣವನ್ನು ಒದಗಿಸಿದರು? 1-4-1995 ರಿಂದ 19-8-1995 ರವರೆಗೆ ಎಷ್ಟು ಖರ್ಚಾಯಿತು ಎನ್ನುವ ವಿಚಾರದ ಬಗ್ಗೆ ಮಾಹಿತಿಯನ್ನು ಇಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ನಾನು ನೋಡಿದ ಪ್ರಕಾರ ಕುಡಿಯುವ ನೀರಿಗೆ 12.65 ಕೋಟಿ ಹಣವನ್ನು ಕೊಟ್ಟರೆ, ಅಲ್ಲಿಯವರೆಗೆ ಖರ್ಚುಮಾಡಿರುವುದು 5.13 ಲಕ್ಷ ಹಣ. ಅಂದರೆ ಕುಡಿಯುವ ನೀರಿಗೆ ಇವತ್ತು ಕೊಟ್ಟಿರತಕ್ಕಂಥ ಹಣ 40 ಭಾಗ ಅಷ್ಟೇ ಅವರ ಕಡೆಯಿಂದ ಖರ್ಚು ಮಾಡಲಿಕ್ಕೆ ಆಗಿದ್ದು ಎನ್ನತಕ್ಕಂತ ವಿಚಾರವನ್ನು ತಿಳಿಸಲಿಕ್ಕೆ ಇಚ್ಛಿಪಡುತ್ತೇನೆ. ಅದು ಎಷ್ಟರಮಟ್ಟಿಗೆ ಕೊಟ್ಟಿರತಕ್ಕಂಥ ಹಣವನ್ನು ಸದುಪಯೋಗ ಮಾಡುವಂಥದ್ದು, ಕಷ್ಟದಲ್ಲಿ ಇರತಕ್ಕಂಥ ಕೃಷಿ ಕಾರ್ಮಿಕರಿಗೆ ಸಣ್ಣ ಅತಿ ಸಣ್ಣ ರೈತರಿಗೆ ಈ ಹಣವನ್ನು ಉಪಯೋಗ ಮಾಡಲಿಕ್ಕೆ ಸರ್ಕಾರಕ್ಕೆ ಆಗಿಲ್ಲ ಎನ್ನುವ ವಚಾರವನ್ನು ಮತ್ತು ಯಾವ ಕಾರಣಕ್ಕಾಗಿ ಅವರಿಗೆ ಮಾಡಲಿಕ್ಕೆ ಆಗಿಲ್ಲ ಎನ್ನುವಂಥದನ್ನು ನಾನು ಇಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಎಂಪ್ಲಾಯಿಮೆಂಟ್ ಜನರೇಶನ್, ಉದ್ಯೋಗ ಸೃಜನೆ ಯೋಜನೆಯಲ್ಲಿ ಒದಗಿಸಿರತಕ್ಕಂಥ ಹಣ 52.50 ಆದರೆ 31.48 ಲಕ್ಷಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಅಂದರೆ ಶೇಕಡಾ 10 ಭಾಗ. 10 ಪರ್ಸೆಂಟ್ ಹಣವನ್ನು ಕೂಡ ಖರ್ಚುಮಾಡಿರತಕ್ಕಂಥದ್ದು, ಅವರು ಒದಗಿಸಿರುವ ಅಂಕಿಅಂಶಗಳ ಮೂಲಕ ನಾನು ಹೇಳುತ್ತಾ ಇದ್ದೇನೆ. ಇನ್ನು ದನಕರುಗಳ ಮೇವಿಗೆ ಒದಗಿಸಿರತಕ್ಕಂಥ ಹಣ 3 ಲಕ್ಷ 1 ಕೋಟಿ ರೂಪಾಯಿ ಆದರೆ ಖರ್ಚು ಮಾಡಿರತಕ್ಕಂಥದ್ದು 5.09. ಇದು Balance up to 1-8-1995. ಅಂದರೆ 4 ತಿಂಗಳಿನಲ್ಲಿ ಖರ್ಚು ಮಾಡಿರತಕ್ಕಂಥ ಹಣ. ಸರ್ಕಾರ ಒದಗಿಸಿರುವುದು ಎಷ್ಟು?

ಖರ್ಚುಮಾಡಿರುವುದು ಎಷ್ಟು? ಎನ್ನತಕ್ಕಂಥ ವಿಚಾರವನ್ನು ಅವರು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಮೂಲಕ ಇವತ್ತು ನಾವು ಗಮನಿಸಬಹುದು. ಇದನ್ನು ಯೋಚನೆ ಮಾಡಿದಾಗ ನಮಗೆ ಅನಿಸುತ್ತದೆ ಎಷ್ಟರಮಟ್ಟಿಗೆ ಕೊಟ್ಟಂಥ ಹಣ ಸದುಪಯೋಗವಾಗಿದೆ? ಇದಕ್ಕೆ ಕೊಟ್ಟಿರತಕ್ಕಂಥ ಹಣ ಸಾಕಷ್ಟು ಇದೆಯೇ ಎನ್ನುವ ವಿಚಾರ ಅಲ್ಲ. ಇದಕ್ಕೆ ಕೊಟ್ಟಿರತಕ್ಕಂಥದ್ದು ಖರ್ಚುಮಾಡತಕ್ಕದ್ದರಲ್ಲಿ ಈ ಸರ್ಕಾರ ಎಷ್ಟು ವಿಫಲವಾಗಿದೆ ಎನ್ನತಕ್ಕಂಥದ್ದು ಒಂದು. ಎರಡನೆಯದು, ಉದ್ಯೋಗ ಭರವಸೆ ಯೋಜನೆಯ ಕೇಂದ್ರ ಸರ್ಕಾರದಿಂದ 80 ಭಾಗ ರಾಜ್ಯ ಸರ್ಕಾರದಿಂದ 20 ಭಾಗ ಏನು ಈ ಹಣ ನಮ್ಮ ರಾಜ್ಯದಲ್ಲಿ ಬಿಡುಗಡೆ ಆಗಿದೆ, ಅದನ್ನು ಎಷ್ಟರಮಟಿಗೆ ಖರ್ಚು ಮಾಡಿದ್ದಾರೆ ಎನ್ನುವುದನ್ನು ಅವರ ಇಲಾಖೆಯ ಎಡಿಪಿಎಯವರು Area development programme ಬಿಡುಗಡೆ ಮಾಡಿರತಕ್ಕಂಥ ಪಟ್ಟಿಯ ಆಧಾರದ ಮೇಲೆಯೇ ನಾನು ಹೇಳುತ್ತಾ ಇದ್ದೇನೆ. ಎಷ್ಟು ಹಣ ಸರ್ಕಾರ ಬಿಡುಗಡೆ ಮಾಡಿದೆ? ಮತ್ತು ಖರ್ಚು ಮಾಡಿದೆ? 1-7-1995ರವರೆಗೆ ಇರತಕ್ಕಂಥ ವಿಚಾರವನ್ನು ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ. ವಾಸ್ತವಿಕವಾಗಿ 1-4-1995ರಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ ಈ ರಾಜ್ಯದ ಹಣ ಇದ್ದುದ್ದು 112.42 ಕೋಟಿ ಎಂದು ಏನು ಹೇಳುತ್ತೇವೆ ಆ ಹಣ ಅಂದರೆ, ಕೇಂದ್ರ ಸರ್ಕಾರದ ನೆರವಿನಲ್ಲಿ ಇರತಕ್ಕಂಥ ಜ ಆರ್ ವೈ 1, 2, ನಂತರ ಇಎಎಸ್, ಡಿಪಿಎಪಿ, ಪಶ್ಚಿಮ ಘಟ್ಟ ಯೋಜನೆಗಳು ಏನು ಇವೆ ಇದಕ್ಕೆ 80 ಪರ್ಸೆಂಟ್ ಕೇಂದ್ರ ಸರ್ಕಾರದ ಹಣ, 20 ಪರ್ಸೆಂಟ್ ರಾಜ್ಯ ಸರ್ಕಾರದ ಹಣ. ಇನ್ನು ಪಶ್ಚಿಮ ಘಟ್ಟ ಯೋಜನೆಯ ಡಿ ಪಿ ಎ ಪಿಗೆ ಸಮವಾಗಿ 50-50 ಏನು ಯೋಜನೆ ಹಣ ಇತ್ತೋ ಇಷ್ಟು ಹಣ ಇರುವುದರ ಜೊತೆಗೆ ಬಿಡುಗಡೆ ಮಾಡಿರತಕ್ಕಂಥ ಹಣವೂ ಸೇರಿ 257.59 ಕೋಟಿ ಹಣ. ಜುಲೈ ಕೊನೆಯ ವರೆಗೆ ಖರ್ಚು ಮಾಡಿರತಕ್ಕಂಥ ಹಣ ಎಷ್ಟು ಎಂದರೆ ಕೇವಲ 62.55 ಕೋಟಿ. ಅಂದರೆ ನಾಲ್ಕನೇ ಒಂದು ಭಾಗ ಕೂಡ ಹಣವನ್ನು ಇವರು ಖರ್ಚು ಮಾಡುವುದರ ಮೂಲಕ ಈ ಬರಗಾಲದಲ್ಲಿ ಇದ್ದಂಥ ಕೃಷಿ ಕಾರ್ಮಿಕರಿಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉದ್ಯೋಗವನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಿಲ್ಲ ಎನ್ನತಕ್ಕಂಥ ವಿಚಾರವನ್ನು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದರ ಜೊತೆಗೆ ನಮ್ಮ ಜಿಲ್ಲೆಗೆ ಮುಖ್ಯಮಂತ್ರಿಗಳು ಜನತಾ ದರ್ಶನ ಸಂದರ್ಭದಲ್ಲಿ ಬಂದಿದ್ದರು. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರೂ ಕೂಡ ಬಂದಂಥ ಕಾಲದಲ್ಲಿ ನಮ್ಮ ಜಿಲ್ಲೆಯಲ್ಲಿ ಇದ್ದಂಥ ಪರಿಸ್ಥಿತಿಯನ್ನು, ಮಳೆಯ ಅಂಕಿ ಅಂಶಗಳನ್ನು ಮತ್ತೆ ಅಲ್ಲಿ ಆಗಿರತಕ್ಕಂಥ ಕೆಲಸದ ಬಗ್ಗೆ ಅವರಿಗೆ ಬೇಕಾದ ಮಾಹಿತಿಯನ್ನು ಒದಗಿಸಿದ್ದೆವು. ನಮ್ಮ ಜಿಲ್ಲೆಗೆ ಉದ್ಯೋಗ ಭರವಸೆ ಯೋಜನೆ, ಜವಾಹರ್ ರೋಜ್‌ಗಾರ್ ಯೋಜನೆ, ಪಶ್ಚಿಮ ಘಟ್ಟ ಯೋಜನೆ, ಡಿ ಪಿ ಎ ಪಿ ಎಲ್ಲಾ ಸೇರಿ ಜುಲೈ ಕೊನೆಯ ವರೆಗೆ 822 ಲಕ್ಷ ರೂಪಾಯಿ ಬಿಡುಗಡೆ ಆದರೆ ಖರ್ಚು ಆದಂಥ ಹಣ ಕೇವಲ 126 ಲಕ್ಷ ರೂಪಾಯಿಗಳು. ಇದನ್ನು ಕೂಡ ಅವರಿಗೆ ತಿಳಿಸಿದೆವು. ಪ್ರಮುಖವಾಗಿ ತೀವ್ರ ಬರಗಾಲ ಇದ್ದಂಥ ಜುಲೈ ತಿಂಗಳಿನಲ್ಲಿ ಖರ್ಚು ಮಾಡಿದಂಥ ಹಣ ಕೇವಲ 49 ಲಕ್ಷ ರೂ.ಗಳು ಆದ್ದರಿಂದ ನಾನು ಈಗ ತಮ್ಮ ಮೂಲಕ ತಿಳಿಸುತ್ತಾ ಇರತಕ್ಕಂಥದ್ದು ಇಷ್ಟೆ, ಇಷ್ಟೊಂದು ಹಣ ಇದ್ದರೂ ಕೂಡ ಸರ್ಕಾರ ಏಕೆ ಕೆಲಸವನ್ನು ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದೆ? ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ವಿಚಾರವನ್ನು ಪ್ರಮುಖವಾಗಿ ಪ್ರಸ್ತಾಪ ಮಾಡಿದರು. ಈ ಸಮಿತಿಗಳನ್ನು ಏನೋ ಮಾಡಿದ್ದಾರೆ ಅಧ್ಯಕ್ಷರೆ. ಆದರೆ ಇವತ್ತು ಏನಾಗಿದೆ ಎಂದರೆ ಈ ಸಮಿತಿಗಳು ಏನೂ ಕೆಲಸ ಇಲ್ಲದ ಸಮಿತಿಗಳಾಗಿವೆ. ಇವತ್ತು ಯಾವುದೇ ಒಂದು ಸಮಿತಿಯಲ್ಲಿ ತೀರ್ಮಾನವನ್ನು ಮಾಡಿ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾವು ಕಳುಹಿಸಿದರೆ ಆ ಕೆಲಸಕ್ಕೆ ಹಣವನ್ನು ಒದಗಿಸತಕ್ಕಂಥ ಕೆಲಸವನ್ನು ಸರ್ಕಾರ ಅಂದರೆ ಜಿಲ್ಲಾಧಿಕಾರಿಗಳಾಗಲಿ, ತಾಲ್ಲೂಕು ಪಂಚಾಯಿತಿಗಳಲ್ಲಿ

ಜಿಲ್ಲಾಪಂಚಾಯಿತಿಯಲ್ಲಿ ಮಾಡತಕ್ಕಂಥದ್ದನ್ನು ಮಾಡುತ್ತಾ ಇಲ್ಲ. ಈ ಸರ್ಕಾರ ಒಂದು ಗೊಂದಲವನ್ನು ಸೃಷ್ಟಿ ಮಾಡತಕ್ಕಂಥದ್ದನ್ನು ಮಾಡಿದ್ದಾರೆ. ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರತಕ್ಕಂಥ ಸಮಿತಿಯ ಜೊತೆಗೆ ಜಿಲ್ಲಾ ಪಂಚಾಯಿತಿಯ ಸದಸ್ಯರನ್ನು ಒಳಗೊಂಡಂತೆ ಸಮಿತಿಯಲ್ಲಿ ಕೆಲಸವನ್ನು ನಿರ್ವಹಿಸಬೇಕೆಂದು ಹೇಳಿ ಒಂದು ಸುತ್ತೋಲೆಯನ್ನು ಜಿಲ್ಲಾಪಂಚಾಯಿತಿಯವರು ಹೊರಡಿಸಿರುವುದರ ಮೂಲಕ ನಮ್ಮ ಜಿಲ್ಲೆಯಲ್ಲಿ ಒಂದು ಗೊಂದಲ ಸೃಷ್ಟಿ ಆಗಿದ್ದನ್ನು ಕಂದಾಯ ಮಂತ್ರಿಗಳ ಗಮನಕ್ಕೆ ತಂದೆವು. ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೂ ನಾವು ತಂದಿದ್ದೇವೆ. ಆದರೆ ಏನಾಗಿದೆ ಅಂದರೆ ಮತ್ತೆ ಸುತ್ತೋಲೆ ಕೊಟ್ಟು ಸರಿಮಾಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಅದು ಇಲ್ಲಿಯವರೆಗೆ ಬಗೆಹರಿದಿರತಕ್ಕಂಥದ್ದು ಇಲ್ಲ. ಕಂದಾಯ ಮಂತ್ರಿಗಳ ಗಮನಕ್ಕೆ ನಾನು ತರುತ್ತಾ ಇದ್ದೇನೆ. ಅದರ ಕಾಪಿಯನ್ನು ಕೂಡ ನಾವು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದೆವು. ಕಂದಾಯ ಇಲಾಖೆಯವರು ಒಂದು ಸುತ್ತೋಲೆ ಕೊಟ್ಟಿದ್ದಾರೆ, ಅದರಲ್ಲಿ ಅಧಿಕಾರ ಅಂದರೆ "The above Committe will review and monitor relief measures taken up by the implementing authorities." ಇಷ್ಟನ್ನು ಹೇಳುತ್ತದೆಯೇ ಹೊರತು ನೀವು ಮಾಡುವಂಥ ಕೆಲಸವನ್ನು ಪ್ರಪೋಸ್ ಮಾಡಿ ತೆಗೆದುಕೊಳ್ಳಬೇಕು. ಆ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡಬೇಕು ಎನ್ನತಕ್ಕಂಥ ವಿಚಾರವನ್ನು ಸ್ಪಷ್ಟಪಡಿಸುವುದಿಲ್ಲ. ಇದಕ್ಕೆ ಸೀಮಿತವಾಗಿ ನಾವು ಒಂದು ರೆಸಲ್ಯೂಷನನ್ನು ಮಾಡಿದ್ದೇವೆ ಅಧ್ಯಕ್ಷರೆ. ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿಗೆ, ನಮ್ಮ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಪಟ್ಟ ಹಾಗೆ. ಒಂದೇ ಒಂದು ಕಾಮಗಾರಿಗಳನ್ನು ತೆಗೆದುಕೊಂಡಂಥದನ್ನು ಮಾಡಿಲ್ಲ. ಅದಕ್ಕೆ ಜಿಲ್ಲಾ ಪಂಚಾಯಿತಿಗೆ ಏನು ಕೊಟ್ಟಿದ್ದೆವು ಅದರ ಪ್ರತಿಯನ್ನು ಕೂಡ ನಾನು ಕಂದಾಯ ಮಂತ್ರಿಗಳ ಹತ್ತಿರ ತೆಗೆದುಕೊಂಡು ಹೋಗಿ ಚರ್ಚೆ ಮಾಡಿದೆ. ನಾನು ಅದು ಇ ಎ ಎಸ್ ಏರಿಯಾ ಎಂದು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹೇಳಿದೆ. ಅವರು ದಯವಿಟ್ಟು ನೋಡಿ ಕ್ಯಾಬಿನೆಟ್ ಆದಮೇಲೆ ಎಂದು ಹೇಳಿದರು. ಅದರಂತೆ ಹೋಗಿ ನೋಡಿದೆ. ಅವರು ಕಾಗದ ಬರೆಯುತ್ತೇವೆಂದು ಹೇಳಿ ಸ್ಪಷ್ಟವಾಗಿ ಒಂದು ಕಾಗದ ಬರೆದರು. ಮಂತ್ರಿಗಳು ಬರೆದಂಥ ಕಾಗದದ ಜೆರಾಕ್ಸ್ ಕಾಪಿ, ಅವರ ಸರ್ಕಾರದ ಆದೇಶದಂತೆ ಸುತ್ತೋಲೆ ಮೇಲೆ ಮಾಡಿರತಕ್ಕಂಥ ಮೀಟಿಂಗ್‌ನ ರೆಸಲ್ಯೂಶನ್ ಕಾಪಿ, ಕೆಲಸಗಳನ್ನು ಪ್ರಪೋಸಲ್ ಮಾಡಿರತಕ್ಕಂಥ ಕಾಪಿ ಇಷ್ಟೆಲ್ಲಾ ಇಟ್ಟುಕೊಂಡು ಜಿಲ್ಲಾ ಪಂಚಾಯಿತಿಗೆ ತಿಳಿಸಿದರೂ ಕೂಡ ಅವರು ಒಂದೇ ಒಂದು ಕೆಲಸವನ್ನು ಕೂಡ ತೆಗೆದುಕೊಂಡಿಲ್ಲ. ಹಣ ಇರಲಿಲ್ಲವೇ, ಹಣ ಇತ್ತು. ನಾನು ಅದಕ್ಕೆ ಪ್ರಾರಂಭದಲ್ಲಿ ಹೇಳಿದೆ. ಕೆಲಾಮಿಟಿ ರಿಲೀಫ್‌ನಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಇ.ಎ.ಎಸ್ ಜೆ.ಆರ್.ವೈ.ನಲ್ಲಿ ಒಟ್ಟು, ನಮ್ಮ ಜಿಲ್ಲೆಗೆ ಎಷ್ಟು ಹಣ ಹೋಗಿತ್ತು? ಇಷ್ಟು ಇದ್ದರೂ ಏಕೆ ಇವರ ಕೈಯಲ್ಲಿ ಖರ್ಚು ಮಾಡಲಿಕ್ಕಾಗಲಿಲ್ಲ? ಏನು ತೊಂದರೆ ಇದೆ ಎನ್ನುವುದರ ಬಗ್ಗೆ ಹೇಳುವುದಾದರೆ, ನೀವು ಕೊಟ್ಟಿರತಕ್ಕ ಸುತ್ತೋಲೆಯಲ್ಲಿ ಇರತಕ್ಕ ತೊಡಕು. ಇದನ್ನು ಇವರು ಬಗೆಹರಿಸಲಿಕ್ಕಾಗಲಿಲ್ಲ ಎಂಬುದನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಾನು ವೈಯಕ್ತಿಕವಾಗಿ ಭೇಟಿ ಮಾಡಿ ಈ ವಿಚಾರವನ್ನು ಅವರ ಗಮನಕ್ಕೆ ತರತಕ್ಕಂಥದ್ದನ್ನು ಮಾಡಿದ್ದೇನೆ. ಅದಕ್ಕೆ ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಿದರು ಅದು ಖಂಡಿತ ಸತ್ಯ. ಇವರು ಮಾಡಿರತಕ್ಕ ಸುತ್ತೋಲೆಯಿಂದ ಸಮಸ್ಯೆ ಬಗೆಹರಿಯುತ್ತಾ ಇಲ್ಲ. ನಿರ್ದಿಷ್ಟವಾದ ಸುತ್ತೋಲೆಯನ್ನು ಕಂದಾಯ ಇಲಾಖೆಯ ಮೂಲಕ ಕೊಡುವುದರ ಮೂಲಕ ರಿಲೀಫ್ ಕಮಿಟಿ ಎನ್ನತಕ್ಕಂತಹದ್ದು ಏನು ಇದೆ, ಅದಕ್ಕೆ ಸರಿಯಾಗಿ ಅಧ್ಯಕ್ಷರು ಯಾವ ರೀತಿ ನಿರ್ವಹಣೆಯನ್ನು ಮಾಡಬೇಕು? ಅವರಿಗೆ ಕೆಲಸವನ್ನು ಪ್ರಪೋಸ್ ಮಾಡತಕ್ಕ ಅಧಿಕಾರ ಇದೆಯೇ? ಅಥವಾ ಇಲ್ಲವೇ ಹಣವನ್ನು ನೇರವಾಗಿ ಬಿಡುಗಡೆ ಮಾಡುತ್ತಾರೋ ಮತ್ತು

ಅನುಷ್ಠಾನವನ್ನು ಮಾನಿಟರಿಂಗ್ ಮಾಡತಕ್ಕ ಬಗ್ಗೆ ಪೂರ್ಣ ಅಧಿಕಾರ ಇದೆಯೇ ಎಂಬುದನ್ನು ಕಂದಾಯ ಮಂತ್ರಿಗಳು ಸ್ಪಷ್ಟಪಡಿಸಬೇಕು ಎಂದು ಕೇಳಲಿಕ್ಕೆ ಇಚ್ಛಿಪಡುತ್ತೇನೆ. ಜೊತೆಗೆ ಇ.ಎ.ಎಸ್ ಕೆಲಸಗಳಿಗೂ ಅಷ್ಟೆ ಇ.ಎ.ಎಸ್. ಇರತಕ್ಕ ತಾಲ್ಲೂಕುಗಳಲ್ಲಿ ಕೆಲಸವನ್ನು ಪ್ರಪೋಸ್ ಮಾಡತಕ್ಕ ಸಂದರ್ಭದಲ್ಲಿ ಅವರು ಯಾವ ರೀತಿ ಕೆಲಸವನ್ನು ಪ್ರಪೋಸ್ ಮಾಡಬೇಕು? ಮತ್ತು ಅದನ್ನು ನಿರ್ವಹಣೆ ಮಾಡತಕ್ಕಂತಹದ್ದು ಹೇಗೆ ಎಂಬುದನ್ನು ಸುತ್ತೋಲೆಯಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡತಕ್ಕ ಕೆಲಸವನ್ನು ಮಾಡಬೇಕಾಗುತ್ತದೆ. ಇ.ಎ.ಎಸ್ ಯೋಜನೆ ಇರುವ ತಾಲ್ಲೂಕುಗಳಲ್ಲಿ ನಾವು ಕೆಲಸವನ್ನು ಪ್ರಪೋಸ್ ಮಾಡಿ ಕಳುಹಿಸಿದರೆ, ಜಿಲ್ಲಾ ಪಂಚಾಯಿತಿಯವರು ಹೇಳುತ್ತಾರೆ, ಇದು ನಮಗೆ ಪೂರ್ಣ ಅಧಿಕಾರ ಇದೆ, ಪ್ರಪೋಸ್ ಮಾಡಿದ ಕೆಲಸವನ್ನೇ ಮಾಡಬೇಕು ಎಂದು ಏನೂ ಇಲ್ಲ, ಬೇಕಾದರೆ ಮಾಡುತ್ತೇವೆ, ಮಾಡದಿದ್ದರೆ ಬಿಡುತ್ತೇವೆನ್ನುವ ಮಾತನ್ನು ಹೇಳುವುದರ ಮೂಲಕ ನಾವು ಪ್ರಪೋಸ್ ಮಾಡಿದ ಒಂದೇ ಒಂದು ಕೆಲಸವನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಅವರು ಮಾಡಲಿಲ್ಲ. ಇದರ ಜೊತೆಗೆ ನಾನು ಈಗಾಗಲೇ ಹೇಳಿದ ಹಾಗೆ. ಇ.ಎ.ಎಸ್. ಯೋಜನೆ ಇರತಕ್ಕ ತಾಲ್ಲೂಕುಗಳಲ್ಲಿ ಸಾಕಷ್ಟು ಪ್ರಮುಖವಾದ ಪ್ರಗತಿ ಆಗಲಿಲ್ಲ ಎಂದು ಉದಾಹರಣೆಗೆ ನನ್ನ ಜಿಲ್ಲೆಯನ್ನು ಇಟ್ಟುಕೊಂಡು ಹೇಳುವುದಾದರೆ, ಇವತ್ತು ಇ.ಎ.ಎಸ್‌ನಲ್ಲಿ ಏನು ಹಣವನ್ನು ಒದಗಿಸತಕ್ಕಂತಹದ್ದನ್ನು ಮಾಡಿದ್ದಾರೆ, ಅದು ಖರ್ಚಾಗದಿರುವುದಕ್ಕೆ ಬಹಳಷ್ಟು ಕಾರಣಗಳು ಇವೆ. ಸಕಾಲದಲ್ಲಿ ಇವತ್ತು ಯೋಜನೆಗಳನ್ನು ಮಂಜೂರು ಮಾಡತಕ್ಕಂತಹದ್ದನ್ನೆಲ್ಲ ಮಾಡಲಿಲ್ಲ. ಇವತ್ತು ಇನ್ನೂ ಒಂದು ಗೊಂದಲ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಯಾವ ಕೆಲಸ ಯಾವ ಹಂತದಲ್ಲಿ ಆಗಬೇಕು ಎನ್ನತಕ್ಕಂತಹದ್ದು. ತಾಲ್ಲೂಕು ಪಂಚಾಯಿತಿ ಮಾಡಬೇಕೆ? ಜಿಲ್ಲಾ ಪಂಚಾಯಿತಿ ಮಾಡಬೇಕೇ? ಅಥವಾ ಗ್ರಾಮ ಪಂಚಾಯ್ತಿ ಮಾಡಬೇಕೆ? ಎಂಬುವುದರಲ್ಲಿ ಒಂದು ಗೊಂದಲ ನಿರ್ಮಾಣವಾಗಿದೆ. ಇ.ಎ.ಎಸ್ ವರ್ಕ್‌ನ್ನು ವಾಸ್ತವಿಕವಾಗಿ ಗ್ರಾಮ ಪಂಚಾಯಿತಿ ಹಂತದಲ್ಲಿ ಕೃಷಿ ಕಾರ್ಮಿಕರನ್ನು ನೋಂದಣಿ ಮಾಡುವುದರ ಮೂಲಕ ಅವರು ಶಿಫಾರಸ್ಸು ಮಾಡಿ ಅಂತಹ ಕೆಲಸಗಳನ್ನು ತಾಲ್ಲೂಕು ಪಂಚಾಯಿತಿಗಳ ಮೂಲಕ ಅನುಷ್ಠಾನಕ್ಕೆ ತರಬೇಕು ಎಂದು ಹೇಳಿ ಕೇಂದ್ರ ಸರ್ಕಾರದ ಏನೊಂದು ಮಾರ್ಗಸೂಚಿ ಇದೆ, ಅದನ್ನು ಇವತ್ತು ಅನುಸರಿಸುವುದನ್ನು ಜಿಲ್ಲಾ ಪಂಚಾಯಿತಿಗಳಾಗಲಿ, ತಾಲ್ಲೂಕು ಪಂಚಾಯಿತಿಗಳಾಗಲಿ, ಅಥವಾ ಗ್ರಾಮ ಪಂಚಾಯಿತಿಗಳಾಗಲಿ ಮಾಡುತ್ತಿಲ್ಲ. ಗ್ರಾಮ ಪಂಚಾಯಿತಿಯಲ್ಲಿ ನೋಂದಣಿ ಮಾಡಿ ಕಳುಹಿಸಿದರೆ, ತಾಲ್ಲೂಕು ಪಂಚಾಯಿತಿಯಲ್ಲಿ ಹೋಗಿ ಬೀಳುತ್ತದೆ. ತಾಲ್ಲೂಕು ಪಂಚಾಯಿತಿಯಲ್ಲಿ ಈಗಾಗಲೇ ಹೇಳಿದ ಹಾಗೆ ಕೆಲವು ಕಡೆ ಕಾರ್ಯನಿರ್ವಾಹಣಾಧಿಕಾರಿಗಳು ಇಲ್ಲ. ಆ ಕೆಲಸಕ್ಕೆ ಆಕ್ಷನ್‌ಪ್ಲಾನನ್ನು ಜಿಲ್ಲಾ ಪಂಚಾಯಿತಿಯವರು ಮಾಡುತ್ತಾರೆ. ಅದಕ್ಕೆ ಹಣ ಯಾರಿಗೆ ಹೋಗುತ್ತದೆ ಅಂದರ ಜಿಲ್ಲಾಧಿಕಾರಿಗಳಿಗೆ ಹೋಗುತ್ತದೆ. ಇ.ಎ.ಎಸ್ ಹಣ ಅವರು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಬಿಡುಗಡೆ ಮಾಡತಕ್ಕಂತಹದ್ದು. ಈ ಒಂದು ಗೊಂದಲದ ಮಧ್ಯದಲ್ಲಿ ಇ.ಎ.ಎಸ್ ಹಣವನ್ನು ತೀವ್ರ ಬರಗಾಲ ಏನಿದೆ, ಇವತ್ತು ಉದ್ಯೋಗವನ್ನು ಸೃಜಿಸತಕ್ಕ, ಉದ್ಯೋಗವನ್ನು ಒದಗಿಸತಕ್ಕ ದೃಷ್ಟಿಯಿಂದ ಹಣವನ್ನು ಖರ್ಚು ಮಾಡುತ್ತೇವೆಂದು ಸರ್ಕಾರದವರು ಹೇಳುತ್ತಿದ್ದ ಹಾಗೆ ಹೇಳಿದರೂ ಕೂಡ ಹಣ ಇದ್ದರೂ ಕೂಡ ಅದನ್ನು ಖರ್ಚು ಮಾಡುವುದಕ್ಕೆ ಈ ಗೊಂದಲದ ಹಿನ್ನೆಲೆಯಲ್ಲಿ ಅವರಿಗೆ ಆಗಲಿಲ್ಲ. ರೈತ ಏನು ಕಷ್ಟದಲ್ಲಿದ್ದ ಅವನಿಗೆ ಉದ್ಯೋಗವನ್ನು ಒದಗಿಸತಕ್ಕ ಕೆಲಸವನ್ನು ಇವರು ಮಾಡಲಿಕ್ಕೆ ಆಗಲಿಲ್ಲ. ಬಹುಶಃ ನನ್ನ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಉದ್ಯೋಗ ಭರವಸೆಯ ಒಂದು ಕ್ರಿಯಾ ಶೀಲ ಯೋಜನೆ ಮಂಜೂರಾತಿಯಾಗಿ ಕೇವಲ 10 ದಿವಸಗಳೂ ಕೂಡ ಆಗಿಲ್ಲ. ಇವತ್ತು ಎಷ್ಟು ಹಣವನ್ನು

ಖರ್ಚು ಮಾಡಿದ್ದಾರೆಂಬುದರ ಬಗ್ಗೆ ಮಾಹಿತಿಯನ್ನು ತರಿಸಿ ಈ ಸದನದಲ್ಲಿ ಉತ್ತರ ಕೊಡತಕ್ಕಂತಹ ಕಾಲದಲ್ಲಿ ಕೊಡಲಿ. ಆವಾಗ ನಿಜವಾದ ವಿಚಾರ ಏನೆಂಬುದು ಗೊತ್ತಾಗುತ್ತದೆ. ಇವರ ಹೇಳಿಕೆಯಲ್ಲಿ ಹೇಳಿದ್ದಾರೆ, ಹಣ ಎಷ್ಟು ಇತ್ತು? ಒ.ಬಿ.ಎಷ್ಟು ಇತ್ತು? ಜೆ.ಆರ್.ವೈ. ಎಷ್ಟು ಬಿಡುಗಡೆಯಾಯಿತು? ಇ.ಎ.ಎಸ್. ಎಷ್ಟು ಬಿಡುಗಡೆಯಾಗಿದೆ? ಎಷ್ಟು ಹಣ ಇತ್ತು? ನಿಜ, ಹಣ ಇದೆ ಎನ್ನತಕ್ಕಂತಹದ್ದರ ಬಗ್ಗೆ ಎರಡನೆಯ ಪ್ರಶ್ನೆ ಇಲ್ಲ. ಆದರೆ ಎಷ್ಟು ಕೆಲಸವಾಯಿತು ಎಂಬುದನ್ನು ಪ್ರಾಮಾಣಿಕವಾಗಿ ಕೊಡತಕ್ಕಂತಹ ಕೆಲಸವನ್ನು ಮಾಡಿದರೆ, ಆವಾಗ ಇವರಿಗೆ ಅರ್ಥವಾಗುತ್ತೆ, ತೀವ್ರ ಬರಗಾಲ ಇದ್ದಂತಹ ಕಾಲದಲ್ಲಿ ರೈತರಿಗೆ ಸ್ಪಂದಿಸಿ ನೀವು ಕೆಲಸವನ್ನು ಮಾಡತಕ್ಕಂತಹದ್ದನ್ನು ಮಾಡಿದ್ದಾರೆ ಎನ್ನತಕ್ಕಂಥ ಅರಿವು ಅವರಿಗೆ ಆಗುತ್ತದೆಯೇ ವಿನಹ ಬಹುಶಃ ಅವರು ಹೇಳುತ್ತಿರತಕ್ಕಂತಹ ವಿಚಾರದಲ್ಲಿ ಗಮನಹರಿಸತಕ್ಕಂತಹ ಕೆಲಸವನ್ನು ಸರ್ಕಾರದವರು ಮಾಡುವುದಿಲ್ಲ. ವೈಯಕ್ತಿಕವಾಗಿ ನಾವು ಅವರನ್ನು ಭೇಟಿ ಮಾಡಿ ನೋಡಿದ್ದೇವೆ. ಆರ್.ಡಿ.ಒ.ಆರ್ ಮಂತ್ರಿಗಳಿಂದ ಕಾಗದ ಬರೆಸಿ ನೋಡಿದ್ದೇವೆ. ಫೋನ್ ಮಾಡಿ ನೋಡಿದ್ದೇವೆ. ಬಹಳ ತಾತ್ಸಾರವಾಗಿ ತೆಗೆದುಕೊಳ್ಳತಕ್ಕಂತಹದ್ದು, ಕೇವಲವಾಗಿ ತೆಗೆದುಕೊಳ್ಳತಕ್ಕಂತಹದ್ದು ಮುಖ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಜನತಾ ದರ್ಶನದ ಕಾರ್ಯಕ್ರಮಕ್ಕೆ ಬಂದಂತಹ ಸಂದರ್ಭದಲ್ಲಿ 35 ನಿಮಿಷ ನಾನು ಮಾತನಾಡಿದ್ದೇನೆ. ಈ ವಿಚಾರಗಳ ಬಗ್ಗೆ ಅಂಕಿ ಅಂಶಗಳನ್ನು ಅವರ ಮುಂದಿಡತಕ್ಕ ಕೆಲಸವನ್ನು ನಾನು ಮಾಡಿದೆ. ಇ.ಎ.ಎಸ್ ಹಣ ಎಷ್ಟು ಇದೆ? ಜೆ.ಆರ್.ವೈ ಹಣ ಎಷ್ಟು ಇದೆ? ಒ.ಬಿ. ಎಷ್ಟು ಇತ್ತು, ನಿಮ್ಮ ಡಿ.ಪಿ.ಎ.ಪಿ. ಪ್ರೋಗ್ರಾಂನಲ್ಲಿ ಹಣ ಎಷ್ಟು ಇತ್ತು? ಆಕ್ಷನ್ ಪ್ಲಾನ್ ಮಂಜೂರಾತಿಯಾಗಿದೆಯಾ? ನಿಮ್ಮ ಜೆ.ಆರ್.ವೈ ನಲ್ಲಿ ನಮ್ಮ ಜಿಲ್ಲೆಗೆ ಎಷ್ಟು ಹಣ ಮಂಜೂರಾಗಿ ಬಂದಿದೆ ಗ್ರಾಮ ಪಂಚಾಯ್ತಿಯಲ್ಲಿ ಆಕ್ಷನ್ ಪ್ಲಾನ್ ತಯಾರು ಮಾಡಿ ತಾಲ್ಲೂಕು ಪಂಚಾಯ್ತಿಗೆ ಕಳುಹಿಸಿಕೊಟ್ಟಿದ್ದಾರಾ ಅಥವಾ ಇಲ್ಲವೇ? ತಾಲ್ಲೂಕು ಪಂಚಾಯಿತಿಯವರು ಅದನ್ನು ಅಪ್ರೂವ್ ಮಾಡಿದ್ದಾರೋ ಅಥವಾ ಇಲ್ಲವೋ? ಜೆ.ಆರ್.ವೈ. ಯೋಜನೆಯಲ್ಲಿ 20 ಪರ್ಸೆಂಟ್ ಹಣ ಬಂತು ಅದನ್ನು ಯಾವ ರೀತಿ ಖರ್ಚು ಮಾಡುತ್ತಿದ್ದೀರಿ? ಇವತ್ತು ಬಿಲ್ಡಿಂಗ್‌ಗಳನ್ನು ಕಟ್ಟಲಿಕ್ಕೆ ಹಣವನ್ನು ಉಪಯೋಗಿಸತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. 60 ಪರ್ಸೆಂಟ್ ರೇಶಿಯೋದಲ್ಲಿ ಉದ್ಯೋಗವನ್ನು ಒದಗಿಸತಕ್ಕ ಕೆಲಸವನ್ನು ಮಾಡಿ ಎಂದು ಆದೇಶವನ್ನು ಕೇಂದ್ರ ಸರ್ಕಾರ ಕೊಟ್ಟಿದ್ದರೂ ಅದನ್ನು ಉಲ್ಲಂಘನೆ ಮಾಡತಕ್ಕ ಕೆಲಸವನ್ನು ಮಾಡಿದ್ದಾರೆ. ಅವತ್ತು ಆರ್.ಡಿ.ಪಿ.ಆರ್ ಮಂತ್ರಿಗಳೂ ಹಾಸನದಲ್ಲಿ ನಡೆದಂತಹ ಸಭೆಯಲ್ಲಿದ್ದರು. ಮುಖ್ಯ ಮಂತ್ರಿಗಳು ಇದ್ದರು. ಆಗ ಒಪ್ಪಿಕೊಂಡು ಬಂದರು. ಒಪ್ಪಿಕೊಂಡು ಬಂದಮೇಲೆ ಇಷ್ಟು ದಿವಸಗಳಾದರೂ ಆ ಕ್ರಿಯಾಶೀಲಾ ಯೋಜನೆಯನ್ನು ಮಂಜೂರಾತಿ ಮಾಡತಕ್ಕಂತಹದ್ದನ್ನು ಮಾಡಿದ್ದಾರೆಯೇ? ಇವತ್ತು ಸರಿಯಾದ ರೀತಿಯಲ್ಲಿ ಗಮನವನ್ನು ಹರಿಸದೆ, ಸುಮ್ಮನೆ ಕೇವಲ ಕಣ್ಣೊರೆಸತಕ್ಕ ದಿಸೆಯಲ್ಲಿ ಈ ರೀತಿಯ ಅಂಕಿ ಅಂಶಗಳನ್ನು ಕೊಡತಕ್ಕಂತಹದ್ದರ ಮೂಲಕ ಬಹುಶಃ ರೈತರ ಸಮಸ್ಯೆಯನ್ನು ಬಗೆಹರಿಸತಕ್ಕದ್ದು ಸುಲಭವಾದ ಕೆಲಸ ಅಲ್ಲ. ಕಾಳಜಿ ಇದ್ದು, ಸ್ಪಂಧಿಸತಕ್ಕ ಕೆಲಸವನ್ನು ಮಾಡಿ, ಅಂಕಿ ಅಂಶಗಳನ್ನು ತರಿಸಿ, ಯೋಜನೆಗಳಿಗೆ ಸಕಾಲದಲ್ಲಿ ಮಂಜೂರಾತಿಯನ್ನು ನೀಡಿದೆಯೇ? ಹಣ ಬಿಡುಗಡೆಯಾಗಿದೆಯೇ? ಕಾರ್ಯಕ್ರಮ ಅನುಷ್ಠಾನಕ್ಕೆ ಬಂದಿದೆಯೆ ಅನ್ನತಕ್ಕಂತಹದ್ದನ್ನು ಕಾಲ ಕಾಲದಲ್ಲಿ ನೋಡುವುದರ ಮೂಲಕ ಸಾಧ್ಯತೆ ಇದೆ ಇವತ್ತು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡತಕ್ಕಂತಹ ಕೆಲಸವನ್ನೂ ಮಾಡಿದ್ದಾರೆ. ಆದರೆ ಹಾಸನ ಜಿಲ್ಲೆಗೆ ಸಂಬಂಧಪಟ್ಟ ಉಸ್ತುವಾರಿ ಸಚಿವರು ಎಷ್ಟು ದಿವಸ ಬಂದು, ಆ ಸಭೆಯನ್ನು ಮಾಡಿ ಎಷ್ಟು ಕಾಮಗಾರಿಗಳನ್ನು ತೆಗೆದುಕೊಂಡಿದ್ದಾರೆ? ಎಷ್ಟು ಕ್ರಿಯಾಶೀಲಾ ಯೋಜನೆಯಾಗಿದೆ? ಎಷ್ಟು ಹಣ

ಖರ್ಚಾಗಿದೆ ಎನ್ನತಕ್ಕಂತಹದ್ದನ್ನು ಏನಾದರೂ ಮಾಡಿದ್ದಾರೆಯೇ ಎಂಬುದಾಗಿ ತಮ್ಮ ಮೂಲಕ ಸರ್ಕಾರದವರನ್ನು ಪ್ರಶ್ನೆ ಕೇಳಬೇಕಾಗಿದೆ. ಆ ಸುತ್ತೋಲೆ ಕಾಪಿ ನಮ್ಮ ಹತ್ತಿರ ಇದೆ. ಈ ಕಾಪಿಯನ್ನು ಇಟ್ಟುಕೊಂಡು ಏನು ಮಾಡಬೇಕು? ಕಾಪಿಯನ್ನು ಕಳುಹಿಸಿದ್ದಾರೆ. ಉಸ್ತುವಾರಿ ಸಚಿವರಲ್ಲಿ ಜಿಲ್ಲೆಯಲ್ಲಿ ಬರದ ಕಾಮಗಾರಿಗಳನ್ನು ನಿರ್ವಹಣೆ ಮಾಡತಕ್ಕಂತಹದ್ದರ ಬಗ್ಗೆ ಏನು ಹೇಳುತ್ತಿದ್ದಾರೆ, ಇವರ ಇ.ಎ.ಎಸ್., ಜೆ.ಆರ್.ವೈ. ಇವುಗಳ ಬಗ್ಗೆ ಖರ್ಚು ಮಾಡಿರತಕ್ಕ ಹಣದ ವಿವರಗಳ ಬಗ್ಗೆ ಕಾಪಿ ತರಿಸಿ ನೋಡಿದರೆ ಸಾಕು, ಅವರ ಸರ್ಕಾರದವರೇ ಪ್ರಕಟಣೆ ಮಾಡಿರತಕ್ಕಂತಹದ್ದು 1-8-95 ಕ್ಕೆ 4 ತಿಂಗಳ, ಅವಧಿಯಲ್ಲೆ ಇದ್ದಂತಹ ಹಣದಲ್ಲಿ ಎಷ್ಟು ಖರ್ಚು ಮಾಡಿದ್ದೇವೆ, ಎಂಬುದರ ವಿವರಗಳನ್ನು ಒಳಗೊಂಡ ಅಂಕಿ ಅಂಶಗಳನ್ನು ಅವರೇ ಬಿಡುಗಡೆ ಮಾಡಿದ್ದಾರೆ. ನಾಲ್ಕನೆ ಒಂದು ಭಾಗದಷ್ಟು ಹಣವನ್ನೂ ಇದ್ದಂತಹ ಹಣದಲ್ಲಿ ಖರ್ಚು ಮಾಡಿಲ್ಲ. ಅದು ಆದ ನಂತರ ಮಳೆಗಾಲ ಪ್ರಾರಂಭವಾಗಿದೆ. ಇವರ ಅವಶ್ಯಕತೆ ಇಲ್ಲ; ಇನ್ನೊಂದು ಮಾತನ್ನು ನಾನು ಹೇಳುತ್ತಿದ್ದೇನೆ. ವಾಟಾಳ್ ನಾಗರಾಜ್‌ರವರು ಅದನ್ನೇ ಹೇಳಿದರು...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಎಷ್ಟು ಖರ್ಚಾಗಿದೆ? ಎಷ್ಟು ಬಿಡುಗಡೆಯಾಗಿದೆ? ಎಂಬುದನ್ನು ಹೇಳಿದರೆ ಗೊತ್ತಾಗುತ್ತದೆ.

ಶ್ರೀ ಬಿ.ಶಿವರಾಮು:- ಒಟ್ಟು ಜೆ.ಆರ್.ವೈ-1 ಮತ್ತು 2 ಇ.ಎ.ಎಸ್. ಆಮೇಲೆ ನೆಮ್ಮದಿ ಡಿ.ಪಿ.ಎ.ಪಿ. ವೆಸ್ಟರ್ನ್ ಘಾಟ್, ಸ್ಕೀಮ್ ಇಷ್ಟರಿಂದ 1.8.95 ರವರೆಗೆ ಬಿಡುಗಡೆಯಾಗಿರತಕ್ಕಂತಹ ಹಣ 257.59 ಕೋಟಿ ರೂಪಾಯಿಗಳು. ಖರ್ಚಾಗಿರತಕ್ಕಂತಹ ಹಣ ಕಂದಾಯ ಮಂತ್ರಿಗಳು ದಯಮಾಡಿ ಕೇಳಕೊಳ್ಳಬೇಕು. 62.55 ಕೋಟಿ. Not even one fourth ನಾನು ಹೇಳತಕ್ಕಂತಹದಲ್ಲ. ಏರಿಯಾ ಡೆವಲಪ್‌ಮೆಂಟ್ ಪ್ರೊಗ್ರಾಂ ಈ ಯೋಜನೆಗಳನ್ನು ಮಾನಿಟರಿಂಗ್ ಮಾಡಲಿಕ್ಕೆ ಒಂದು ಸೆಲ್ ಎಂದು ಮಾಡಿದ್ದಾರೆ, ಅವರ ಡೈರೆಕ್ಟೋರೇಟ್ ಏನು ಇದೆ, ಅವರು ಕೊಟ್ಟಿರತಕ್ಕ ಮಾಹಿತಿ. ಇವರದಕ್ಕೂ, ಅವರದಕ್ಕೂ ವ್ಯತ್ಯಾಸವನ್ನು ನಾನು ನೋಡುತ್ತಾ ಇದ್ದೇನೆ.

ಶ್ರೀ ಆರ್.ಎಲ್.ಜಾಲಪ್ಪ:- ವೆಸ್ಟರ್ನ್ ಘಾಟ್ ಡೆವಲಪ್‌ಮೆಂಟ್ ಅದಕ್ಕೆಲ್ಲಾ ಕೊಟ್ಟಿರುವುದು ಪೂರ್ತಿ ವರ್ಷಕ್ಕೆ. 3 ತಿಂಗಳಲ್ಲಿ ಮುಗಿಸುತ್ತೇನೆ ಎಂದು ಹೇಳುವುದಕ್ಕಾಗುವುದಿಲ್ಲ 3 ತಿಂಗಳಲ್ಲೆ ಮುಗಿಸುವುದಕ್ಕೂ ಆಗುವುದಿಲ್ಲ ಅದನ್ನು

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲ, ಇಲ್ಲಿಯವರೆಗೆ 235 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಹೆಡ್ಸ್‌ಗಳಲ್ಲಿ ತಾವು ಒಟ್ಟು ಬಿಡುಗಡೆ ಮಾಡಿದ್ದೀರಿ. ಮಾನ್ಯ ಸದಸ್ಯರು ವೆಸ್ಟರ್ನ್ ಘಾಟ್ ಒಂದನ್ನೆ ಹೇಳಲಿಲ್ಲ. ಎಲ್ಲ ಯೋಜನೆಗಳನ್ನು ಹೇಳಿದ್ದಾರೆ. ಎಲ್ಲ ಯೋಜನೆಗಳಲ್ಲಿ ಒಟ್ಟು ಬಿಡುಗಡೆಯಾಗಿರುವ 235 ಕೋಟಿಯಲ್ಲಿ ಖರ್ಚಾಗಿರುವುದು ಕೇವಲ 62.55 ಕೋಟಿ ರೂಪಾಯಿಗಳು ಮಾತ್ರ.

ಶ್ರೀ ಬಿ.ಶಿವರಾಮು:- ನಿಮಗೆ ಬೇಕಾದರೆ ವಿವರ ಹೇಳುತ್ತೇನೆ. ಜೆ.ಆರ್.ವೈಯಲ್ಲಿ ಬಿಡುಗಡೆಯಾಗಿರುವುದು 82.00 ಕೋಟಿ.

ಶ್ರೀ ಆರ್.ಎಲ್.ಜಾಲಪ್ಪ:- ಜೆ.ಆರ್.ವೈ.ಯಲ್ಲಿ 20 ಪರ್ಸೆಂಟ್ ಜಿಲ್ಲಾ ಪಂಚಾಯಿತಿಗಳಿಗೆ ಹಂಚುತ್ತಾರೆ ಇನ್ನುಳಿದ 80 ಪರ್ಸೆಂಟನ್ನು ಗ್ರಾಮ ಪಂಚಾಯ್ತಿಗಳಿಗೆ ಹಂಚುತ್ತಾರೆ. ಅವರು ಕಮಿಟಿಗೆ ವರ್ಕ್ಸ್ ಇದೆಯಲ್ಲಾ, ಹಿಂದೆ ತೆಗೆದುಕೊಂಡು ಪೂರ್ಣವಾಗದೆ ಇರತಕ್ಕಂತಹ ಆನ್-ಗೋಯಿಂಗ್ ವರ್ಕ್ಸ್, ಮತ್ತು ಅದರ ಆಕ್ಷನ್ ಪ್ಲಾನ್ ಇದಕ್ಕೆಲ್ಲಾ ಖರ್ಚು ಮಾಡಬೇಕೆಂಬುದಾಗಿ ಅವರು ಹಣವನ್ನು ಇಟ್ಟುಕೊಂಡು ಕುಳಿತಿದ್ದಾರೆ. ಆದ್ದರಿಂದ ಜೆ.ಆರ್.ವೈ ಯಲ್ಲಿ ನಾವು ಹೆಚ್ಚು ಹಣವನ್ನು ಖರ್ಚು

ಮಾಡುವುದಕ್ಕಾಗುತ್ತಿಲ್ಲ.

ಶ್ರೀ ಬಿ.ಶಿವರಾಮು:- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಗ್ರಾಮ ಪಂಚಾಯಿತಿ ಮೂಲಕ ಖರ್ಚು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ, ಅದು ಸುಳ್ಳು, ನಾನು ಅದಕ್ಕೇ ಹೇಳಿದೆ, ತಾಲ್ಲೂಕು ಪಂಚಾಯಿತಿಗಳು ಗ್ರಾಮ ಪಂಚಾಯಿತಿಗಳಿಗೆ ಕಳುಹಿಸಿದ ನಂತರ ಕ್ರಿಯಾಶೀಲ ಯೋಜನೆಯನ್ನು ಎಷ್ಟು ದಿವಸಗಳಲ್ಲಿ ಅನುಮೋದನೆ ಮಾಡಬೇಕು ಎಂದು ಇದೆ? ಅದರಂತೆ ಎಷ್ಟು ದಿವಸಗಳಲ್ಲಿ ಆ ಯೋಜನೆಗೆ ಅನುಮೋದನೆ ಮಾಡಿದ್ದಾರೆಂಬುದನ್ನು ತಿಳಿದುಕೊಳ್ಳಿ ಸಾಕು.

ಶ್ರೀ ಆರ್.ಎಲ್.ಜಾಲಪ್ಪ:- ಅವು ಸ್ವಾಯತ್ತತೆ ಇರತಕ್ಕಂತಹ ಸಂಸ್ಥೆಗಳು; ಸ್ವಲ್ಪ ಹೆಚ್ಚು ಕಡಿಮೆ ನಿಧಾನವಾಗಿರಬಹುದು. 15 ದಿವಸ ನಿಧಾನವಾಗಿರಬಹುದು; ಅನುಮೋದನೆ ಕೊಡುವುದಕ್ಕೆ. ಆಕ್ಷನ್ ಪ್ಲಾನ್ ಅಪ್ರೂವಲ್ ಕೊಡುವುದಕ್ಕೆ 1 ತಿಂಗಳು ನಿಧಾನವಾಗಿರಬಹುದು. That is possible. ಆದರೆ ಕೆಲಸ ನಿಲ್ಲಿಸಬೇಕು ಎಂದು ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ:- ಸ್ವಲ್ಪ ಕೇಳಿ, ನಮ್ಮ ಆಲಿಗೇಷನ್ ಏನು ಇದೆ ಎಂದರೆ, ತಾವು ಬರಗಾಲದಲ್ಲಿ ಹೆಚ್ಚಿನ ಹಣವನ್ನು ಕೊಟ್ಟಿಲ್ಲ ಅಂದರೆ ನ್ಯಾಚುರಲ್ ಕೆಲಾಮಿಟಿಯಲ್ಲಿ. ಕೊಡಲಾರದ ಮಟ್ಟಿಗೆ ಅದು ಹಣ ಖರ್ಚಾಗಿಲ್ಲ. ನಿವು ಬಿಡುಗಡೆಯನ್ನೂ ಮಾಡಿಲ್ಲವೆಂದು ನಮ್ಮ ಆಪಾದನೆ. ನೀವು ಏನು ಹೇಳುತ್ತಿದ್ದೀರಿ? ನ್ಯಾಚುರಲ್ ಕೆಲಾಮಿಟಿಯಲ್ಲಿ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದೇವೆ, ಆದರೆ ಹೆಚ್ಚಿನ ಹಣವನ್ನು ನಾವು ಜವಾಹರ್ ರೋಜ್‌ಗಾರ್ ಯೋಜನೆ, ಹಾಗೂ ಬೇರೆ ಬೇರೆ ಯೋಜನೆಗಳಲ್ಲಿ ನಾವು ಬಿಡುಗಡೆ ಮಾಡಿದ್ದೇವೆ,ಅದಕ್ಕಾಗಿ ಇದರ ಅವಶ್ಯಕತೆ ಇರಲಿಲ್ಲ, ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾತ್ರ ನಾವು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಆದರೆ ತಾವು ಯಾವ ಹೆಡ್‌ನಲ್ಲಿ ಹಣವನ್ನು ಕೊಟ್ಟಿದ್ದೀರಿ, ಎಲ್ಲಾ ಸೇರಿಸಿ 235.00 ಕೋಟಿ ರೂಪಾಯಿಗಳು ಅದರಲ್ಲಿ ಖರ್ಚಾಗಿಲ್ಲ. ಅದರಲ್ಲೂ ಖರ್ಚಾಗಿರುವುದು 62.55 ಕೋಟಿ ಪುನಃ ನಾವು ಕೇಳುವುದಕ್ಕೆ ಹೋದರೆ ತಾವು ಏನು ಹೇಳುತ್ತೀರಿ? ತಾಲ್ಲೂಕು ಪಂಚಾಯಿತಿ ಖರ್ಚು ಮಾಡಿಲ್ಲ ಎಂದು. ಮತ್ತೆ ಖರ್ಚು ಮಾಡುವುದೇ ಅವರ ಮುಖಾಂತರ. ಖರ್ಚು ಮಾಡಲಿಲ್ಲ ಅಂದರೆ ತಾವು ರಿವ್ಯೂ ಮಾಡಿ. ಸೂಪರ್‌ಸೀಡ್ ಮಾಡಿ. ಇಲ್ಲದಿದ್ದರೆ ವಾರ್ನ್ ಮಾಡಿ. ಏನಾದರೂ ಒಂದು ಮಾಡಬೇಕಲ್ಲ. ತಾವು ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ, ಖರ್ಚು ಮಾಡಿಲ್ಲ ನಾವು ಏನು ಮಾಡುವುದಕ್ಕೆ ಆಗುತ್ತದೆ? ಅವರು ಇಂಡಿಪೆಂಡೆಂಟ್, ಸ್ವಾಯತ್ತತೆ ಇದೆ ಅವರಿಗೆ. ಅವರು ಏನು ಬೇಕಾದರೂ ಮಾಡಬಹುದು ಎಂದು ಹೇಳಿದರೆ ಹೇಗೆ? ಮತ್ತೆ ಜನರ ಕಷ್ಟವನ್ನು ಯಾರು ಪರಿಹಾರ ಮಾಡುವುದು? ನೀವು ಇವತ್ತು ಅವರ ಮುಖಾಂತರವೇ ಈ ಹಣವನ್ನು ಖರ್ಚು ಮಾಡಬೇಕಾಗಿದೆ. ಯಾವಾಗ ಅವರು ಖರ್ಚು ಮಾಡುವುದಿಲ್ಲವೆಂದರೆ ನೀವು ಹಾಕಿಕೊಂಡ ಕಾರ್ಯಕ್ರಮವೇನು? ಮತ್ತು ಆ ಜನರಿಗೆ ಪರಿಹಾರ ಸಿಕ್ಕಿದ್ದುದು ಏನು? ನಾವು ಫಿಗರ್ಸ್ ಹೇಳುತ್ತೇವೆ, 235 ಕೋಟಿ ಕೊಟ್ಟಿದ್ದೇವೆಂದು. ಇಷ್ಟಾಯಿತು, ಖರ್ಚು ಎಷ್ಟಾಯಿತು ನಿಮ್ಮ ಮಾನಿಟರಿಂಗ್ ಸೆಲ್‌ನವರೇ ಸ್ಟೇಟ್‌ಮೆಂಟ್ ಕೊಡುವಾಗ ನಾವು 62 ಕೋಟಿ ಖರ್ಚುಮಾಡಿದ್ದೇವೆಂದರೆ ಇದು ನಮಗೆಲ್ಲರಿಗೂ ಭೂಷಣ ತರುತ್ತದೆಯೇ? ಮತ್ತೆ ಯಾವ ಬರಗಾಲ ಕೆಲಸ ಆದ ಹಾಗಾಯಿತು? ದಯವಿಟ್ಟು ತಾವು ಹೇಳಿ, ಅದಕ್ಕೆ ಪಂಚಾಯತ್ ರಾಜ್ ಮಿನಿಸ್ಟರ್ ಇವತ್ತು ನಾವು ಹೆಚ್ಚಿನ ಹಣ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಹಣ ಖರ್ಚಾಗಿಲ್ಲವೆಂದರೆ ನೀವು ರಿಲೀಫ್ ವರ್ಕ್ ಕೊಟ್ಟಹಾಗೆ ಆಯಿತಾ?

ಶ್ರೀಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಹೇಳಿದ ಹಾಗೆ

ತಾವು ಹಣವನ್ನು ಬೇರೆ ಬೇರೆ ಬಾಬಿನಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ. ಆ ಹಣ ಖರ್ಚಾಗಿಲ್ಲ. ನ್ಯಾಚುರಲ್ ಕೆಲಾಮಿಟಿಗೆ ಏನು ಫಂಡ್ ಬರುತ್ತದೆ ಅದನ್ನೂ ಸಹ ಖರ್ಚು ಮಾಡಿಲ್ಲ. ನಾನು ತಮಗೆ ತಮ್ಮ ಉಪಾಧ್ಯಕ್ಷರ ಮೂಲಕ ಕೇಳುತ್ತೇನೆ, ಸಪೋಸ್ ರಾಜ್ಯದಲ್ಲಿ ಬರಗಾಲ ಬಂದಿರಲಿಲ್ಲ. ಜವಹರ್ ರೋಜ್‌ಗಾರ್ ಯೋಜನೆ ಕೆಲಸವನ್ನು ನಾವು ಮಾಡುತ್ತಿರಲಿಲ್ಲವೆ? ಬೇರೆ ಬೇರೆ ಕೇಂದ್ರ ಸರ್ಕಾರದ ಸ್ಕೀಮ್‌ಗಳಲ್ಲಿ ನಾವು ಕೆಲಸ ಮಾಡುತ್ತಿರಲ್ಲಿವೆ? ಬರಗಾಲ ಬಂದಾಗ ರಾಜ್ಯ ಸರ್ಕಾರದಿಂದ ಹಣವನ್ನು ಬಿಡುಗಡೆ ಮಾಡಿ, ನ್ಯಾಚುರಲ್ ಕೆಲಾಮಿಟಿ ಫಂಡ್‌ನಿಂದ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಆ ತಕ್ಷಣಕ್ಕೆ ತಾವು ಸ್ಪಂಧಿಸಬೇಕಾಗಿತ್ತು. ಈಗ ತಾವು ಹೇಳಬಹುದು ಮಳೆ ಬಂದಿದೆ ಕೆರೆ ಕಟ್ಟೆಗಳು ತುಂಬಿದೆ ತುಂಬಾ ಸಂತೋಷ. ನಾವು ದೇವರಲ್ಲಿ ಅದನ್ನೇ ಪ್ರಾರ್ಥನೆ ಮಾಡುವುದು. ನಾವು ಬರಗಾಲವನ್ನು ನಿರೀಕ್ಷೆ ಮಾಡಿ ನಾವು ಯಾರೂ ದೇವರನ್ನು ಪ್ರಾರ್ಥನೆ ಮಾಡುವುದಿಲ್ಲ. ಆದರೆ ಸಂಕಷ್ಟಕ್ಕೆ ಸಿಕ್ಕದಾಗ ಎಲ್ಲೂ ಸಹ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡಲಿಲ್ಲ. ಅವರ ಸಮಸ್ಯೆಗಳನ್ನು ಬಗೆಹರಿಸಲಿಲ್ಲ ಈಗಲಾದರೂ ಅದನ್ನು ಸರಿಯಾದ ರೀತಿಯಲ್ಲಿ ಗಮನಿಸಿ ಅದು ಆಗುವ ರೀತಿಯಲ್ಲಿ ನೋಡಿಕೊಳ್ಳದೆ, ಈ ಜವಾಹರ್ ರೋಜ್‌ಗಾರ ಯೋಜನೆಯಿಂದ ಖರ್ಚುಮಾಡಿದ್ದೇವೆ. ಇನ್ನಾವುದರಲ್ಲೋ ಖರ್ಚುಮಾಡಿದ್ದೇವೆಂದರೆ, ಯಾವುದೋ ವರ್ಷದ 365 ದಿವಸ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣ, ಅದನ್ನು ಸಹ ಖರ್ಚು ಮಾಡಿಲ್ಲ. ಮತ್ತೆ ಅದನ್ನು ತೋರಿಸುತ್ತಿದ್ದೀರಿ. ನಿಮಗೆ ಹೇಗೆ ಮನಸ್ಸು ಒಪ್ಪುತ್ತದೆ?

ಶ್ರೀ ಆರ್.ಎಲ್.ಜಾಲಪ್ಪ:- ಶಾಸಕರು ಅಲ್ಲಿ ಕುಳಿತುಕೊಂಡು ಹಣವನ್ನು ಖರ್ಚು ಮಾಡಲಿಯೆಂದು ತಮ್ಮನ್ನು ಆದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ನೀವು ಹೇಳುತ್ತೀರಿ ನಮಗೆ ಅಧಿಕಾರ ಇಲ್ಲ ಅದು ಇಲ್ಲ, ಇದಿಲ್ಲವೆಂದು ಹೇಳುತ್ತೀರಿ.

ಶ್ರೀ ವಾಟಾಳ್‌ನಾಗರಾಜ್: ಅದು ಅರ್ಥವಿಲ್ಲದ ವ್ಯವಸ್ಥೆ. ಏನು ಅಂದರೆ ಏನೂ ಇಲ್ಲ ಅದರಲ್ಲಿ.

ಶ್ರೀ ಆರ್.ಎಲ್.ಜಾಲಪ್ಪ:- ನೀವು ಹೇಳಿದ ಕೆಲಸವನ್ನೇ ತೆಗೆದುಕೊಳ್ಳಬೇಕು means it is not possible. The system has changed ಜಿಲ್ಲಾಪಂಚಾಯತ್ ಆಕ್ಟ್ ಬಂದಮೇಲೆ ಸಿಸ್ಟಂ ಚೇಂಜ್ ಆಗಿದೆ. ಪ್ರತಿಯೊಂದು ಶಾಸಕರು ಹೇಳಿದಹಾಗೆ ಮಾಡಬೇಕೆಂದರೆ ಅಲ್ಲಿ ಅವರು ಒಪ್ಪುವುದಿಲ್ಲ. These complications are there. ಈಗ ಆಗುವ ಕೆಲಸ ಸರಿಯಾಗಿ ಆಗುತ್ತಿದೆಯೋ ಅಥವಾ ಇಲ್ಲವೋ, ಏಕೆ ಸರಿಯಾಗಿ ಮುಗಿಸುವುದಿಲ್ಲವೆಂದು ಕೇಳುವುದಕ್ಕೆ ವಾಟಾಳ್‌ರವರಿಗೆ ಏನು ತೊಂದರೆ? ನಿಮಗೆ ಯಾರು ಅದರಲ್ಲಿ ಅಡ್ಡಿ ಮಾಡುತ್ತಾರೆ? ಅದರಲ್ಲೂ ನಿಮಗೆ ಆಡ್ಡಿ ಮಾಡಿ ಬದುಕುವುದು ಉಂಟಾ ಅದರಲ್ಲಿ? ನಿಮ್ಮ ತಾಲ್ಲೂಕಿನಲ್ಲಿ ನಿಮಗೆ ಯಾರಾದರೂ ಅಡ್ಡಿ ಮಾಡಿ ಬದುಕುವುದು ಉಂಟಾ? ನೀವು ಹೋಗಿ ಅಲ್ಲಿ ಕುಳಿತುಕೊಂಡು ಕೆಲಸ ಏಕೆ ಮಾಡಿಸುವುದಿಲ್ಲ? ಮಾತು ಎತ್ತಿದರೆ ನಮಗೆ ಅಧಿಕಾರವಿಲ್ಲ, ಅಧಿಕಾರವಿಲ್ಲವೆಂದರೆ, ನಿಮಗೆ ಏನು ಅಧಿಕಾರ ಬೇಕು ಸ್ವಾಮಿ, ಎಲ್ಲ ಇದೆ ನಿಮ್ಮ ಕೈಯಲ್ಲಿ. ಕುಳಿತುಕೊಂಡು ಕೆಲಸ ಮಾಡಿಸಿಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ಅರ್ಥವೇನು? ಏನಾಯಿತು ಅಂದರೆ ''ಗಾಣಗಿತ್ತಿ ಅಯ್ಯೋ ಅಂದರೆ ಮಕ್ಕಳ ತಲೆಗೆ ಎಣ್ಣೆ ಬರುತ್ತದೆಯೇ'' ಅಂದಹಾಗೆ ಇವರು ಹೇಳುವುದು. ಅದಲ್ಲ, ನಮಗೆ ಅಲ್ಲಿ ಅಧಿಕಾರ ಏನು ಇಲ್ಲ. ತಾವು ಹೇಳುತ್ತಿರುವುದು ಅರ್ಥವಿಲ್ಲದ್ದು.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ನಾಗರಾಜ್‌ರವರಿಗೆ ಮಾತು ಚೆನ್ನಾಗಿ ಗೊತ್ತಿದೆ.

ಮಾತನಾಡಬಹುದು, ಆದರೆ ಮಾತಿನಿಂದಲೇ ಇವೆಲ್ಲ ಸಾಧನೆ ಮಾಡುವುದಾದರೆ ಮಾಡಬಹುದು ಅದು ಆಗುವುದಿಲ್ಲ. what cannot be told must be endured. ಎಲ್ಲಿ ಪೂರ್ಣವಾಗಿ ಸ್ವಾತಂತ್ರ್ಯ ನಮಗೆ ಇಲ್ಲ ಅಲ್ಲಿಕುಳಿತುಕೊಂಡು ಒಳ್ಳೆಯ ಮಾತು ಆಡಿ ಕೆಲಸ ಮಾಡಿಸಿಕೊಂಡು ಹೋಗುತ್ತಿರಬೇಕು. ಅದನ್ನು ನಿಮಗೆ ಯಾರೂ ಹೇಳಿಕೋಬೇಕಾದ್ದಿಲ್ಲ. lapses ಇದೆ, ನಮ್ಮ ಆಫೀಸರ್ ಗಳೆಲ್ಲ ಪರ್ ಫೆಕ್ಟ್ಆಗಿ ಕೆಲಸ ಮಾಡಿದ್ದಾರೆ, ಸಂಸ್ಥೆಗಳೆಲ್ಲ ಫರ್ ಫೆಕ್ಟ್ಆಗಿ ಕೆಲಸ ಮಾಡಿವೆಯೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ನನಗೂ ಅಂಕಿ ಅಂಶಗಳನ್ನು ನೋಡಿದಾಗ ಏನು ನಾವು ಯಾವ ಮಟ್ಟದಲ್ಲಿ ಎಕ್ಸ್‌ಫೆಕ್ಟ್ ಮಾಡಿದ್ದೇವೆ ಆ ಮಟ್ಟದಲ್ಲಿ ಕೆಲಸವಾಗಿಲ್ಲವೆನ್ನುವುದು ನನಗೂ ಅರ್ಥವಾಗುತ್ತದೆ. ಆದರೆ ಲ್ಯಾಪ್ಸಸ್ ಅದರಲ್ಲಿ ಏನಿದೆ ಅದನ್ನು ಸರಿ ಮಾಡುವುದಕ್ಕೆ ವ್ಯವಸ್ಥೆ ಮಾಡೋಣ. ಆದರೆ ಇಷ್ಟು ಮಾತ್ರ ಹೇಳುತ್ತೇನೆ, ಕುಡಿಯುವ ನೀರಿಗೆ ನಾವು ಸಾಧ್ಯವಾದಷ್ಟು ಶೇಕಡ 90 ಭಾಗ ತೊಂದರೆಯಿಲ್ಲದ ಹಾಗೆ ನಾವು ಕೊಟ್ಟಿದ್ದೇವೆ.ಅಂಕಿ ಅಂಶಗಳಿವೆ, ಪ್ರತಿಯೊಂದು ತಾಲ್ಲೂಕುವೈಸ್ ನಾನು ತಂದಿದ್ದೇನೆ. ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಬೋರ್‌ವೆಲ್‌ಗಳಾಗಿವೆಯೆಂದು. ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಬೋರ್‌ವೆಲ್‌ಗಳು ಥ್ರಿಲ್ಲಿಂಗ್ ಆಗಿವೆ, ಮತ್ತು ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮ್‌ನಲ್ಲಿ ಕೆಲಸ ತೆಗೆದುಕೊಂಡಿದ್ದೇವೆ ಅದಕ್ಕೆ ಎಷ್ಟು ಅಲಾಟ್‌ಮೆಂಟ್ ಇದೇ ಎಷ್ಟು ಖರ್ಚಾಗಿದೆ ತಾಲ್ಲೂಕುವೈಸ್ ಎನ್ನುವ ಬಗ್ಗೆ ನನ್ನ ಹತ್ತಿರ ಡೀಟೈಲ್ಸ್ ಇದೆ. ಬೇಕಾದರೆ ತಮಗೆ ಅದನ್ನು ನಾನು ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ತಾವು ಉತ್ತರ ಕೊಡಬೇಕಾದರೆ, ನಾನು ಮಾತನಾಡಿಲ್ಲ, ಮಾತನಾಡುವುದಿಲ್ಲ, ಎರಡು ಮೂರು ಸಂಗತಿಗಳಿಗೆ ತಾವು ಉತ್ತರವನ್ನು ಕೊಡಿ. ಒಂದು ತಮ್ಮ ಬಾಯಿಯಿಂದಲೇ ಈಗ ಉತ್ತರ ಬಂತು ಶಾಸಕರು ಹೇಳಿದ್ದೆಲ್ಲ ಆಗುವುದಿಲ್ಲ. ವ್ಯವಸ್ಥೆ ಬದಲಾವಣೆಯಾಗಿದೆ, ಅದನ್ನು ನಾವು ಒಪ್ಪುತ್ತೇವೆ. ಹಾಗಾದರೆ ಶಾಸಕರನ್ನು ಏಕೆ ಅಧ್ಯಕ್ಷರನ್ನಾಗಿ ಮಾಡುತ್ತೀರಿ? ಆಯಿತು, ಎಲ್ಲಿಯಾದರೂ ಒಂದು ಉದಾಹರಣೆಯನ್ನು ಕೊಡುತ್ತೀರಾ, ಶಾಸಕರು ಅಧ್ಯಕ್ಷರಾಗಿರುವಂತಹ ಈ ಬರಗಾಲ ಸಮಿತಿಯಲ್ಲಿ ಅಲ್ಲಿರುವಂತಹ ಎಲ್ಲ ಅಧಿಕಾರಿಗಳು ಇತರೆ ಸದಸ್ಯರ ಅಭಿಪ್ರಾಯಗಳನ್ನು ಕೇಳದೆ, ಶಾಸಕರೇ ಇದೇ ಆಗಬೇಕೆಂದು ಒತ್ತಾಯ ಮಾಡಿದರು, ಹಾಗಾಗಿ ಕೆಲಸ ತೆಗೆದುಕೊಂಡಿಲ್ಲವೆನ್ನುವಂತಹ ಒಂದು ಉದಾಹರಣೆ ಇಲ್ಲ. ಮೊದಲನೆಯದು ಸಭೆ ನಡೆದಿಲ್ಲ. ಎರಡನೆಯದು ಶಾಸಕರಾಗಲೀ ಮತ್ತೊಬ್ಬರಾಗಲೀ ಆ ಸಮಿತಿಯಲ್ಲಿ ಕುಳಿತುಕೊಂಡು ಅಧಿಕಾರಿಗಳ ಜೊತೆಯಲ್ಲಿ ಚರ್ಚೆಮಾಡಿ, ಚುನಾಯಿತ ಪ್ರತಿನಿಧಿಗಳ ಜೊತೆ ಚರ್ಚೆಮಾಡಿ ಕೊಟ್ಟಂಥ ಪಟ್ಟಿಯನ್ನು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಆಗಿಲ್ಲ. ಮೂರನೆಯದು ನೀವು ಹೇಳುವ ಪ್ರಕಾರ ಅಲ್ಲಿ ಹೋಗಿ ಕುಳಿತುಕೊಂಡು ಮಾಡಿ ಬೇಡವೆಂದರೆ ಯಾರು ಅಂದರೆ ಹಾಗಾದರೆ ಶಾಸಕರು ಈ ಕಡೆಯವರಾಗಲೀ, ಆ ಕಡೆ ಇರುವವರಾಗಲೀ ಬರಗಾಲವಿದ್ದ ಕಾಲದಲ್ಲಿ ನೀವು ಹಣ ಕೊಟ್ಟರೂ ಸಹ ಆಲ್ಲಿ ಕಾಮಗಾರಿ ಕೆಲಸವಾಗ ಬಾರದೆಂದು ತಡೆವೊಡ್ಡುವವರು ಯಾರಾದರೂ ಇದ್ದಾರೆಯೇ? ಅದಕ್ಕೋಸ್ಕರ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುವುದು ಸರಿಯಿದೆ. ಈ ಅಭಿಪ್ರಾಯ ತಮ್ಮರು ಆಗಿದ್ದರೆ, ಶಾಸಕರು ಸಮರ್ಪಕವಾಗಿ ಮಾಡುತ್ತಿಲ್ಲ ಅವರು ಹೇಳಿದ್ದೆ ಮಾಡಬೇಕೆನ್ನುವ ತಮ್ಮ ಅಭಿಪ್ರಾಯ ಆಗುವುದಾದರೆ ದಯಮಾಡಿ ನಿಮ್ಮ ಇದನ್ನು ವಿತ್‌ಡ್ರಾ ಮಾಡಿಕೊಂಡು ಬಿಡಿ. ಶಾಸಕರು ಯಾವುದೇ ಸಭೆ ಮಾಡುವಂತಹ ಅಗತ್ಯವಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಶಾಸಕರು ಹೇಳಿದ್ದು ಮಾಡಬೇಡಿಯೆಂದು ನಾನು ಹೇಳುತ್ತಿಲ್ಲ. ಆಕ್ಷನ್ ಪ್ಲಾನ್ ಹಿಂದೆಯೇ ಅಪ್ರೂವ್ ಆಗಿದೆ, ಮತ್ತು ಹೋದ ವರ್ಷದ ಸ್ಪಿಲ್ ಓವರ್ ವರ್ಕ್ಸ್

ಬೇಕಾದಷ್ಟು ಇದೆ. ಇದೆಲ್ಲ ಆಗದೆ ಹೊಸ ಕೆಲಸ ಹೇಗೆ ತೆಗೆದುಕೊಳ್ಳುವುದು ಇರುವ ಹಣದಲ್ಲಿ ಅಂತ ಅವರು ಹೇಳುತ್ತಾರೆ. ಕೇಂದ್ರ ಸರ್ಕಾರದಲ್ಲಿ ನಾವು ಪ್ರಧಾನಮಂತ್ರಿಗಳನ್ನು ನೋಡಿದಾಗ, ಎಂಪ್ಲಾಯಿಮೆಂಟ್ ಅಫರ್‌ಮೇಷನ್ ಸ್ಕೀಮ್‌ನಲ್ಲಿ sky is the limit ನೀವು ಕೆಲಸ ಮಾಡಿ, ನಾವು 80 ಪರ್ಸೆಂಟ್ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಅದರಲ್ಲಿ ಬೇರೆ ಕೆಲಸವನ್ನು ತೆಗೆದುಕೊಂಡು ಮಾಡಿಯೆಂದು ನಾವು ಹೇಳಿದ್ದೇವೆ. ಎಲ್ಲರಿಗೂ ನಾವು ಸೂಚನೆ ಕೊಟ್ಟಿದ್ದೇವೆ.

ಒಬ್ಬ ಮಾನ್ಯ ಸದಸ್ಯರು:- sky is the limit ಎಂದು ಹೇಳುತ್ತೀರಿ, ಎಲ್ಲಿ ಕೆಲಸ ಕೊಟ್ಟಿದ್ದೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು ಇರುವಂಥ ಹಣವನ್ನೇ ಖರ್ಚುಮಾಡಿಲ್ಲ ಏಕೆ ಎಂದು ನಮ್ಮ ವಾದ. 235 ಕೋಟಿ ರೂಪಾಯಿ ಹಣವನ್ನು ನೀವೆ ನಿಮ್ಮ ಗೌರ್ನಮೆಂಟ್‌ನಿಂದ ಪ್ರತಿಯೊಂದು ಜಿಲ್ಲಾಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ರಿಲೀಸ್ ಮಾಡಿದ ಹಣದಲ್ಲಿ 62 ಕೋಟಿ ಮಾತ್ರ ಖರ್ಚಾಗಿದೆ. ನಾಲ್ಕನೇ ಒಂದು ಭಾಗ. ಇನ್ನು ಮುಕ್ಕಾಲು ಭಾಗ ಹಣ ಖರ್ಚಾಗಬೇಕು. ಅಂದಾಗ, ಎಷ್ಟರಮಟ್ಟಿಗೆ ಸಮರ್ಪಕವಾಗಿ ಕೆಲಸ ನಡೆದಿದೆ, ಮತ್ತೆ ಆಡಿಶನಲ್ ಫಂಡ್ ತರುವುದಕ್ಕೆ ಸಾಧ್ಯವಿದೆಯೇ ಮುಕ್ಕಾಲುಭಾಗ ಹಣವನ್ನು ನಿಮ್ಮಲ್ಲಿ ಇಟ್ಟುಕೊಂಡು, ನೀವು ಕೇಂದ್ರಸರ್ಕಾರದವರನ್ನು ಕೊಡಿ ಕೊಡಿ ಅಂದರೆ ಹೇಗೆ ಸಾಧ್ಯವಿದೆ?

ಶ್ರೀ ಆರ್.ಎಲ್.ಜಾಲಪ್ಪ:- ಕೆಲವು ಬಾಟ್ಲನೆಕ್ಸ್ ಇದೆ. ಏನೆಂದರೆ ನಾವು ಈ ಹಣವನ್ನು ಬಿಡುಗಡೆ ಮಾಡಿದಾಗ, ಒಬ್ಬ ಸ್ನೇಹಿತರು ಹೇಳಿದಾಗ ಅಲ್ಲಿ ಸಮಯಕ್ಕೆ ಸರಿಯಾಗಿ ಅಧಿಕಾರಿಗಳು ಇರಲಿಲ್ಲ. ಇನ್ನು ಕೆಲವು ಅಧಿಕಾರಿಗಳು ಟ್ರಾನ್ಸ್‌ಫರ್‌ಗೆ ಓಡಾಡುತ್ತಿದ್ದರು. ಆಮೇಲೆ ತಾಲ್ಲೂಕು ಪಂಚಾಯಿತಿಗಳಿಗೆ ಎಕ್ಸಿಕ್ಯುಟಿವ್ ಆಫೀಸರ್ಸ್‌ಗಳನ್ನು ಪೋಸ್ಟ್ ಮಾಡಬೇಕಾದರೆ ಸ್ವಲ್ಪ ನಿಧಾನವಾಯಿತು. ಏಕೆಂದರೆ ಅಲ್ಲಿ ಅಸಿಸ್ಟೆಂಟ್ ಕಮೀಷನರ್‌ವರೇ ಆಗಬೇಕೆಂದಾಗ ಕ್ಲಾಸ್-1)ತಹಶೀಲ್ದಾರ್‌ನ್ನು ಡಿಪಿಸಿಯೊಳಗೆ ಅವರನ್ನು ಸ್ಕ್ರೂಟಿನೈಸ್ ಮಾಡಿ ಮಾಡಬೇಕಾದರೆ ಇರುವುದನ್ನು ನಾನು ಹೇಳುತ್ತಿದ್ದೇನೆ, ಇದೆಲ್ಲ ನಿಮಗೆ ಗೊತ್ತಿದೆ, ಗೊತ್ತಿಲ್ಲದೆ ಏನೂ ಇಲ್ಲ. ಇದೆಲ್ಲ ಸ್ವಲ್ಪ ವ್ಯತ್ಯಾಸವಾಗಿದೆ.

ಶ್ರೀ ಬಿ.ಶಿವರಾಮ್:- ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಇಲ್ಲಿಯವರೆಗೆ ಮಾತನಾಡಿದ್ದು

ಶ್ರೀ ಎಂ.ವೀರಪ್ಪಮೊಯಿಲಿ:- ಮಾನ್ಯ ಶಿವರಾಮ್‌ರವರೆ, ಒಂದು ನಿಮಿಷ. ಈಗ ನಮಗೆ ಏನು ಪ್ರಶ್ನೆ ಉದ್ಭವವಾಗಿದೆಯೆಂದರೆ, ಇದು ತಮ್ಮ ಪೋರ್ಟ್‌ಫೋಲಿಯೊ ಬರಗಾಲದ್ದು. ಇದರ ಪ್ರಕಾರ ಕೆಲಾಮಿಟಿ ಫಂಡ್ ಮೇಲೆ ಮಾತ್ರ ತಮ್ಮ ಕಂಟ್ರೋಲ್ ಬಾಕಿಯದೆಲ್ಲ ತಮಗೆ ಕಂಟ್ರೋಲ್ ಸಿಗುತ್ತಿಲ್ಲವೆನ್ನತಕ್ಕ ಒಂದು ಅಭಿಪ್ರಾಯ ಬಂದರೆ ಬರ ಎದುರಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಬರವನ್ನು ಯಾವಾಗಲೂ ಯುದ್ಧದೋಪಾದಿಯಲ್ಲಿ ಎದುರಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ತಾವು ಒಂದು ಕೋಆರ್ಡಿನೇಷನ್ ಮಾಡಿಕೊಳ್ಳಿ if the coordination is totally lacking, ಬರಗಾಲದ ಕೆಲಸ ಹೇಗೆ ಆಗುತ್ತದೆ? ಆದ್ದರಿಂದ ಇದರ ಬಗ್ಗೆ ತಾವು ಮುಖ್ಯ ಮಂತ್ರಿಯವರ ಹತ್ತಿರ ಮಾತನಾಡಬೇಕಾಗುತ್ತದೆ. ಮಾತನಾಡಿಕೊಂಡು ತಮ್ಮ ಮಟ್ಟದಲ್ಲಿ ಇದನ್ನು ಮಾನಿಟರ್ ಮಾಡತಕ್ಕದ್ದು ಮತ್ತೆ ಇದಕ್ಕೆ ಯಾವರೀತಿಯಲ್ಲಿ ಆಜ್ಞೆ ಕೊಟ್ಟು ಅದನ್ನು ಇಂಪ್ಲಿಮೆಂಟ್ ಮಾಡತಕ್ಕದ್ದು ಮಾಡಬೇಕು. ಇಲ್ಲದಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಏನಾದರೂ ನಿಯಮಗಳಲ್ಲಿ ಬದಲಾವಣೆ ಆಗಬೇಕಾದರೂ ಸಹ ತಾವು

ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಹೇಳಿ ಅಥವಾ ಕ್ಯಾಬಿನೆಟ್‌ಗೆ ತೆಗೆದುಕೊಂಡು ಹೋಗಿ ವ್ಯವಸ್ಥೆ ಮಾಡಿಕೊಳ್ಳಿ ಏಕೆಂದರೆ ಈಗ ತಾವು ಹೇಳಿದ ಹಾಗೆ ಕೆಲವು ಸಂಸ್ಥೆಗಳಿವೆ. ಆ ಸಂಸ್ಥೆಗಳ ಮೇಲೆ ಕೆಲವು ಸಾರಿ ತಾವು ರೆವಿನ್ಯೂ ಮಂತ್ರಿಗಳಾಗಿ ಅಧಿಕಾರ ಚಲಾಯಿಸಲಿಕ್ಕೆ ಆಗದಿರಬಹುದು. ಆದರೆ, ಬರಗಾಲದ ವಿಚಾರ ಅದು ತಮ್ಮ ಪೋರ್ಟ್‌ಫೋಲಿಯೋದಲ್ಲಿದೆ. ಅದು ಯಾವುದೇ ಇಲಾಖೆ ಇರಬಹುದು, ಆದರೆ, ಬರಗಾಲದ ವಿಚಾರ ಬಂದಾಗ, ಅದನ್ನು ಯಾವರೀತಿಯಲ್ಲಿ ಏಕೆಂದರೆ ಆ ಕೆಲಸಗಳನ್ನು ತಾವು ಜಿಲ್ಲಾಧಿಕಾರಿಗಳಿಗೆ ಹೇಳಬೇಕಾಗುತ್ತದೆ. ಅದನ್ನು ಮಾನಿಟರ್ ಮಾಡಬೇಕಾಗುತ್ತದೆ. ಕೆಲವು ಆಕ್ಷನ್ ಪ್ರೋಗ್ರಾಮ್ ಯಾವುದನ್ನು ಪ್ರಪೋಸಲ್ಸ್ ಕೊಟ್ಟಿದ್ದಾರೆ ಅದೇ ಅಪ್ರೂವ್ ಆಗದಿದ್ದರೆ ಕೂಡ ನೀವು ಅದನ್ನೆ ಇಂಪ್ಲಿಮೆಂಟ್ ಮಾಡಿಯೆಂದು ಹೇಳತಕ್ಕ ಅಧಿಕಾರ ನಿಮಗೆ ಇದೆ. ಇಲ್ಲದಿದ್ದರೆ ನೀವು ಬರಗಾಲವನ್ನು ಎದುರಿಸಲಿಕ್ಕೆ ಆಗುವುದಿಲ್ಲ. ಈಗ ನಮಗೆ ವಾಟಾಳ್ ನಾಗರಾಜ್‌ರವರು ಹೇಳಿದರು ನೀವು ಕೇಂದ್ರ ಸರ್ಕಾರದ ವಿರುದ್ಧ ರೆಸಲ್ಯೂಷನ್ ಮಾಡಿ ಅಂತ ಈಗ ರೆಸಲ್ಯೂಷನ್ ಯಾರ ಮೇಲೆ ಮಾಡಬೇಕು? ತಾವು ಹೇಳಿದಹಾಗೆ ಪ್ರಧಾನಮಂತ್ರಿಗಳೇ ಹೇಳಿದ್ದಾರೆ. ಬರಗಾಲವನ್ನು ಎದುರಿಸಲಿಕ್ಕೆ ಈಗ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್, ಎಂಪ್ಲಾಯಿಮೆಂಟ್ ಪ್ರೋಗ್ರಾಮ್‌ನಲ್ಲಿ ಹಣ ಬರತಕ್ಕದ್ದು ಈ ಬಾಬ್ತಿನಲ್ಲಿ. ಹಾಗೆ ಇರುವಾಗ ಹೆಚ್ಚು ಹಣವನ್ನು ಕೇಂದ್ರದಿಂದ ಕೇಳಬೇಕಾದರೆ ನಿಮಗೆ ಮಾಮೂಲಾಗಿ ಕೊಟ್ಟಂತಹ ಹಣವನ್ನೇ ಖರ್ಚುಮಾಡಲಿಕ್ಕೆ ಆಗದಿದ್ದರೆ ಕೇಂದ್ರದಿಂದ ಹೆಚ್ಚು ಹಣ ಹೇಗೆ ಬರುತ್ತದೆ? ಬರುವುದಿಲ್ಲ, ಆದ್ದರಿಂದ ತಾವು ದಯಮಾಡಿ ಇದರ ಬಗ್ಗೆ ಉತ್ತರ ಕೊಡುವಾಗ ಹೇಳಬೇಕು. ತಾವು ಮುಖ್ಯಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ನಿಮ್ಮ ಕಾರ್ಯಕ್ರಮಗಳಿಗೆ ಹಣವಿದೆ ಆದರೆ ಅದು ಖರ್ಚಾಗಲಿಲ್ಲ, ಕಾರ್ಯಕ್ರಮಗಳಿವೆಯೆಂದು ಹೇಳಿದರೆ ಸಾಲದು. ಇದನ್ನು ಯಾವರೀತಿಯಲ್ಲಿ ಮಾನಿಟರ್ ಮಾಡಿಕೊಂಡು ಇಂಪ್ಲಿಮೆಂಟ್ ಮಾಡಿ ಫೀಡ್‌ಬ್ಯಾಕ್ ತೆಗೆದುಕೊಂಡು ತಾವು ಒಂದು ಟೈಮ್‌ಬೌಂಡ್ ಪ್ರೋಗ್ರಾಮ್ ಮಾಡಿ ಸಮರೋಪಾದಿಯಲ್ಲಿ ಇದನ್ನು ಹೇಗೆ ಎದುರಿಸುತ್ತೀರಿ ಎಂದು ಕಾರ್ಯಾಚರಣೆ ಮಾಡಬೇಕೇ ಹೊರತು ನಮಗೆ ಬರೀ ಕಾರ್ಯಕ್ರಮಗಳಿವೆಯೆಂದು ಕುಳಿತುಕೊಂಡರೆ ಅದರಿಂದ ಯಾವುದೇ ಬರವನ್ನು ಎದುರಿಸಲಿಕ್ಕೆ ಆಗುವುದಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಮೊಯಿಲಿಯವರು ಕೋಆರ್ಡಿನೇಷನ್ ನಮ್ಮಲ್ಲಿ ಇದ್ದಹಾಗೆ ಕಾಣಲಿಲ್ಲ ಅಂತ ಹೇಳಿದರು ರೆವಿನ್ಯೂ ಮಿನಿಸ್ಟರ್ ಆದವರು ಇವರನ್ನೆಲ್ಲಾ ಒಟ್ಟಿಗೆ ತೆಗೆದುಕೊಂಡು ಹೋಗಬೇಕು ಎಂದು ಹೇಳಿ ಸೂಚನೆ ಕೊಟ್ಟಿದ್ದಾರೆ. ಬರದ ಮಟ್ಟಿಗೆ, ನಾನು ಒಪ್ಪಿಕೊಳ್ಳುತ್ತೇನೆ. ನಾನು ಮತ್ತು ಆರ್.ಡಿ.ಪಿ. ಆರ್. ಮಂತ್ರಿಗಳು ಐದು ಜಿಲ್ಲೆಗೆ ಹೋಗಿದ್ದೆವು, ನಾವು ಒಟ್ಟಿಗೆ ಹೋಗಿದ್ದೇವೆ. ಒಟ್ಟಿಗೆ ಹೋಗಿ ಅಲ್ಲಿನ ಶಾಸಕರನ್ನು ಮತ್ತು ಕೆಲವು ಕಡೆ ಲೋಕಸಭಾ ಸದಸ್ಯರುಗಳನ್ನು ಕೂಡ ಅಲ್ಲಿಗೆ ಕರೆಸಿದ್ದೆವು ಅಧಿಕಾರಿಗಳನ್ನು ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳನ್ನೆಲ್ಲಾ ಕರೆದು, ನಾನು ನಮ್ಮಿಂದ ಏನು ಸಾಧ್ಯ ನಿಮ್ಮಿಂದ ಏನು ಸಾಧ್ಯ...

ಶ್ರೀ ಎಂ.ವೀರಪ್ಪ ಮೊಯಿಲಿ:- ಅದಲ್ಲ ನಾನು ಸೂಚನೆ ಕೊಟ್ಟಿದ್ದುದು ಏನು ಅಂದರೆ ಬರಗಾಲ ಪ್ರದೇಶಗಳಿಗೆ ಸಂಬಂಧಪಟ್ಟಹಾಗೆ, ಬರಗಾಲದ ಕಾರ್ಯಕ್ರಮದ ವಿಚಾದರಲ್ಲಿ ತಾವು ಜೊತೆಯಲ್ಲಿ ಹೋಗಿದ್ದೀರಿ, ಮಾತನಾಡಿದ್ದೀರಿ, ಅದು ಸಾಲದು. ಏಕೆ ಅಂತ ಹೇಳಿದರೆ ಬರಗಾಲದ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಅದು ನಾನಾ ಕಾರಣಗಳಿಂದ ಡೈವರ್ಟ್ ಆಗಬಾರದು. ನೇರವಾಗಿ ಆ ಕಾರ್ಯಕ್ರಮಗಳು ಇಂಪ್ಲಿಮೆಂಟ್ ಆಗಬೇಕು. ತಾವು ಒಂದು ಆದೇಶ ಕೊಟ್ಟರೆ, ಇಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಇಷ್ಟು ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರಾಜೆಕ್ಟ್‌ಗಳನ್ನು ಇಂಥ

ಏರಿಯಾದಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳಿ ತಾವು ಆದೇಶ ಕೊಟ್ಟರೆ ಅದು ನೇರವಾಗಿ ಹೋಗಬೇಕು. ಪುನಃ ಅದು ಆ ಮಂತ್ರಿಗಳು ಈ ಮಂತ್ರಿಗಳು ಅಂದರೆ ಕೆಲಸ ಆಗುವುದಿಲ್ಲ. ಈ ನನ್ನ ಸೂಚನೆಯನ್ನು ದಯಮಾಡಿ ಗಂಭೀರವಾಗಿ ತೆಗೆದುಕೊಳ್ಳಿ. In so far as the draught area is concerned, even if it comes under the portfolio of this and that Minister ತಾವು ಆದೇಶ ಕೊಟ್ಟು ಇಂಪ್ಲಿಮೆಂಟ್ ಆಗತಕ್ಕಂಥಾದ್ದು to that extent, the portfolio can also get transferred. It can be delegated. Nothing wrong about it. ಬಹುಶಃ ಈಗ ಹೊಸದಾಗಿ ಬಂದಂಥ ವ್ಯವಸ್ಥೆಯಲ್ಲಿ. ಈ ವ್ಯವಸ್ಥೆಗೆ ಸ್ಪಂಧಿಸತಕ್ಕಂಥ ಒಂದು ಕ್ರಮದಲ್ಲಿ ತಾವು ನಿಯಮಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಸೂಚನೆ ಕೊಡುತ್ತಿದ್ದೇನೆ ಅಷ್ಟೇ.

ಶ್ರೀ ಬಿ.ಶಿವರಾಂ:- ಮಾನ್ಯ ಉಪಾಧ್ಯಕ್ಷರೇ, ನಾನು ಇಲ್ಲಿಯವರೆಗೆ ಹೇಳಿದ ವಿಚಾರ ಯಾವುದೋ ಹೇಳಿದ ಹೇಳಿಕೆಯಿಂದ ಹೊರತುಪಡಿಸಿಲ್ಲ. ಕಂದಾಯ ಸಚಿವರು ಏನು ಒಂದು ಹೇಳಿಕೆ ಕೊಟ್ಟಿದ್ದಾರೆ, ಈ ಹೇಳಿಕೆಯಲ್ಲಿ ಅವರು ಏನೇನು ಹೇಳಿದ್ದಾರೆ, ಕೆಲಾಮಿಟಿ ರಿಲೀಫ್ ಫಂಡ್‌ನಲ್ಲಿ ಕುಡಿಯಲಿಕ್ಕೆ ನೀರಿಗೆ ಎಷ್ಟು ಹಣ ಕೊಟ್ಟಿದ್ದೇನೆ, ಉದ್ಯೋಗ ಸೃಜಿಸಲಿಕ್ಕೆ ಎಷ್ಟು ಹಣ ಕೊಟ್ಟಿದ್ದೇನೆ, ದನಕರುಗಳಿಗೆ ಮೇವು ಕೊಡಲಿಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೇನೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ಅದರಲ್ಲಿ ಎಷ್ಟು ಪ್ರಮಾಣದ ಹಣ ಖರ್ಚಾಗಿದೆ ಎನ್ನತಕ್ಕಂಥಾದ್ದು ಹೇಳುವುದರ ಜೊತೆಗೆ ಅವರೇ ಹೇಳಿದ್ದಾರೆ, ಅವರ ಹೇಳಿಕೆಯಲ್ಲಿ ''ಇಷ್ಟಲ್ಲದೇ ಜವಾಹಾರ್ ರೋಜ್ಗಾರ್, ಅಡೀಷನಲ್ ಜವಹಾರ್ ರೋಜ್ಗಾರ್ ಯೋಜನೆಗಳು, ಉದ್ಯೋಗ ಭರವಸೆ ಯೋಜನೆಗಳು ಇತ್ಯಾದಿ ಯೋಜನೆಗಳಡಿಯಲ್ಲಿ ಸಂತ್ರಸ್ತರಿಗೆ ಉದ್ಯೋಗವನ್ನು ಒದಗಿಸಲಿಕ್ಕೆ, ಕುಡಿಯುವ ನೀರು ಪೂರೈಕೆ ಹಾಗೂ ಉದ್ಯೋಗ ನೀಡಿಕೆಗಾಗಿ ಗ್ರಾಮ ಪಂಚಾಯತಿ ಇಲಾಖೆಯು ಅನುದಾನ ಬಿಡುಗಡೆ ಮಾಡಿದೆ'' ಅಂದರೆ, ಆ ಪ್ಲಾನ್ ಮನಿ ಏನಿದೆ, ಕುಡಿಯುವ ನೀರಿಗೆ ಜಿಲ್ಲಾ ಪರಿಷತ್ತಿಗೆ ಒದಗಿಸಿರತಕ್ಕಂಥ 42.80 ಕೋಟಿ ರೂ.ಗಳ ಹಣ ಇದೆಯಲ್ಲ ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಮತ್ತೆ ಉದ್ಯೋಗ ಭರವಸೆ ಜವಹಾರ್ ರೋಜ್ಗಾರ್ ಯೋಜನೆಯಲ್ಲಿ ಓಪನಿಂಗ್ ಬ್ಯಾಲೆನ್ಸ್ 174.70 ಕೋಟಿ ರೂಪಾಯಿ ಏನಿತ್ತು ಅದನ್ನೂ.. ಪ್ರತಿ ಮಾಹಿತಿಯೂ ಅವರೇ ಕೊಟ್ಟಿರತಕ್ಕಂಥಾದ್ದು ಇದರಲ್ಲಿ. ಅವರ ಹೇಳಿಕೆ ಕೇವಲ ಕೆಲಾಮಿಟಿ ರಿಲೀಫ್ ಫಂಡ್ ಬಿಡುಗಡೆ ಆಗಿರತಕ್ಕಂಥ ಹಣಕ್ಕೆ ಅಷ್ಟೆ. ನಾವು ಇಷ್ಟು ಖರ್ಚು ಮಾಡಿದ್ದೇವೆ, ಇಷ್ಟು ಬಿಡುಗಡೆ ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ಹೇಳಿದರೆ ನಾವು ಬೇರೆ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಅವರೇ ಮುಂದಕ್ಕೆ ಹೇಳಿಕೊಂಡು ಹೋಗಿದ್ದಾರೆ, ಉದ್ಯೋಗ ಭರವಸೆ ಯೋಜನೆಯಲ್ಲಿ ಎಷ್ಟು ಕೊಟ್ಟಿದ್ದೇವೆ, ಜವಹಾರ್ ರೋಜ್ಗರ್ ಯೋಜನೆಯಲ್ಲಿ ಎಷ್ಟು ಕೊಟ್ಟಿದ್ದೇವೆ, ಓಪನಿಂಗ್ ಬ್ಯಾಲೆನ್ಸ್ ಎಷ್ಟು ಇತ್ತು, ಬಿಡುಗಡೆ ಎಷ್ಟು ಮಾಡಿದ್ದೇವೆ, ಜಿಲ್ಲಾ ಪಂಚಾಯಿತಿಗಳಿಗೆ ಪ್ಲಾನ್‌ನಲ್ಲಿ ಕುಡಿಯುವ ನೀರಿಗೆ ಹಣವನ್ನು ಎಷ್ಟು ಒದಗಿಸಿದ್ದೇವೆ. ಅಷ್ಟೇ ಅಲ್ಲ ಮುಂದಕ್ಕೆ ಹೋಗಿ ಇನ್ನೂ ಹೇಳುತ್ತಾರೆ, ಲೋಕೋಪಯೋಗಿ ಇಲಾಖೆಯಿಂದ ರಸ್ತೆ ಕೆಲಸ, ಕಟ್ಟಡಗಳಿಗೆ ಎಷ್ಟು ಹಣವನ್ನು ಒದಗಿಸಿದ್ದೆವು, ಎಷ್ಟು ಕೆಲಸ ಮಾಡಿದ್ದೇವೆ ಅನ್ನತಕ್ಕಂಥಾದ್ದನ್ನು ಹೇಳುತ್ತಾರೆ. ಮತ್ತೆ ನೀರಾವರಿ ಇಲಾಖೆಯಿಂದ ಏನು ಕೆಲಸಕ್ಕೆ ಹಣವನ್ನು ಒದಗಿಸಿದ್ದೇವೆ, ಖರ್ಚು ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನೂ ಹೇಳುತ್ತಿದ್ದಾರೆ. ಅರಣ್ಯ ಇಲಾಖೆಯಿಂದ ಎಷ್ಟು ಹಣವನ್ನು ಒದಗಿಸಿದ್ದೇವೆ, ಎನ್ನತಕ್ಕಂಥ ವಿಚಾರವನ್ನು ಕೂಡ ಅವರ ಹೇಳಿಕೆಯಲ್ಲಿ ಕೊಟ್ಟಿರತಕ್ಕಂಥಾದ್ದನ್ನು ನಾನು ಇವತ್ತು ಅವರ ಮುಂದೆ ಇಡುತ್ತಾ ಇರತಕ್ಕಂಥಾದ್ದು, ಇದರಲ್ಲಿ ಸತ್ಯ ಎಷ್ಟು, ಅಸತ್ಯ ಎಷ್ಟು ಇದೆ. ಇಷ್ಟು ಹಣವನ್ನು

ಕೊಡದಿದ್ದರೂ, ನೀವು ಕೊಟ್ಟಿದ್ದೇವೆ ಎಂದು ಹೇಳಿಕೆ ಕೊಟ್ಟರೂ ಏಕೆ ಖರ್ಚು ಮಾಡತಕ್ಕಂಥಾದ್ದನ್ನು ನೀವು ಸಮರ್ಪಕವಾಗಿ ಮಾಡಿಲ್ಲ? ಎಲ್ಲಿ ಲೋಪದೋಷ ಇದೆ? ಸರ್ಕಾರ ಎಲ್ಲಿ ವಿಫಲವಾಗಿದೆ? ಎನ್ನತಕ್ಕಂಥ ವಿಚಾರವನ್ನು ಅವರ ಮುಂದೆ ಇಡುತ್ತಿದ್ದೇನೆಯೇ ವಿನಃ ನಾನು ಬೇರೆ ಯಾವುದೋ ಅಂಕಿ ಅಂಶಗಳನ್ನು ಇದರಲ್ಲಿ ತೂರಿಸತಕ್ಕಂಥ ಕೆಲಸವನ್ನು ನಾನು ಮಾಡಿಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಆಯವ್ಯಯದಲ್ಲಿ ಒದಗಿಸಿರತಕ್ಕಂಥ ಹಣವನ್ನು ಹೇಳಿದ್ದಾರೆ. 31-7-95ರವರೆಗೆ ಆಗಿರತಕ್ಕಂಥ ವೆಚ್ಚ, ಉತ್ಪಾದಿಸಿರುವ ಮಾನವ ದಿನಗಳು ಇಲ್ಲಿ ಕೊಟ್ಟಿದ್ದಾರೆ ಅಧ್ಯಕ್ಷರೇ. ಲೋಕೋಪಯೋಗಿ ಇಲಾಖೆ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದರು. ನಮ್ಮ ಜಿಲ್ಲೆಗೆ ಬಂದಿದ್ದಾಗ ಮೀಟಿಂಗ್ ಮಾಡಿದ್ದರು, ಅಧಿಕಾರಿಗಳು ಸಹ ಆಗ ಇದ್ದರು. ಅಧ್ಯಕ್ಷರೇ, ಕಂದಾಯ ಮಂತ್ರಿಗಳು ದಯವಿಟ್ಟು ಕೇಳಬೇಕು, ಅವರ ಒಪ್ಪಿಕೊಂಡರು ಎಲ್ಲಾ ವಿಚಾರಗಳನ್ನು, ಈಗ ಕೊಟ್ಟಿರತಕ್ಕಂಥ ಹಣ ಇಲ್ಲಿಯವರೆಗೆ ಪಾವತಿ ಮಾಡಿರತಕ್ಕಂಥಾದ್ದು ಯಾವುದೂ ಹೊಸ ಕೆಲಸ ಅಲ್ಲ, ಹಿಂದೆ ಮಾಡಿರತಕ್ಕ ಸ್ಪಿಲ್ ಓವರ್‌ವರ್ಕ್ಸ್‌ನ ಹಣ ಬಾಕಿ ಏನಿತ್ತು, ಮಾರ್ಚ್ ಕೊನೆಯವರೆಗೆ ಬಿಲ್ ಏನಿತ್ತು, ಆ ಹಣವನ್ನು ಕ್ಲಿಯರ್ ಮಾಡಿರತಕ್ಕಂಥಾದ್ದು ಎನ್ನತಕ್ಕಂಥಾದ್ದನ್ನು ನೇರವಾಗಿ ಎಲ್ಲರ ಎದುರಿಗೆ ಅವರೇ ಒಪ್ಪಿಕೊಂಡಿದ್ದಾರೆ. ಆದರೆ ಅವರು ಲೋಕೋಪಯೋಗಿ ಮಂತ್ರಿಗಳು ಜಿಲ್ಲೆಗೆ ಬಂದಾಗ ವೀಕ್ಷಣೆ ಮಾಡತಕ್ಕಂಥ ಸಂದರ್ಭದಲ್ಲಿ ಈ ಹಣವನ್ನು ಹಿಂದೆ ಮಾಡಿರತಕ್ಕಂಥ ಹಳೆಯ ಬಿಲ್ ಏನಿದೆ ಅದಕ್ಕೆ ಪಾವತಿ ಮಾಡಿದ್ದೇವೆ ಅಂತ ಹೇಳಿ ಒಪ್ಪಿಕೊಂಡಿದ್ದಾರೆ ಎಂದರೆ ಮಾನವ ದಿನಗಳನ್ನು ಸೃಷ್ಟಿ ಮಾಡಿದ್ದೇವೆ ಅನ್ನತಕ್ಕಂಥ ಅಂಕಿ ಅಂಶಗಳನ್ನು ಇಲ್ಲಿ ನಮಗೆ ಕೊಡುತ್ತಿದ್ದಾರೆ ಎಂದರೆ ನಾವು ಏನು ತಿಳಿದುಕೊಳ್ಳಬೇಕು, ಅಧ್ಯಕ್ಷರೇ, ಇದರಿಂದ ತಪ್ಪು ದಾರಿಗೆ ಎಳೆಯತಕ್ಕಂಥಾದ್ದು ಈ ಸರ್ಕಾರ ಎನ್ನತಕ್ಕಂಥ ಮಾತನ್ನು ಹೇಳಬೇಕೋ, ಬೇಡವೋ ? ಇಷ್ಟೇ ಅಲ್ಲ, ನೀರಾವರಿ ಇಲಾಖೆಯಲ್ಲಿ ಇವತ್ತು ಎಷ್ಟರಮಟ್ಟಿಗೆ, ಸಣ್ಣ ನೀರಾವರಿ ಇಲಾಖೆಯಾಗಲೀ, ಭಾರೀ ನೀರಾವರಿ ಇಲಾಖೆಯಾಗಲೀ, ಏನು ಕೆಲಸ ಆಗುತ್ತಿದೆ ಎನ್ನತಕ್ಕಂಥಾದ್ದು ಇವತ್ತು ಎಲ್ಲರಿಗೂ ಗೊತ್ತಿದೆ. ನನ್ನ ಜಿಲ್ಲೆಯಲ್ಲಿ, ನಾನು ಹೇಳುತ್ತೇನೆ, ಹೇಮಾವತಿ ಭಾಗದಲ್ಲಿ ಬಹುಶಃ ಇನ್ನೂ ಶೇ.5 ರಷ್ಟು ಕೆಲಸ ಪ್ರಾರಂಭ ಆಗಿಲ್ಲ. ಇಲ್ಲಿಯವರೆಗೆ ಕೊಟ್ಟಿರತಕ್ಕಂಥ ಹಣ ಏನಿತ್ತು, ಅದು ಮಾರ್ಚ್‌ವರೆಗೆ ಪೆಂಡಿಂಗ್ ಇದ್ದಂಥ ಹಣದ ಬಿಲ್‌ಗಳನ್ನು ಪಾವತಿ ಮಾಡತಕ್ಕಂಥಾದ್ದನ್ನು ಮಾಡಿದ್ದಾರೆ. ಕೆಲಸದ ಎಸ್ಟಿಮೇಟೇ ಇನ್ನೂ ಅಂದಾಜು ಆಗಿಲ್ಲ, ಪ್ರಾರಂಭ ಮಾಡಿಲ್ಲ ಅಂದರೆ ಮಾನವ ದಿನಗಳ ಉತ್ಪಾದನ ಹೇಗೆ ಸಾಧ್ಯ ಇದೆ ಅಧ್ಯಕ್ಷರೇ. ಇನ್ನು ಸಣ್ಣ ನೀರಾವರಿ ಆ್ಯಕ್ಷನ್ ಪ್ಲಾನ್ ಅಪ್ರೂವ್ ಆಗಿಲ್ಲ. ಬಹುಶಃ ಇಲ್ಲಿ ನಮ್ಮ ಸಣ್ಣ ನೀರಾವರಿ ಸಚಿವರು ಇಲ್ಲ, ಅವರನ್ನೇ ಕೇಳಬಹುದಾಗಿತ್ತು. ಇವತ್ತು ನೀವು ಆಕ್ಷನ್ ಪ್ಲಾನ್ ಅಪ್ರೂವ್ ಮಾಡಿದ್ದೀರಾ ಅಂತ ಹೇಳಿ. ಬಜೆಟ್‌ನಲ್ಲಿ ಹಣ ಒದಗಿಸಿ ಆಕ್ಷನ್ ಪ್ಲಾನ್ ಅಪ್ರೂವ್ ಮಾಡದಿದ್ದರೆ ಕೆಲಸ ಎಲ್ಲಿಂದ ಪ್ರಾರಂಭ ಆಗುತ್ತದೆ. ಸ್ಪಿಲ್ ಓವರ್ ವರ್ಕ್ಸ್ ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಾರೆ. ಸ್ಪಿಲ್ ಓವರ್ ವರ್ಕ್ಸ್‌ನ್ನು ಕೂಡ ಪ್ರಾರಂಭ ಮಾಡುವುದಕ್ಕೆ ಆಗಿಲ್ಲ ಸರ್ಕಾರಕ್ಕೆ. ಕಾರಣ ಇಷ್ಟೇ. ಇವತ್ತು ಕೆಲಸಗಳನ್ನು ಏನು ಇಲಾಖೆ ಮೂಲಕ ಮಾಡತಕ್ಕಂಥಾದ್ದನ್ನು ಅಂದರೆ ಈ ಎನ್.ಆರ್. ಮೇಲೆ ಮಾಡತಕ್ಕಂಥಾದ್ದನ್ನು ನಿಲ್ಲಿಸಿ, ಇವತ್ತು ಎಸ್ಟಿಮೇಟ್ ಮಾಡಿ, ಟೆಂಡರ್ ಮಾಡಿ, ಕೆಲಸ ಮಾಡಿ ಎನ್ನತಕ್ಕಂಥ ಏನು ಆದೇಶ ಕೊಟ್ಟಿದ್ದಾರೆ, ಆ ಹಿನ್ನೆಲೆಯಲ್ಲಿ ನಾವು ಇನ್ನೂ ಎಸ್ಟಿಮೇಟ್ ಆಗತಕ್ಕಂಥಾದ್ದು, ಟೆಂಡರ್ ಆಗತಕ್ಕಂಥಾದ್ದರಲ್ಲಿ ಇವೆಯೇ ಹೊರತು ಆ ಯಾವ ಕೆಲಸಗಳನ್ನೂ ಪ್ರಾರಂಭ ಮಾಡತಕ್ಕಂಥಾದ್ದನ್ನು ಮಾಡಿಲ್ಲ. ಅಲ್ಲಿ ಹಾಗಾಗಿದ್ದರೆ ಇದು ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಸಣ್ಣ ನೀರಾವರಿ ಇಲಾಖೆಯವರು ಹೇಗೆ ಮಾಡಬೇಕು? ಇನ್ನು

ಅರಣ್ಯ ಇಲಾಖೆಯವರು ಮಳೆ ಹುಯ್ದರೇ ತಾನೇ ಇವರು ಕೆಲಸ ತೆಗೆದುಕೊಳ್ಳುವುದು. ಮಳೆ ಹುಯ್ದಿರತಕ್ಕಂಥಾದ್ದು, ಅವರೇ ಒಪ್ಪಿಕೊಂಡ ಹಾಗೆ, ಜುಲೈ ಕೊನೆ ಅಥವಾ ಆಗಸ್ಟ್. ಅರಣ್ಯ ಇಲಾಖೆಯವರು ಹೇಗೆ ಕೆಲಸ ತೆಗೆದುಕೊಳ್ಳುತ್ತಾರೆ? ಅಧ್ಯಕ್ಷರೇ. ನಿಮ್ಮ ಡಿ.ಪಿ.ಎ.ಪಿ. ಪ್ರೋಗ್ರಾಮ್ ಇರಬಹುದು. ಅಫೊರ್‌ಸ್ಟೇಷನ್ ಪ್ರೋಗ್ರಾಮ್ ಇರಬಹುದು, ಯಾವಾಗ ಕೆಲಸ ಶುರು ಮಾಡುತ್ತೀರಿ? ಹಾಗಿದ್ದರೆ, ಇವರು ಹೇಳುವ ಪ್ರಕಾರ ಇಷ್ಟೊಂದು ಮಾನವ ದಿನಗಳನ್ನು ನಾವು ಮಾಡಿಬಿಟ್ಟಿದ್ದೇವೆ, ಕೆಲಸ ಒದಗಿಸಿದ್ದೇವೆ ಎನ್ನತಕ್ಕಂಥಾದ್ದನ್ನು ಹೇಳುವುದಾದರೆ ಇದನ್ನೂ ನಾವು ಸುಳ್ಳು ಅಂತ ಭಾವಿಸಬೇಕೋ, ಸತ್ಯ ಅಂತ ಭಾವಿಸಬೇಕೋ, ಅಧ್ಯಕ್ಷರೇ, ಇವತ್ತು ಅವರು ಇಲ್ಲ ಅಂತ ಹೇಳಿಲ್ಲ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾರೆ. ಅವರು ವಿಚಾರಣೆ ಮಾಡಿದ್ದಾರೆ. ಅಧಿಕಾರಿಗಳನ್ನು, ಶಾಸಕರನ್ನು ಕೂರಿಸಿಕೊಂಡು, ಒಪ್ಪಿಕೊಂಡು ಎದ್ದು ಬಂದಿದ್ದಾರೆ. ಇವತ್ತು ನಾವು ಕೆಲಸ ಮಾಡಿದ್ದೇವೆ ಎನ್ನತಕ್ಕಂಥಾದನ್ನು ಹೇಳಿದ್ದಾರೆ. ಇದರಿಂದ ರೈತರಿಗೆ ಇವರು ಎಷ್ಟರಮಟ್ಟಿಗೆ ಈ ಬರಗಾಲದಲ್ಲಿ ಉದ್ಯೋಗವನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ? ಇವರಿಗೆ ರೈತರ ಬಗ್ಗೆ ಎಷ್ಟು ಕಾಳಜಿ ಇದೆ? ಎಷ್ಟರಮಟ್ಟಿಗೆ ಸ್ಪಂಧಿಸಿದ್ದಾರೆ? ಇವತ್ತು, ನನ್ನ ಹತ್ತಿರ ಅಂಕಿಅಂಶ ಇದೆ, ನಾನು ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಇವರು ಕೊಟ್ಟಿರುವುದೇ ಈ ಅಂಕಿ ಅಂಶ. ಕುಡಿಯುವ ನೀರಿಗೆ ದುಡ್ಡು ಕೊಟ್ಟಿದ್ದಾರೆ, ನಾವು ಇಲ್ಲ ಎಂದು ಹೇಳಲ್ಲ. ಎಷ್ಟು ಖರ್ಚಾಗಿದೆ ಎನ್ನತಕ್ಕಂಥಾದ್ದನ್ನು ಅವರೇ ಹೇಳಿದ್ದಾರೆ. ತೀವ್ರ ಬರಗಾಲ ಇದ್ದಂಥ ಸಂದರ್ಭದಲ್ಲಿ ಕೊಟ್ಟಷ್ಟೂ ಹಣವನ್ನು ಕುಡಿಯುವ ನೀರಿಗೆ ಸಮರ್ಪಕವಾಗಿ ನೂರಕ್ಕೆ ನೂರರಷ್ಟು ಖರ್ಚು ಮಾಡಬೇಕು ಸರ್ಕಾರಕ್ಕೆ ನಿಜವಾಗಿ ಕಳಕಳಿ ಇದ್ದರೆ. 1,265 ಲಕ್ಷ ಅಂದರೆ 12.65 ಕೋಟಿ ರೂಪಾಯಿ ಹಣವನ್ನು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಮ್ಮ ಜಿಲ್ಲೆಗೂ ಹಣ ಬಂದಿದೆ ಅಧ್ಯಕ್ಷರೇ, 68 ಲಕ್ಷ ರೂಪಾಯಿ. ಖರ್ಚು ಮಾಡಿರುವುದು, ಅವರೇ ಕೊಟ್ಟಿರತಕ್ಕಂಥ ಮಾಹಿತಿ ಪ್ರಕಾರ, ಎಷ್ಟು ಎಂದರೆ 513 ಲಕ್ಷ ಖರ್ಚು ಮಾಡಿದ್ದೇವೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ಶೇ.50ರಷ್ಟೂ ಇಲ್ಲ. ಇದು ನಿಮ್ಮದೇ ಅಂಕಿ ಅಂಶ, ನನ್ನದಲ್ಲ. ಈ ರೀತಿ ಆದರೆ, ಈ ಹೇಳಿಕೆಯನ್ನೇ ನಾನು ಆಧಾರವಾಗಿ ಇಟ್ಟುಕೊಂಡು ಹೇಳುತ್ತಿದ್ದೇನೆ. ಈ ಕಡೆ ಹಣ ಒದಗಿಸಿರುವುದು ಎಷ್ಟು, ಖರ್ಚು ಮಾಡಿರುವುದು ಎಷ್ಟು ಅಂದರೆ 30-7-95ಕ್ಕೆ ಖರ್ಚು ಮಾಡಿರತಕ್ಕಂಥಾದ್ದು ಎಷ್ಟು ಅಂತ ಹೇಳಿದ್ದಾರೆ. ಈ ತರಹ ಆದರೆ ನಿಜವಾದ, ತೀವ್ರವಾದಂಥ ಬರಗಾಲ ಇದ್ದಂಥ ಕಾಲದಲ್ಲಿ, ಏಪ್ರಿಲ್ 20ನೇ ತಾರೀಖಿಗೆ ಹಣ ಬಿಡುಗಡೆ ಮಾಡಿದ್ದಾರೆ. ಕುಡಿಯುವ ನೀರಿಗಾಗಿ ಜವಾಹರ್ ರೋಜ್ಗಾರ್ ಯೋಜನೆಯಲ್ಲಿ ತೀವ್ರ ಬರಗಾಲ ಇದೆ ಅಂತ ಹಣ ಬಿಡುಗಡೆ ಮಾಡಿದ್ದಾರೆ. ನಾನು ಹೇಳುತ್ತೇನೆ, ಜವಹಾರ್ ರೋಜ್ಗಾರ್ ಯೋಜನೆಗೆ ಯಾವ ರೀತಿ ಈ ಒಂದು ಕೆಲಸ ಮಾಡಿದ್ದಾರೆ ಈ ಸರ್ಕಾರದವರು ಎನ್ನತಕ್ಕಂಥ ವಿಚಾರ ನಿಮಗೆ ಹೇಳುತ್ತೇನೆ ಅಧ್ಯಕ್ಷರೇ. ''1994-95ನೇ ಸಾಲಿನಲ್ಲಿ ಜವಾಹರ್ ರೋಜ್ಗಾರ್ ಯೋಜನೆಯಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಹೆಚ್ಚು ಕಡಿಮೆ ಪೂರ್ಣವಾಗಿ ಖರ್ಚಾಗಿರುವ ಸಂಭವ ಕಂಡುಬಂದಿರುತ್ತದೆ. ಹಾಗೂ ಕೇಂದ್ರ ಸರ್ಕಾರದಿಂದ ಹಣ ಬರುವತನಕ, ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡುವ ದೃಷ್ಟಿಯಿಂದ ರಾಜ್ಯ ಸರ್ಕಾರ ಮುಂದಿನ ಸಾಲಿಗೆ ರಾಜ್ಯದ ವಂತಿಗೆಯನ್ನು ಮುಂಗಡ ಬಿಡುಗಡೆ ಮಾಡುವುದು ಅತ್ಯಾವಶ್ಯಕ ಎಂದು ಕಂಡುಬಂದಿರುತ್ತದೆ. ಆದುದರಿಂದ ಕೂಲಂಕುಷವಾಗಿ ಸದರೀ ವಿಷಯವನ್ನು ಪರಿಶೀಲಿಸಿ ಮುಂಗಡ ಅನುದಾನವನ್ನು ಬಿಡುಗಡೆ ಮಾಡುವುದು ಅತ್ಯಾವಶ್ಯಕ ಎಂದು ಕಂಡುಬಂದಿರುತ್ತದೆ. ಆದುದರಿಂದ ಕೂಲಂಕುಷವಾಗಿ ಸದರೀ ವಿಷಯವನ್ನು ಪರಿಶೀಲಿಸಿ ಮುಂಗಡ ಅನುದಾನವನ್ನು ಬಿಡುಗಡೆ ಮಾಡಲು

ತೀರ್ಮಾನಿಸಲಾಗಿದ್ದು, 370 ಲಕ್ಷ ಜವಹಾರ್ ರೋಜ್ಗಾರ್ ಯೋಜನೆಯನ್ನು 1-4-95ಕ್ಕೆ ಸರ್ಕಾರ ಬಿಡುಗಡೆ ಮಾಡಿದೆ'' ಅಂದರೆ ತೀವ್ರ ಬರಗಾಲ ಇದೆ. ಅಲ್ಲಿ ಉದ್ಯೋಗ ಒದಗಿಸತಕ್ಕಂಥ ಅವಶ್ಯಕತೆ ಇದೆ ಎಂದು ಸರ್ಕಾರಕ್ಕೆ ಮನವರಿಕೆಯಾಗಿದೆ ಎನ್ನತಕ್ಕಂಥಾದ್ದು ತೀರ್ಮಾನ ಆಯಿತಲ್ಲ. ಈ ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕಾದರೆ ಜಿಲ್ಲಾ ಪಂಚಾಯಿತಿಗಳಿಗೆ ಯಾವ ರೀತಿ ಬಿಡುಗಡೆ ಮಾಡಬೇಕು? ಎಲ್ಲಿ ಉದ್ಯೋಗದ ಅವಶ್ಯಕತೆ ಇದೆ, ಅಲ್ಲಿ ಜಿಲ್ಲಾ ಪಂಚಾಯತಿ ತಾಲ್ಲೂಕು ಪಂಚಾಯಿತಿಗಳಲ್ಲಿ ತೀರ್ಮಾನವನ್ನು ಮಾಡಿ ಹಣವನ್ನು ಉಪಯೋಗ ಮಾಡಿ ಎನ್ನತಕ್ಕಂಥ ಆದೇಶವನ್ನು ಕೊಡಲಿಲ್ಲ. 370 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ, ಆಮೇಲೆ ಇಂತಿಂಥ ತಾಲ್ಲೂಕುಗಳಿಗೆ ಹಣವನ್ನು ಕೊಡುತ್ತೇವೆ ಎಂದು ಬಿಡುಗಡೆ ಮಾಡುತ್ತದೆ ಈ ಸರ್ಕಾರ. ಆದರೆ ಇದರಲ್ಲಿ ನಡೆದಿರುವ ತಾರತಮ್ಯವನ್ನು ನೋಡಿದರೆ, ಹಿಂದಿನ ಯಾವುದೇ ಸರ್ಕಾರ ಈ ಕೆಲಸ ಮಾಡಿರಲಿಲ್ಲ. 80 ಲಕ್ಷ ರೂಪಾಯಿಗಳನ್ನು ನನ್ನ ಜಿಲ್ಲೆಗೆ ಬಿಡುಗಡೆ ಮಾಡಿದ್ದಾರೆ. ಆದರೆ ಅದರಲ್ಲಿ ಹೊಳೆನರಸಿಪುರಕ್ಕೆ ಕೊಟ್ಟಿರುವುದು 50 ಲಕ್ಷ ರೂಪಾಯಿಗಳು. ಉಳಿದ ಏಳು ತಾಲ್ಲೂಕುಗಳಿಗೆ ಕೊಟ್ಟಿರುವುದು ಉಳಿದ 30 ಲಕ್ಷ ರೂಪಾಯಿಗಳು ಮಾತ್ರ. ಮಾನ್ಯ ಅಧ್ಯಕ್ಷರೇ,ಈ ರೀತಿ ಯಾವುದಾದರೂ ಸರ್ಕಾರ ಹಿಂದೆ ಮಾಡಿದೆ ಎಂದು ತಾವು ಕೇಳಿದ್ದೀರಾ?

ಶ್ರೀ ವಾಟಾಳ್ ನಾಗರಾಜ್:- ಜಾಲಪ್ಪನವರೇ, ಈ ಕಡೆ ಸ್ವಲ್ಪ ಕೇಳಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ಅವರಿಗೆ ಪೂರ್ತಿ ಅಧಿಕಾರ ಇದ್ದಿದ್ದರೆ ಕೇಳುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್:- ಇದನ್ನು ಮಾನ್ಯ ಜಾಲಪ್ಪನವರು ಸ್ವಲ್ಪ ಚೆನ್ನಾಗಿ ಕೇಳಬೇಕು ಅಂತ. ಅವರು ಕೇಳುತ್ತಿದ್ದಾರೋ ಇಲ್ಲವೋ ಎಂದು ಅನುಮಾನ ನಮಗೆ ಬಂದುಬಿಟ್ಟಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರಿಗೆ ಸಂಪೂರ್ಣ ಅಧಿಕಾರ ಇದ್ದಿದ್ದರೆ ಈ ರೀತಿಯಾಗಿ ತಾರತಮ್ಯವನ್ನು ಮಾಡುತ್ತಿರಲಿಲ್ಲ. ಎಲ್ಲರನ್ನೂ ಸರಿಸಮಾನವಾಗಿ ನೋಡುತ್ತಿದ್ದರು. ಹೊಳೆನರಸೀಪುರಕ್ಕೂ ಅಷ್ಟೆ, ಗಂಡಸಿಗೂ ಅಷ್ಟೆ, ಅರಸೀಕೆರೆಗೂ ಅಷ್ಟೆ. ಎಲ್ಲ ತಾಲ್ಲೂಕುಗಳಿಗೂ ಸರಿಸಮಾನವಾಗಿ ಅವರು ನೋಡುತ್ತಿದ್ದರು. ಆದರೆ ನಿಮ್ಮದೇ ಆದಂಥ ಅಧಿಕಾರ ಇಲ್ಲದೇ ಇರುವ ಕಾರಣ, ಈ ವ್ಯತ್ಯಾಸ ಆಗಿದೆ.

ಶ್ರೀ ಬಿ.ಶಿವರಾಮು:- ಹಾಸನಜಿಲ್ಲೆಯಲ್ಲಿ ಹೆಚ್ಚುಕಡಿಮೆ ಅರಸೀಕೆರೆ ತಾಲ್ಲೂಕಿನಲ್ಲಿ ಪದೇ ಪದೇ ಬರಗಾಲ ಬರುತ್ತಿದೆ, ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಹೋದವರ್ಷ ಹಿಂಗಾರು ಸಕಾಲದಲ್ಲಿ ಸಾಕಷ್ಟು ಆಗದೆ ಕೆಲಸ ಆಗಲಿಲ್ಲ. ಮುಖ್ಯವಾಗಿ ಉದ್ಯೋಗದ ಅವಶ್ಯಕತೆ ಇದೆ ಎನ್ನತಕ್ಕದ್ದು ಸತ್ಯ. ಇದರ ಬಗ್ಗೆ ಇವರಿಗೆ ಕಳಕಳಿ ಇದ್ದರೆ ಎಲ್ಲಿ ಮಳೆಬಾರದೇನೆ ನೀರಿನ ಬವಣೆ ಇದೆ, ಆ ಪ್ರದೇಶಗಳಲ್ಲಿ ಉದ್ಯೋಗ ನೀಡುವ ಅವಶ್ಯಕತೆ ಇದೆ. ಆ ಜನಕ್ಕೆ ಕೆಲಸ ಕೊಡಬೇಕು ಎಂಬ ದೃಷ್ಟಿಯಿಂದ ಈ ಹಣ ಬಿಡುಗಡೆ ಮಾಡುತ್ತಾರೋ ಅಥವಾ ಸರ್ಕಾರವೇ ಕೂಲಿಕಾರ್ಮಿಕರಿಗೆ ಉದ್ಯೋಗ ಒದಗಿಸುವುದು ಅವಶ್ಯಕವೆಂಬ ಮಾತನ್ನು ಹೇಳಿ ಹಣ ಬಿಡುಗಡೆ ಮಾಡತಕ್ಕದ್ದು ಹೇಗೆ ಎಂದರೆ, ಇಲ್ಲಿ ನನ್ನ ಹತ್ತಿರ ಪಟ್ಟಿ ಇದೆ. ಹಾಸನ ಜಿಲ್ಲೆಗೆ 80 ಲಕ್ಷ ಕೊಟ್ಟಿದ್ದರಲ್ಲಿ ಹೊಳೇನರಸೀಪುರಕ್ಕೆ 50 ಲಕ್ಷ ಮತ್ತು ಮಿಕ್ಕ ಏಳು ತಾಲ್ಲೂಕುಗಳಿಗೆ 30 ಲಕ್ಷ. ಬೆಂಗಳೂರು ಗ್ರಾಮಾಂತರಕ್ಕೆ 50 ಲಕ್ಷ ಬಿಡುಗಡೆ ಮಾಡುತ್ತಾರೆ, ಎಷ್ಟು ಮಟ್ಟಿಗೆ ಕೆಲಸ ಆಗಿದೆಯೆಂದು ಅವರೇ ಹೇಳಬೇಕು. ರಾಮನಗರ ತಾಲ್ಲೂಕಿಗೆ 35 ಲಕ್ಷ. ಕನಕಪುರ ತಾಲ್ಲೂಕಿಗೆ 15 ಲಕ್ಷ. ಮೈಸೂರಿಗೆ ಬಂದರೆ 20 ಲಕ್ಷ ಬಿಡುಗಡೆ ಮಾಡಿದ್ದಾರೆ ಅಷ್ಟೆ. ಐಟಮ್‌ವೈಸ್ ತೆಗೆದುಕೊಂಡರೆ ನಂಜನಗೂಡಿಗೆ ಕೂಡ ಹೆಚ್ಚು ಕೊಟ್ಟಿಲ್ಲ.

ಮಂಡ್ಯ ಜಿಲ್ಲೆಗೆ ಬಂದರೆ ಎರಡು ಕ್ಷೇತ್ರಕ್ಕೆ, ಆದರಲ್ಲಿ ಕಿರುಗಾವಲಿಗೆ 5 ಲಕ್ಷ ಬಿಡುಗಡೆ ಮಾಡಿರುವುದು 10 ಲಕ್ಷ, ಅದರಲ್ಲಿ ಇನ್ನೊಂದು ಎರಡು ಕ್ಷೇತ್ರಕ್ಕೆ 5 ಲಕ್ಷ ಅಷ್ಟೆ. ಈ ರೀತಿ ಸರ್ಕಾರ ಒಂದು ಧೋರಣೆಯನ್ನು ಇಟ್ಟುಕೊಂಡು ಇವರಿಗೆ ಬೇಕು ಬೇಕಾದವರಿಗೆ, ಬೇಕಾದ ಕ್ಷೇತ್ರಗಳಿಗೆ, ಬೇಕಾದ ಕೆಲಸಗಳನ್ನು ಬಿಡುಗಡೆ ಮಾಡತಕ್ಕಂಥ ಕೆಲಸ ಮಾಡಿದ್ದಾರೆ. ಸಾಮಾನ್ಯ ಮನುಷ್ಯನ ಬಗ್ಗೆ, ಶ್ರೀ ಸಾಮನ್ಯರ ಬಗ್ಗೆ ಕಳಕಳಿ ಇದ್ದು ಅಲ್ಲಿ ಕೆಲಸ ಅವಶ್ಯಕತೆ ಇದೆಯೆಂದು ಭಾವಿಸಿ ಸಮಾಜದಲ್ಲಿ ನ್ಯಾಯವನ್ನು ಒದಗಿಸತಕ್ಕಂಥ ಕೆಲಸವನ್ನು ಮಾಡುತ್ತಾರೆಯೇ ಎಂದು ಮಾನ್ಯ ಅಧ್ಯಕ್ಷರೇ, ತಾವೇ ಹೇಳಿ. ಬಹುಶಃ ಈ ಕಾಪಿಯನ್ನು ನಾನು ಹಿಂದೆ ಅವರಿಗೆ ಕಳಿಸಿದ್ದೆ ಕೂಡ.

ಉಪಾಧ್ಯಕ್ಷರು:- ಬೇಗ ನಿಮ್ಮ ಭಾಷಣವನ್ನು ಮುಗಿಸಿರಿ.

ಶ್ರೀ ಬಿ. ಶಿವರಾಮು:- ಇವತ್ತು 50 ಲಕ್ಷ ರೂಪಾಯಿಗಳನ್ನು ಹೊಳೆನರಸೀಪುರಕ್ಕೆ ಕೊಟ್ಟಿದ್ದಾರೆ. ಜವಾಹರ್ ರೋಜಗಾರ್ ಯೋಜನೆಯಲ್ಲಿ ಮೂಲ ಉದ್ದೇಶವೆಂದರೆ ಕೂಲಿ ಕಾರ್ಮಿಕರಿಗೆ ಉದ್ಯೋಗ ಒದಗಿಸತಕ್ಕದ್ದು ಎಂದು ಇರುವಾಗ, ಇವರು ಸಾರಾಸಗಟು 50 ಲಕ್ಷ ರೂಪಾಯಿಗಳಲ್ಲಿ ಸಮುದಾಯ ಭವನಗಳನ್ನು ತೆಗೆದುಕೊಳ್ಳುವುದನ್ನು ಮಾಡಿದ್ದಾರೆ. ಇದರಲ್ಲಿ ಉದ್ಯೋಗ ಒದಗಿಸುವುದಕ್ಕೆ ಆಗುತ್ತದೆಯೇನು? ಕೇಂದ್ರ ಸರ್ಕಾರದ ಆದೇಶದ ಪ್ರಕಾರ 60 ಪರ್ಸೆಂಟ್ ಕೂಲಿ, 40 ಪರ್ಸೆಂಟ್ ಸಾಮಗ್ರಿ, ಅಂತ ಇದೆ.

ಶ್ರೀ ಆರ್.ಎಲ್.ಜಾಲಪ್ಪ:- ಶಿವರಾಮ್‌ರವರೇ ಒಂದು ನಿಮಿಷ. ನಾನು ಏನು ಹೇಳಿದ್ದೇನೆ ಎಂದರೆ, ಹೆಚ್ಚು ಹೆಚ್ಚಿಗೆ ಆ್ಯಕ್ಷನ್ ಪ್ಲಾನ್‌ನಲ್ಲಿ ಸೇರಿಸಿಬಿಟ್ಟು ಕೆಲಸ ತೆಗೆದು ಕೊಂಡುಬಿಟ್ಟರು. ಸ್ಪಿಲ್‌ಓವರ್ ವರ್ಕ್ಸ್‌ನ್ನು ಜಾಸ್ತಿ ತೆಗೆದುಕೊಂಡುಬಿಟ್ಟರು. ಈಗ ಅದಕ್ಕೆ ಹಣ ಒದಗಿಸಿದೆ. ಕಳೆದವರ್ಷ ಇವರು ಜಾಸ್ತಿ ತೆಗೆಕೊಳ್ಳದೇ ಇದ್ದಿದ್ದರೆ ಈ ವರ್ಷ ಇಷ್ಟು ಜಾಸ್ತಿ ಹಣ ಒದಗಿಸುವುದು ಬೇಕಾಗಿರಲಿಲ್ಲ. ಅದಕ್ಕೋಸ್ಕರ ಹಣ ಒದಗಿಸಿದ್ದೇವೆಯೇ ವಿನಹ ಮುಖ್ಯಮಂತ್ರಿಗಳು ರಾಮನಗರದಲಿದ್ದಾರೆ, ಹೊಳೆನರಸೀಪುರದಲ್ಲಿ ಇದ್ದಾರೆ ಎಂದು ಒದಗಿಸಿರುವುದು ಅಲ್ಲ. ಸ್ಪಿಲ್‌ಓವರ್ ವರ್ಕ್ಸ್ ಹೋದ ವರ್ಷ ಜಾಸ್ತಿ ತೆಗೆದುಕೊಂಡಿದ್ದೇವೆ. ಅದಕ್ಕೋಸ್ಕರ ಜಾಸ್ತಿ ಹಣವನ್ನು ಒದಗಿಸಿದ್ದೇವೆ.

ಶ್ರೀ ವೈ ರಾಮಕೃಷ್ಣ:- ಆನೇಕಲ್‌ಗೆ ಕೊಟ್ಟಿರುವುದು ಎರಡು ಲಕ್ಷ. ಆದರೆ ರಾಮನಗರಕ್ಕೆ ಕೊಟ್ಟಿರುವುದು 50 ಲಕ್ಷ. ನ್ಯಾಯ, ಧರ್ಮ, ಸತ್ಯ ಇಟ್ಟುಕೊಂಡು ಹೀಗೆ ಮಾಡುತ್ತಿದ್ದೀರೋ?

ಶ್ರೀ ಆರ್.ಎಲ್.ಜಾಲಪ್ಪ:-ಕೋಟಿಗಟ್ಟಲೆ ಅಲ್ಲವಲ್ಲ.

ಶ್ರೀ ವೈ.ರಾಮಕೃಷ್ಣ:- ಆನೇಕಲ್ ಬರಪೀಡಿತ ಪ್ರದೇಶವೆಂದು ನೀವೇ ಘೋಷಣೆ ಮಾಡಿದ್ದೀರಿ. ಆದರೆ ಕೊಟ್ಟಿರುವುದು ಎರಡು ಲಕ್ಷ ಮಾತ್ರ. ಅಲ್ಲಿ 50 ಲಕ್ಷ ಕೊಟ್ಟಿದ್ದೀರಿ.

ಶ್ರೀ ಬಿ.ಶಿವರಾಮು:- ಮಾನ್ಯ ಕಂದಾಯ ಮಂತ್ರಿಗಳು ಸ್ಪಿಲ್‌ಓವರ್ ವರ್ಕ್ಸ್‌ಗೆ ಕೊಟ್ಟಿದ್ದೇವೆ ಎಂದು ಹೇಳಿದರು, ನನ್ನ ಜಿಲ್ಲೆಯ ಮಾಹಿತಿ ನನಗೆ ಗೊತ್ತು. ಪ್ರತಿ ಮೀಟಿಂಗ್‌ನಲ್ಲೂ ನಾನು ಹೋಗಿ ಎಷ್ಟು ಕೆಲಸ ಮಾಡಿದ್ದಾರೆ ಎಂದು ನೋಡಿದ್ದೇನೆ. ಆದ್ದರಿಂದ ಸದನಕ್ಕೆ ಮಿಸ್‌ಗೈಡ್ ಮಾಡತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಎರಡು ಲಕ್ಷ ಅಂದಿರಲ್ಲ, ಆನೇಕಲ್‌ಗೆ 20 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ.

ಶ್ರೀ ವೈ.ರಾಮಕೃಷ್ಣ:- ಇದು ನೀವು ಫ್ಯಾಮಿನ್ ಏರಿಯಾ ಕೆಳಗಡೆ ಕೊಟ್ಟಿರುವುದು ಅಲ್ಲ. ಎರಡು

ಲಕ್ಷ ರೂಪಾಯಿ ಮೂರು ದಿವಸಗಳ ಹಿಂದೆ ಬಂದಿದೆ. ಅದು ಎಂಪ್ಲಾಯ್‌ಮೆಂಟ್ ಜನರೇಶನ್ ಅಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಒಟ್ಟು 5 ಕೋಟಿ ಕೆಲಸಕ್ಕೋಸ್ಕರ ಕೊಟ್ಟಿದ್ದೇವೆ ಮಿಕ್ಕ ಎಲ್ಲಾ ಹಣವನ್ನು ಡ್ರಿಂಕಿಂಗ್ ವಾಟರ್‌ಗೋಸ್ಕರ ನಿಮಗೆ ಕೊಟ್ಟಿದ್ದೇವೆ. ಡ್ರಿಂಕಿಂಗ್ ವಾಟರ್‌ನಲ್ಲಿ We have done sufficient work in your taluk.

ಶ್ರೀ ಬಿ.ಶಿವರಾಮು:- ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಸ್ಪಿಲ್ ಓವರ್ ವರ್ಕ್ಸ್ ಎಂದು ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಅದು ಖಂಡಿತ ಅಲ್ಲ. ಜವಾಹರ್ ರೋಜಗಾರ್ ಯೋಜನೆಯಲ್ಲಿ 20 ಪರ್ಸೆಂಟ್ ಜಿಲ್ಲಾ ಪಂಚಾಯತ್‌ನವರು ಅನುಷ್ಠಾನಕ್ಕೆ ತರುತ್ತಾರೆ ನನ್ನ ಜಿಲ್ಲೆಯ ಮಾಹಿತಿ ನನ್ನ ಹತ್ತಿರವಿದೆ. ನನ್ನ ಜಿಲ್ಲೆಯ ಬಗ್ಗೆ ನನಗೆ ಇರುವ ಮಾಹಿತಿಯ ಪ್ರಕಾರ 85 ಪರ್ಸೆಂಟ್ ಹೋದಸಲ ಖರ್ಚು ಮಾಡುವ ಮೂಲಕ ಈಗ ಒದಗಿಸಿರುವ ಹಣ ಸ್ಪಿಲ್ ಓವರ್‌ಗೆ ಅಲ್ಲ. ಸ್ಪಿಲ್ ಓವರ್ ಒದಗಿಸುವುದು ಕ್ರಿಯಾಯೋಜನೆ ಅಪ್ರೂವ್ ಮಾಡಿಕೊಳ್ಳುವುದಕ್ಕೆ ಬಾಕಿ ಇದ್ದರೆ ಮಾತ್ರ. ಇವತ್ತು ನನ್ನ ತಾಲ್ಲೂಕಿನಲ್ಲಿ ಅದು ಇಲ್ಲ. ಇವತ್ತು ಹೊಳೆನರಸೀಪುರ ತಾಲ್ಲೂಕಿನಲ್ಲಿ ಮಾಡಿರತಕ್ಕಂಥಾದ್ದು ಇನ್ನೂ ಎಸ್ಟಿಮೇಟ್ ಪ್ಲಾನ್ ಅಪ್ರೂವ್ ಕೂಡ ಆಗಿಲ್ಲ. ನಾನು ಮುಂದೆ ಅದನ್ನು ಮಾನ್ಯ ಮಂತ್ರಿಗಳಿಗೆ ಹೇಳಬೇಕೆಂದು ಇದ್ದೆ. 80 ಲಕ್ಷ ರೂಪಾಯಿಗಳನ್ನು ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿರತಕ್ಕದ್ದು ಏನಿದೆ. ಅದನ್ನು ಮಾನ್ಯ ಮಂತ್ರಿಗಳ ಪ್ರಕಾರ ತೆಗೆದುಕೊಂಡರೆ ಇನ್ನೂ ಆ್ಯಕ್ಷನ್‌ಪ್ಲಾನ್ ಅಪ್ರೂವ್ ಆಗಿಲ್ಲ. ಆದ್ದರಿಂದ ಕೆಲಸ ಮಾಡತಕ್ಕಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಉದ್ಯೋಗ ಒದಗಿಸತಕ್ಕಂಥ ಪ್ರಶ್ನೆ ಇಲ್ಲ. ಸ್ಪಿಲ್ ಓವರ್ ವರ್ಕ್ಸ್ ಎಂದು ಹೇಳುವುದು ಖಂಡಿತವಾಗಿಯೂ ಸುಳ್ಳು. ದಯವಿಟ್ಟು ಮಾಹಿತಿಯನ್ನು ತರಿಸಿ. ಮಾನ್ಯ ಸಚಿವರು ಉತ್ತರ ಕೊಡುವಾಗ ದಯವಿಟ್ಟು ಈ ಬಗ್ಗೆ ಹೇಳಲಿ. ಈ 90 ಲಕ್ಷ ರೂಪಾಯಿ ಹೇಗೆ ಖರ್ಚಾಗಿದೆ? ಆ್ಯಕ್ಷನ್ ಪ್ಲಾನ್ ಅಪ್ರೂವ್ ಆಗದೆಯೇ ಹೊಸದು ಹಳೆಯದು ಅಂತ ಇಲ್ಲ. ಸ್ಪಿಲ್ ಓವರ್ ಮಾಹಿತಿಯನ್ನು ಅವರು ಹೇಳಿಲ್ಲ.

ಶ್ರೀ ಬಿ.ಶಿವರಾಮು:- ಜವಾಹರ್ ರೋಜಗಾರ್ ಯೋಜನೆ ವಿಚಾರದಲ್ಲಿ 370 ಲಕ್ಷ ರೂಪಾಯಿಗಳನ್ನು ತಾವು 31-3-95 ರಲ್ಲಿ ಬಿಡುಗಡೆ ಮಾಡಿದ್ದೀರಲ್ಲ? ಇದನ್ನು ಬಿಡುಗಡೆ ಮಾಡಿರತಕ್ಕಂಥ ಸಂದರ್ಭದಲ್ಲಿ ಇವತ್ತು ಹಾಸನ ಜಿಲ್ಲೆಗೆ 80 ಲಕ್ಷ ರೂಪಾಯಿ ಅಂತ ಹೇಳಿ, ಅದರಲ್ಲಿ 50 ಲಕ್ಷ ರೂಪಾಯಿಗಳನ್ನು ಹೊಳೆನರಸೀಪುರಕ್ಕೆ ಮತ್ತು 30 ಲಕ್ಷ ರೂಪಾಯಿಗಳನ್ನು ಇತರ ಏಳು ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ್ದೀರಿ. ನೀವು ಗವರ್ನಮೆಂಟ್ ಆರ್ಡರ್ ಇಶ್ಯೂ ಮಾಡಬೇಕಾದರೆ, ಸರ್ಕಾರದಿಂದ ಹಣ ಬರುವ ತನಕ ಕೂಲಿ ಕಾರ್ಮಿಕರಿಗೆ ಉದ್ಯೋಗ ಒದಗಿಸಿಕೊಡುವ ದೃಷ್ಟಿಯಿಂದ ಈ ಹಣವನ್ನು ಮುಂಗಡವಾಗಿ ಬಿಡುಗಡೆ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಹಾಸನ ಜಿಲ್ಲೆಯಲ್ಲಿ ಪ್ರಮುಖವಾಗಿ ಯಾವ ಭಾಗದಲ್ಲಿ ತೀವ್ರ ಬರಗಾಲ ಎದುರಿಸುತ್ತಿದೆ ಅಥವಾ ಬರಗಾಲದ ಉದ್ಯೋಗದ ಅವಶ್ಯಕತೆಯಿದೆ ಎಂಬುದು ತಮಗೆ ಮನವರಿಕೆಯಾಗಿರಬೇಕಲ್ಲ? ವಾಸ್ತವಿಕವಾಗಿ ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕುಗಳಲ್ಲಿ ಅರಸಿಕೆರೆ ತಾಲ್ಲೂಕನ್ನು Density of population and scarcity is always as usual. ಎಷ್ಟು ಜನಸಂಖ್ಯೆ ಇತ್ತು ಬಡವರ ಸಂಖ್ಯೆ ಎಷ್ಟು, ಹಿಂದುಳಿದವರು ಎಷ್ಟು ಜನ ಇದ್ದಾರೆ, ಹೆಚ್ಚು ಹರಿಜನರು ಇರತಕ್ಕಂಥ ಸ್ಥಳದಲ್ಲಿ ಅಥವಾ ವರ್ಗ ಇರತಕ್ಕಂಥ ಜಾಗದಲ್ಲಿ ಮಳೆ ಕೂಡ ಕಡಿಮೆ, ಇದು ಸಾಮಾನ್ಯವಾಗಿ ಬರಗಾಲ ಇರತಕ್ಕದ್ದಕ್ಕೆ ತಾವು ಹಣ ಕೊಡಬೇಕು ಎಂದು ಸಾಮಾನ್ಯವಾಗಿ ಇರತಕ್ಕದ್ದರ ಜೊತೆಗೆ ಹಣ ಒದಗಿಸುವ ದೃಷ್ಟಿಯಿಂದ ಈ 80 ಲಕ್ಷ ರೂಪಾಯಿಗಳಲ್ಲಿ 50 ಲಕ್ಷ ರೂಪಾಯಿಗಳನ್ನು ಹೊಳೆನರಸೀಪುರಕ್ಕೆ

ಬಿಡುಗಡೆ ಮಾಡಿ ಉಳಿದ 30 ಲಕ್ಷ ರೂಪಾಯಿಗಳನ್ನು 3 ತಾಲ್ಲೂಕುಗಳಿಗೆ ಬಿಡುಗಡೆ ಮಾಡಿದ್ದೀರಿ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಸದಸ್ಯರು ಹೇಳುವಂತೆ ಹೊಳೆನರಸೀಪುರಕ್ಕೆ ಪಕ್ಷಪಾತ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದರೂ ಕೂಡ, 30 ನೇ ಮಾರ್ಚ್‌ನಲ್ಲಿ ಹಾಸನಜಿಲ್ಲೆಯಲ್ಲಿ ಖರ್ಚಾಗದೇ ಇರತಕ್ಕಂಥ ಹಣ ಎಷ್ಟು ಎಂದು ನೋಡಿದಾಗ, ಇದರಲ್ಲಿ ಬಂದಿರತಕ್ಕಂಥ ಹಣದಲ್ಲಿಯೇ ಕೊಟ್ಟಿರುವುದು ಆಗಿದೆ. ಅದಕ್ಕೆ ಇನ್ನೂ ಜಿಲ್ಲಾ ಪಂಚಾಯತ್ ಚುನಾವಣೆ ಆಗಿರಲಿಲ್ಲ. ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತಿಗಳು ಅಸ್ತಿತ್ವಕ್ಕೆ ಬಂದಿರಲಿಲ್ಲ. ಆ ಸಂದರ್ಭದಲ್ಲಿ ಕೊಟ್ಟಿರುವಂಥ ಹಣ ಖರ್ಚು ಮಾಡುವುದಕ್ಕೆ ಸಾಧ್ಯ ಇಲ್ಲವೆಂದಾಗ ಅಲ್ಲಿ ಉಳಿದಿರತಕ್ಕಂಥ ಹಣವನ್ನು ಅಲ್ಲಿಂದ ಬರದಂಥ ಬೇಡಿಕೆಗಳಿಗೆ ಅನುಗುಣವಾಗಿ, ಅಲ್ಲಿ ಇರತಕ್ಕಂಥ ಕಾರ್ಯಕ್ರಮಕ್ಕೆ ಕೊಟ್ಟಿರತಕ್ಕಂಥ ಆಧಾರದ ಮೇಲೆ ಹೊಳೆನರಸೀಪುರಕ್ಕೆ 50 ಲಕ್ಷ ರೂಪಾಯಿಗಳನ್ನು, ಉಳಿದ ತಾಲ್ಲೂಕುಗಳಿಗೆ 30 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. 80 ಲಕ್ಷ ರೂಪಾಯಿಗಳನ್ನು ಮಾರ್ಚ್ ತಿಂಗಳ ಒಳಗೆ ಖರ್ಚುಮಾಡದೇ ಇರುವ ಹಣವನ್ನು ಹೊಂದಾಣಿಕೆ ಮಾಡಿಕೊಟ್ಟಿದ್ದೇವೆಯೇ ಹೊರತು ಬೇರೆ ಏನೂ ಇಲ್ಲ.

ಶ್ರೀ ವೈ.ರಾಮಕೃಷ್ಣ:-ಎಲ್ಲ ಜಿಲ್ಲೆಗಳಿಗೂ ಇದೇ ತತ್ವವನ್ನು ಅನ್ವಯಿಸುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್:- ನಾನು ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುವುದು ಇಷ್ಟೆ. ಎಲ್ಲೆಲ್ಲಿ ಮಾರ್ಚ್ ತಿಂಗಳೊಳಗೆ ಖರ್ಚಾಗದೇ ಇರುವ ಹಣ ಇರುತ್ತದೆ, ಮರು ಹೊಂದಾಣಿಕೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟ ಸಂದರ್ಭದಲ್ಲಿ ಅದನ್ನು ಅರ್ಹತೆ ಮೇಲೆ ಪರಿಶೀಲಿಸಿ ಕೊಟ್ಟಿದ್ದೇವೆ.

ಶ್ರೀ ಎ.ಟಿ.ರಾಮಸ್ವಾಮಿ:- ಜವಾಹರ್ ರೋಜ್‌ಗಾರ್ ಯೋಜನೆಯ ಹಣವನ್ನು ಜಿಲ್ಲಾ ಪಂಚಾಯತಿ ಮತ್ತು ಗ್ರಾಮ ಪಂಚಾಯಿತಿಗಳ ನಡುವೆ, 20:80 ರ ಪ್ರಮಾಣದ ಆಧಾರದ ಮೇಲೆ ಹಂಚಿಕೆ ಮಾಡಬೇಕೆಂಬ ನಿಯಮ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಹಾಗಿದ್ದಮೇಲೆ, ನೀವು ತಾಲ್ಲೂಕುವಾರು ಹೇಗೆ ಬಿಡುಗಡೆ ಮಾಡಿದಿರಿ ತಾವು ಮತ್ತೊಂದು ಹೇಳಿದಿರಿ. ಮರು ಹೊಂದಾಣಿಕೆ ಮಾಡುವುದಕ್ಕೆ ಬೇಡಿಕೆ ಬಂದಿತ್ತು, ಅದಕ್ಕೆ ನಾವು ಮರು ಹೊಂದಾಣಿಕೆ ಮಾಡಿ, ಆ ಬೇಡಿಕೆಯಂತೆ ನಾವು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳಿದಿರಿ. ತಾಲ್ಲೂಕುವಾರು ಮರು ಹೊಂದಾಣಿಕೆ ಮಾಡಿ, ಹಣ ಬಿಡುಗಡೆ ಮಾಡಿ ಎಂದು ಆ ಜಿಲ್ಲಾ ಪಂಚಾಯ್ತಿಯವರು ಕಳುಹಿಸಿದ್ದಾರೆಯೇ? ಒಂದು ವೇಳೆ ಆ ರೀತಿ ಕಳುಹಿಸಿದ್ದರೆ, ಅದನ್ನು ಸದನದ ಮುಂದೆ ಇಡಿ, ಇದು ಸತ್ಯಕ್ಕೆ ದೂರವಾದ ವಿಚಾರ. ಇದು ಸುಳ್ಳು ಮಾಹಿತಿ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಉಪಾಧ್ಯಕ್ಷರೇ, ಈ ತರಹದ ವ್ಯಂಗ್ಯದ ಮಾತುಗಳನ್ನು ನಾವೂ ಕೂಡ ಬಳಸಬಹುದು. ನಾವು ಬರೀ ರೋಜ್‌ಗಾರ್‌ನಲ್ಲಿ ಹಣ ಕೊಟ್ಟಿದ್ದೇವೆಂದು ನೀವೇಕೆ ಯೋಚನೆ ಮಾಡಬೇಕು ಮತ್ತು ಊಹಿಸಬೇಕು. ಈಗ ಉದಾಹರಣಾರ್ಥವಾಗಿ, ಖರ್ಚಾಗದ ಹಣ ಎಂದರೆ, ಒಂದು ವೇಳೆ ಏನಾಗುತ್ತದೆ. ಉಪಾಧ್ಯಾಯರುಗಳಿಗಾಗಿ, ಸ್ಯಾಂಕ್ಷನ್ ಪೋಸ್ಟ್‌ಗಳಿಗಾಗಿ ಹಣ ಕೊಟ್ಟಿರುತ್ತಾರೆ. ಉಪಾಧ್ಯಾಯರ ನೇಮಕಾತಿಯಾಗಿರುವುದಿಲ್ಲ. ಆ ಇಲಾಖೆಯಲ್ಲಿ ಹಣ ಉಳಿದಿರುತ್ತದೆ. ಈ ರೀತಿ ಉಳಿತಾಯವಾಗಿರತಕ್ಕ ಹಣವನ್ನು ಕೊಡುವುದಕ್ಕೆ ಸಂಪೂರ್ಣ ಅಧಿಕಾರ ಇದೆಯೇ ವಿನಹ ನಾರಮ್ಸ್ ಪ್ರಕಾರವೇ ಮಾಡಬೇಕೆಂದೇನಿಲ್ಲ. ನೀವು ಅದನ್ನು ಕೇಳುವುದಾಗಿದ್ದರೆ, ನಾಳೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಹಾಸನ ಜಿಲ್ಲೆಯಲ್ಲಿ ಯಾವ ಯಾವ ಬಾಬುಗಳಲ್ಲಿ ಹಣ ಉಳಿತಾಯವಾಗಿತ್ತು ಎಂಬುದನ್ನು ವಿವರವಾಗಿ ಕೊಡುತ್ತೇವೆ. ಆಗ ನಾವು ನಾರ್ಮ್ಸ್‌ನ್ನು

ಬಿಟ್ಟಿದ್ದೇವೆಯೇ ಇಲ್ಲವೇ ಎಂಬುದು ತಮಗೆ ಗೊತ್ತಾಗುತ್ತದೆ.

ಶ್ರೀ ಬಿ.ಶಿವರಾಮ್:- ಹಾಸನದಲ್ಲಿ ಎಷ್ಟು ಹಣ ಉಳಿದಿತ್ತು ಎಂಬ ಮಾತನ್ನು ಮಂತ್ರಿಗಳಿಗೆ ಹೇಳಿಬಿಡುತ್ತೇನೆ. ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಹಣ ಉಳಿದದ್ದು, ದಯವಿಟ್ಟು ಮಂತ್ರಿಗಳು ಕೇಳಿದರೆ, ಸ್ವಲ್ಪ ವಿವರಣೆಯನ್ನು ಹೇಳುತ್ತೇನೆ...

ಶ್ರೀ ಆರ.ಎಲ್.ಜಾಲಪ್ಪ:- ಮಾನ್ಯ ಉಪಾಧ್ಯಕ್ಷರೇ, ಉತ್ತರ ಯಾವತ್ತು

ಉಪಾಧ್ಯಕ್ಷರು:- ಇವತ್ತೇ ಉತ್ತರ ಕೊಡಬೇಕು.

ಶ್ರೀ ಆರ್.ಎಲ್.ಜಾಲಪ್ಪ:- ಈ ರೀತಿ ಒಂದು ಗಂಟೆ ಮಾತನಾಡಿದರೆ, ಇವತ್ತೇ ಉತ್ತರ ಕೊಡುವುದಕ್ಕಾಗುತ್ತದೆಯೇ? ನಾಳೆ ನಾನು ತಮ್ಮ ಅಪ್ಪಣೆ ಪಡೆದು, ಸದನದಲ್ಲಿ ಇರುವುದಿಲ್ಲ. ನಾಳೆ ನಮ್ಮ ಮನೆಯಲ್ಲಿ ಒಂದು ಕಾರ್ಯ ಇದೆ. ನನ್ನ ತಮ್ಮನ ಪತ್ನಿಯ ಉತ್ತರ ಕ್ರಿಯಾದಿಗಳ ಕಾರ್ಯವಿರುವುದರಿಂದ ನಾಳೆ ನಾನು ಇರುವುದಕ್ಕಾಗುವುದಿಲ್ಲ. ಇವತ್ತು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದೇ ಹೋದರೆ, ನಾಡಿದ್ದು ಉತ್ತರ ಕೊಡಲು ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು:- ಇವತ್ತು ಇಲ್ಲಿಗೆ ಮುಗಿಸಿ, ಡಿಮ್ಯಾಂಡ್ಸ್ ತೆಗೆದುಕೊಂಡು ಇಂಟ್ರಡ್ಯೂಸ್ ಮಾಡಲಿ. ಮತ್ತೆ ನಾಡಿದ್ದು ಈ ವಿಚಾರದಲ್ಲಿ ಚರ್ಚೆಯಾದ ನಂತರ ಉತ್ತರ.

ಶ್ರೀ ಬಿ.ಶಿವರಾಮ್:- ಸನ್ಮಾನ್ಯ ಉಪಾಧ್ಯಕ್ಷರೇ, ತಮ್ಮ ಮೂಲಕ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹೇಳುತ್ತಿದ್ದೇನೆ ಜೆ.ಆರ್.ವೈ.ನಲ್ಲಿ ಹಣ, ಹಾಸನಜಿಲ್ಲೆಯಲ್ಲಿ ಸಾಕಷ್ಟು ಉಳಿದಿತ್ತು ಎಂದು ಏನು ಹೇಳಿದ್ದೀರಿ, ನಾನೇ ಹೇಳುತ್ತಿದ್ದೇನೆ. ಜೆ.ಆರ್.ವೈ.ನಲ್ಲಿ ಪ್ರಾರಂಭದಲ್ಲಿ ಉಳಿದಿದ್ದು ಒಟ್ಟು 102.470 ಒಟ್ಟು 102 ಲಕ್ಷ. ಗ್ರಾಮ ಪಂಚಾಯ್ತಿದು ಮತ್ತೆ 20 ಪರ್ಸೆಂಟ್ ಜಿಲ್ಲಾಪಂಚಾಯ್ತಿದು ಸೇರಿ. ಇದರೊಳಗೆ ಜಿಲ್ಲಾ ಪಂಚಾಯ್ತಿ ಹಣ ಉಳಿದಿದ್ದು, ಕೇವಲ 4 ಲಕ್ಷ ಏನು 80 ಪರ್ಸೆಂಟ್ ಗ್ರಾಮಪಂಚಾಯ್ತಿಗೆ ಮತ್ತು 20 ಪರ್ಸೆಂಟ್ ಜಿಲ್ಲಾ ಪಂಚಾಯ್ತಿಗೆ ಕೊಡುತ್ತೀರಿ, ಇದರಲ್ಲಿ ಹಾಸನ ಜಿಲ್ಲೆಯಲ್ಲಿ ಉಳಿದದ್ದು ಕೇವಲ 4 ಲಕ್ಷ. ತಾವು ಜೆ.ಆರ್.ವೈ. ಹಣ ಉಳಿದುದರಲ್ಲಿ ಮರು ಹೊಂದಾಣಿಕೆ ಮಾಡಿದ್ದೇವೆ, ಎಷ್ಟು ಉಳಿದಿದೆ ಎಂಬ ಬಗ್ಗೆ ಮಾಹಿತಿ ಕೊಡುತ್ತೇವೆ ಎಂಬ ಮಾತನ್ನು ಹೇಳಿದಿರಿ.

ಉಪಾಧ್ಯಕ್ಷರು:- ಮಾನ್ಯ ಶಿವರಾಮುರವರೇ ಇದರ ವಿವರಗಳನ್ನು ನಾಳೆ ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ತೆಗೆದುಕೊಳ್ಳಿ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ರಾಮಸ್ವಾಮಿಯವರ ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದ್ದೇನೆ. ಉಳಿತಾಯದ ಹಣ ಎನ್ನತಕ್ಕಂತಾದ್ದು ಜೆ.ಆರ್.ವೈ ನಲ್ಲಾಗಲೀ, ಎ.ಇ.ಎನ್.ನಲ್ಲಾಗಲೀ ಉಳಿತಾಯವಾಗಿದೆ ಎಂದು ಭಾವಿಸಿಕೊಳ್ಳಬೇಕಾದ ಅಗತ್ಯ ಇಲ್ಲ. ಈಗ ಮಂಜೂರಾದ ಹುದ್ದೆಗಳಿರುತ್ತವೆ, ಈ ಹುದ್ದೆಗಳಿಗೆ ಯೋಜನೆಯಲ್ಲಿ ಅಳವಡಿಸಿಕೊಂಡಿರುತ್ತೇವೆ. ಆದರೆ, ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ. ಆ ಸಮಯದಲ್ಲಿ ಉಳಿತಾಯವಾದಂಥ ಹಣವನ್ನೂ ಕೂಡ ಬೇರೆ ಯೋಜನೆಗಳಿಗೆ ಪುನರ್ ಹೊಂದಾಣಿಕೆ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದೇನೆ. ತಾವು ಕೇವಲ 4 ಲಕ್ಷ ರೂಪಾಯಿಗಳ ಬಗ್ಗೆ ಯೋಚನೆ ಮಾಡಬೇಕಾದ ಅಗತ್ಯವಿಲ್ಲ.

ಶ್ರೀ ಬಿ.ಶಿವರಾಮ್:- ತಾವು ಬಿಡುಗಡೆ ಮಾಡಿರತಕ್ಕ ಹಣ, ಜವಾಹರ್ ರೋಜ್‌ಗಾರ್ ಯೋಜನೆಗೆ 20 ಪರ್ಸೆಂಟ್ ಮತ್ತು ಕೇಂದ್ರ ಸರ್ಕಾರ 80 ಪರ್ಸೆಂಟ್ ಏನು ಕೊಡುತ್ತದೆ, ಆ

ಹಣವನ್ನೇ ಮುಂಗಡವಾಗಿ ಬಿಡುಗಡೆ ಮಾಡಿರತಕ್ಕಾಂತಾದ್ದು. ಆ ಹಣದಲ್ಲಿ ಎಲ್ಲಾ ಜಿಲ್ಲೆಗಳಿಗೂ ಕೊಡತಕ್ಕ 20 ಪರ್ಸೆಂಟ್‌ನಲ್ಲಿ ಹಾಸನಕ್ಕೆ ಇರತಕ್ಕಂಥಾದ್ದು ಎಷ್ಟೆಂದರೆ, 109 ಲಕ್ಷ ಮಾತ್ರ; ನಮಗೆ ಸಿಕ್ಕಿದೆ. ಈಗ ಸ್ಪಿಲ್ ಓವರ್ ವರ್ಕ್ಸ್‌ನಲ್ಲಿ ೨೦ ಪರ್ಸೆಂಟ್ ಉಳಿಯುತ್ತದೆ. ನಾವು ಯಾವ ಪರಿಸ್ಥಿತಿಯಲ್ಲಿದ್ದೇವೆಂದರೆ, ನೀವು ಮಾಡಿರತಕ್ಕ ಈ ಹಣದ ವ್ಯವಸ್ಥೆಯಿಂದ, 50 ಲಕ್ಷ ಒಂದು ಕಡೆಗೆ ಹೋಗಿ, 30 ಲಕ್ಷ ರೂಗಳ ಹಣವನ್ನು ಬಾಕಿ 7 ತಾಲ್ಲೂಕುಗಳಿಗೆ ಕೊಟ್ಟಿದ್ದೀರಿ. ಇದರಿಂದ ಹೋದವರ್ಷದ ಸ್ಪಿಲ್ ಓವರ್ ವರ್ಕ್ಸ್‌ನ್ನು ಮಾತ್ರ ಕಂಪ್ಲೀಟ್‌ಮಾಡುವುದಕ್ಕಾಗುತ್ತದೆಯೇ ವಿನಹ, ಜವಾಹರ ರೋಜ್‌ಗಾರ್ ಯೋಜನೆಯ 20 ಪರ್ಸೆಂಟ್ ಹಣ ಜಿಲ್ಲಾ ಪಂಚಾಯಿತಿಯಿಂದ ಬೇರೆ ತಾಲ್ಲೂಕುಗಳಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕಾಗುತ್ತಾ ಇಲ್ಲ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಅಷ್ಟೆ.

ಶ್ರೀ ಎಂ.ಪಿ.ಪ್ರಕಾಶ್:- ಅವರ ಭಾವನೆ ತಪ್ಪಾಗಿರುವುದರಿಂದ. ನಾವು ಏನು ವಿಷಯಗಳನ್ನು ಹೇಳಿದರೂ ಅವರಿಗೆ ಹಿಡಿಯುತ್ತಿಲ್ಲ. ಮಾನ್ಯ ಶಿವರಾಮ್‌ರವರೂ ಕೂಡ ಬಹಳ ಬುದ್ಧಿವಂತರೇ ಗ್ರಹಿಸಲಾರರು ಎಂದು ಅಂದುಕೊಂಡಿಲ್ಲ ಆದರೆ, ಅವರು ಹೇಳತಕ್ಕಂಥಾದ್ದು, ಹೊಳೇನರಸೀಪುರಕ್ಕೆ 50 ಲಕ್ಷ ಕೊಟ್ಟಿದ್ದೀರಿ ಎಂದು ಹೇಳುವುದು. ಅದು ಹಾಗಲ್ಲ. ಮಾರ್ಚ್ ತಿಂಗಳೊಳಗಾಗಿ ಹಾಸನ ಜಿಲ್ಲೆಯಲ್ಲಿ, ಖರ್ಚುಮಾಡದೇ ಉಳಿದಿರತಕ್ಕ ಹಣ, ಎಲ್ಲಾ ಇಲಾಖೆಗಳ ಬಾಬ್ತುಗಳಲ್ಲಿ, ಅದರಲ್ಲಿರತಕ್ಕ ಹಣವನ್ನು ಮರು ಹೊಂದಾಣಿಕೆ ಮಾಡುವುದಕ್ಕೆ ಹಣ ಕಾಸಿನ ಇಲಾಖೆಯವರ ಒಪ್ಪಿಗೆ ಪಡೆದು, ಆಯಾ ತಾಲ್ಲೂಕಿನ ಬೇಡಿಕೆಗೆ ಅನುಗುಣವಾಗಿ ಮಾಡಿದ್ದೇವೆಯೇ ವಿನಹ ಯಾವುದೇ ತಾಲ್ಲೂಕಿಗೆ ಪಕ್ಷಪಾತ ಮಾಡಿದ್ದಾಗಲೀ ಅಥವಾ ಇದರಿಂದ. ರೋಜ್‌ಗಾರ್‌ನಲ್ಲಿ ಆಗಿರತಕ್ಕ ಕೆಲಸಕಾರ್ಯಗಳಲ್ಲಿ ವ್ಯತ್ಯಯವಾಗಿದೆ ಎಂದು ಹೇಳತಕ್ಕಂತಾದ್ದು ತಪ್ಪು ಆ ರೀತಿ ಆಗಿದ್ದರೆ. ನಿಮ್ಮ ಗಂಡಸಿ ಕ್ಷೇತ್ರಕ್ಕೆ ಒಳ್ಳೆಯ ಕೆಲಸ ಮಾಡಿಸಿದ್ದೀರಿ, ಹೆಚ್ಚು ಕೆಲಸಗಳನ್ನು ಮಾಡಿಸಿದ್ದೀರಿ ಅದೇ ಅರಸೀಕೆರೆ ಭಾಗದಲ್ಲಿ ಕೆಲಸ ಆಗಿಲ್ಲ. ಅದಕ್ಕೆ ನಾವು ಪಕ್ಷಪಾತ ಎಂದು ಹೇಳಲಿಕ್ಕಾಗುವುದಿಲ್ಲ. ಅಲ್ಲಿರತಕ್ಕ ಶಾಸಕರ ಹೋರಾಟದ ಮೇಲೆ ಕೂಡ ಕೆಲಸಗಳಾಗಿರುತ್ತವೆ. ಆ ಎಲ್ಲಾ ವಿವರಗಳನ್ನೂ ಈಗ ಹೇಳಲಾರೆ.

ಶ್ರೀ ಬಿ.ಶಿವರಾಮ:- ತಾವು ದಯವಿಟ್ಟು ಒಂದು ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಗಂಡಸಿ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡಿಸಿದ್ದೇನೆಂದರೆ, ಜಿಲ್ಲೆಗೆ ಬರತಕ್ಕ ಯೋಜನೆ ಅಥವಾ ಯೋಜನೇತರ ಹಣದಲ್ಲಿ ಕಡಿತ ಮಾಡತಕ್ಕಂತಾದ್ದನ್ನು ನಾನು ಮಾಡಿಲ್ಲ, ನಾನು ತಾರತಮ್ಯ ಮಾಡಿಲ್ಲ. ಇದನ್ನು ಸಮರ್ಪಕವಾಗಿ ಹಂಚಿಕೊಳ್ಳುವುದರ ಮೂಲಕ, ರಾಜ್ಯಸರ್ಕಾರದಿಂದ ನೇರವಾಗಿ ಹಣವನ್ನು ತೆಗೆದುಕೊಳ್ಳತಕ್ಕ ಕೆಲಸ ಮಾಡಿದ್ದೇನೆ. ಅದರ ಮೂಲಕ ಅಭಿವೃದ್ಧಿ ಮಾಡಿದ್ದೇನೆ. ಆದರೆ, ಇದು ಆ ರೀತಿಯಾಗಲಿಲ್ಲ. ನಿಮ್ಮ ಸರ್ಕಾರಿ ಆದೇಶದಲ್ಲಿ ಸ್ಪಷ್ಟವಾಗಿದೆ ಜವಾಹರ್ ಯೋಜನೆಯ 20 ಪರ್ಸೆಂಟ್ ರಾಜ್ಯಸರ್ಕಾರದ ಹಣವನ್ನು ಮುಂಚಿತವಾಗಿಯೇ ಮುಂಗಡವಾಗಿ ಬಿಡುಗಡೆ ಮಾಡುತ್ತಿದ್ದೇನೆಂದು ಹೇಳಿ, ನೀವು ಕೊಟ್ಟಿರತಕ್ಕ ಹಣದಲ್ಲಿಯೇ ಸಮರ್ಪಕವಾಗಿ 8 ತಾಲ್ಲೂಕುಗಳಿಗೂ ಹಂಚಿಕೆಯಾಗಬೇಕು ಎಂದು ಹೇಳುತ್ತಿದ್ದೇನೆ. ಆದರೆ ನಮ್ಮದು ಇಷ್ಟನ್ನು ಹೊರತುಪಡಿಸಿ. ತಾವು ಹೊಳೆನರಸೀಪುರಕ್ಕೆ ಹೆಚ್ಚಿಗೆ ಹಣ ಕೊಟ್ಟರೆ ನಮಗೆ ಖಂಡಿತ ಸಂತೋಷ. ನಮಗೆ ಆ ಕ್ಷೇತ್ರ ಅಭಿವೃದ್ಧಿಯಾಗಬಾರದು ಎನ್ನತಕ್ಕಂಥ ಭಾವನೆ ಇಲ್ಲ. ಆದರೆ, ನಮಗೆ ಖೋತಾ ಆಗಬಾರದು.

5.40 ಪಿ.ಎಂ.

ಶ್ರೀ ಎಂ.ಪಿ.ಪ್ರಕಾಶ್:- ಈಗ ಸಮರ್ಪಕವಾಗಿ ಎಲ್ಲಾ ಹಂಚಿಕೆಯಾಗಿರತಕ್ಕಂಥಾದ್ದು, ಸಮರ್ಪಕವಾಗಿ ಹಂಚಿಕೆಯಾಗುತ್ತದೆ ಎನ್ನುವ ಮಾತನ್ನು ಹೇಳುವುದಾದರೆ ಇತ್ತೀಚಿಗೆ ಕ್ರಿಯಾಯೋಜನೆಗಳು ಮುಗಿದು ಹೋದ ನಂತರವೂ ಕೂಡ ಗಂಡಸಿ ಮತ್ತು ಅರಸೀಕೆರೆ, ಹೆಚ್ಚು ಬರಗಾಲಕ್ಕೆ ಪೀಡಿತವಾಗತಕ್ಕಂಥ ಹಾಸನ ಜಿಲ್ಲೆಯಲ್ಲಿ ಅವರು ಸೂಚನೆ ಮಾಡಿರತಕ್ಕಂಥ ಅನೇಕ ಕಾಮಗಾರಿಗಳನ್ನು ತಾವು ಕೈಗೆತ್ತಿಕೊಳ್ಳಬೇಕು. ಕ್ರಿಯಾ ಯೋಜನೆಯಲ್ಲಿ ಅವು ಸೇರದೇ ಇದ್ದರೆ ಅವುಗಳನ್ನು ಸೇರಿಸಬೇಕು ಎನ್ನತಕ್ಕಂಥ ಆಜ್ಞೆಯನ್ನು ಕೂಡ ನಾನು ಮಾಡಿದ್ದೇನೆ. ಅದರಲ್ಲಿ ಅಧ್ಯಕ್ಷರು ಸಭೆಯನ್ನು ಮಾಡಿ ಅದರಲ್ಲಿ ಸೇರಿಸುತ್ತೇನೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಪಕ್ಷಪಾತದ ಪ್ರಶ್ನೆ ಅಲ್ಲ, ಇಲ್ಲಿ ಪ್ರಶ್ನೆ ಇರತಕ್ಕಂಥಾದ್ದು ಉದ್ಯೋಗಗಳನ್ನು ಒದಗಿಸುವುದಕ್ಕೆ ಆಯಾ ಕ್ಷೇತ್ರದ ಪರಿಸ್ಥಿತಿ ಮೇಲೆ ಅವಲಂಬಿತವಾಗಿರುತ್ತದೆ. ಎಲ್ಲವನ್ನು ಸಮನಾಗಿ ಹಂಚುತ್ತೇವೆ ಅಂದರೆ ಲಾ ಆಫ್ ಆವ್ರೇಜಸ್ ಹೇಗೆ ಅಂತ ಎಲ್ಲರಿಗೂ ಗೊತ್ತು. ಮುಳುಗಿ ಹೋಗಿಬಿಡುತ್ತಾರೆ ಎಲ್ಲರೂ ಕೂಡ. ನಿಮ್ಮ ಹಾಸನ ಮತ್ತು ಸಕಲೇಶಪುರ, ಒಂದೇ ಅಲ್ಲ ಅರಸೀಕೆರೆ, ಸಕಲೇಶಪುರ, ಆಲೂರು ಒಂದೇ ಅಲ್ಲ. ಅದು ಬೇರೆ ಬೇರೆ ಇರುತ್ತವೆ.

ಶ್ರೀ ಕೆ.ಶಿವರಾಮು:- ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಖಂಡಿತವಾಗಿ ಒಪ್ಪಿಕೊಂಡೆ ನಾನೂ ಕೂಡ ಅದೇ ಭಾವನೆಯಲ್ಲಿ ಮಾತನಾಡಿದ್ದೇನೆ. ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಎಲ್ಲಿ ಕೆಲಸಗಳನ್ನು ತೆಗೆದುಕೊಳ್ಳಬೇಕು, ಅರಸೀಕೆರೆ, ಚನ್ನರಾಯಪಟ್ಟಣ, ಗಂಡಸಿ ಇಂತಹ ಭಾಗಗಳಲ್ಲಿ ಕೆಲಸಗಳನ್ನು ತೆಗೆಕೊಳ್ಳಲಿಲ್ಲವಲ್ಲ ಎನ್ನತಕ್ಕಂಥ ಒಂದೇ ಭಾವನೆಯಿಂದ ನಾನು ಈ ಮಾತನ್ನು ಹೇಳಿದ್ದೇನೆಯೇ ಹೊರತು ಬೇರೆ ದೃಷ್ಟಿಯಿಂದ ನಾನು ಆ ಮಾತನ್ನು ಹೇಳಿದ್ದು ಅಲ್ಲ. ಈಗ ಮಂತ್ರಿಗಳು ಆ ಮಾತನ್ನು ಒಪ್ಪಿಕೊಳ್ಳುತ್ತಿದ್ದಾರೆ ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದ್ದರಿಂದ ನಾನು ಹೇಳತಕ್ಕಂಥಾದ್ದು ಇಷ್ಟು ತಾವು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಇವತ್ತು ಏನು ಹಣವನ್ನು ಬಿಡುಗಡೆ ಮಾಡಿದ್ದರು ಜಿ ಆರ್ ವೈ ನಲ್ಲಿ ಆಗಲೀ ಕೆಲ್ಯಾಮಿಟಿ ರಿಲೀಸ್ ಫಂಡ್‌ನಲ್ಲಿ ಆಗಲೀ ಏನು ಕೆಲಸವನ್ನು ಮಾಡಿದ್ದೇವೆ, ಸಣ್ಣ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಎನ್ನತಕ್ಕಂಥ ಅಂಕಿ ಅಂಶಗಳನ್ನು ಒದಗಿಸಿದ್ದಾರೆ ಇದು ಸರಿ ಅಲ್ಲ ಎನ್ನತಕ್ಕಂಥ ಮಾಹಿತಿಯನ್ನು ಅವರ ಇಲಾಖೆಯವರು ಒದಗಿಸಿರತಕ್ಕಂಥ ಮಾಹಿತಿಯನ್ನು ನಾನು ಇಲ್ಲಿ ಸದನದಲ್ಲಿ ಹೇಳಿದ್ದೇನೆ. ಸಮರ್ಪಕವಾಗಿ ಬರಗಾಲದ ಸಮಯದಲ್ಲಿ ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದಕ್ಕೆ ವಿಫಲವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿ ನನಗೆ ಹೆಚ್ಚು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ರೇವುನಾಯಕ ಬೆಳಮಗಿ-(ಕಮಲಾಪುರ):ಮಾನ್ಯ ಅಧ್ಯಕ್ಷರೇ, ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಕಮಲಾಪುರ ನನ್ನ ಮತ ಕ್ಷೇತ್ರ. ನನ್ನದು ಮೀಸಲು ಕ್ಷೇತ್ರ ಅಂದರೆ ತೀರಾ ಹಿಂದುಳಿದ ಕ್ಷೇತ್ರ. ಈ ಬರಗಾಲದ ಬಗ್ಗೆ ಸಾಕಷ್ಟು ಹಿರಿಯ ಸದಸ್ಯರು ಸವಿಸ್ತಾರವಾಗಿ ಹೇಳಿದ್ದಾರೆ. ಆದರೆ ನಾನು ನನ್ನ ಮತಕ್ಷೇತ್ರದ ಸ್ಥಿತಿಗತಿಗಳನ್ನು ಹೇಳಬಯಸುತ್ತೇನೆ. ಯಾರಾದರೂ ಇಲ್ಲಿ ಸ್ಥಿತಿಗತಿಗಳ ಭಗ್ಗೆ ಮಾತನಾಡುವಾಗ ಅಂಕಿಅಂಶಗಳನ್ನು ತರಿಸಿ ಮಾತನಾಡಬಹುದು. ಆದರೆ ನಾನು ಹಳ್ಳಿ ಹಳ್ಳಿ ಓಡಾಡಿ ಅಲ್ಲಿಯ ಜನರ ಪರಿಸ್ಥಿತಿ ಏನು ಕೂಲಿಕಾರ್ಮಿಕರ ಪರಿಸ್ಥಿತಿ ಏನು, ದೀನದಲಿತರ ಪರಿಸ್ಥಿತಿ ಏನು ಎನ್ನುವುದನ್ನು ಕಂಡಿದ್ದೇನೆ. ಈಗ ಅನೇಕ ವರ್ಷಗಳಿಂದ ಹಿಂದಿನ ಸರ್ಕಾರ ಇದ್ದಾಗ ತಕ್ಷಣ ಕೆಲಸ ಕಾರ್ಯಗಳು ಚಾಲು ಆಗುತ್ತಿದ್ದವು. ಈಗ ಏತಕ್ಕೆ ಕೆಲಸಗಳು ಚಾಲು ಆಗುತ್ತಿಲ್ಲ ಅಂತ ಜನ ನನ್ನನ್ನು

ಕೇಳುತ್ತಿದ್ದಾರೆ. ಆದರೆ ನಾನು ಒಂದು ಮಾತು ಹೇಳಬಯಸುತ್ತೇನೆ. ನಾನು ಹೊಸದಾಗಿ ಶಾಸಕನಾಗಿದ್ದೇನೆ ಆದರೂ ಸಹ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಕೆಲಸ ಪ್ರಾರಂಭ ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಕೂಲಿಕಾರ್ಮಿಕರಿಗೆ ಹೇಳಿದ್ದೇನೆ. ನನ್ನ ಕ್ಷೇತ್ರದಲ್ಲಿ ಗಂಡೂರು ನಾಲಾ ಎನ್ನತಕ್ಕಂಥ ಒಂದು ಪ್ರಾಜೆಕ್ಟ್ ಇದೆ. ಅಲ್ಲಿ 4-5 ನೂರು ಜನ ಕೆಲಸ ಮಾಡುತ್ತಿದ್ದರು ಅದೂ ಸಹ ಸ್ಥಗಿತ ಆಗಿದೆ. ಬರಗಾಲದ ಕೆಲಸ ಇಲ್ಲ ಆದರೆ ಇಂತಹ ಪ್ರಾಜೆಕ್ಟ್‌ಗಳ ಕೆಲಸ ಆದರೂ ಚಾಲು ಮಾಡಿ ಅಂತ ಅಲ್ಲಿನ ಜನ ಕೇಳುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬಹಳಷ್ಟು ಜನ ಕೂಲಿಕಾರ್ಮಿಕರು ಮಹಾರಾಷ್ಟ್ರಕ್ಕೆ ಕೆಲಸಕ್ಕಾಗಿ ಹೋಗುತ್ತಿದ್ದಾರೆ. ಅವರು ಕೆಲಸಕ್ಕೆ ಮಹಾರಾಷ್ಟ್ರಕ್ಕೆ ಜನವರಿ ತಿಂಗಳಲ್ಲಿ ಹೋಗುತ್ತಾರೆ. ಮತ್ತು ಮಳೆಗಾಲ ಅಂದರೆ ಹೆಚ್ಚಾಗಿ ಜೂನ್ ತಿಂಗಳಲ್ಲಿ ವಾಪಸ್ಸ್ ಬರುತ್ತಾರೆ. ಆದರೆ ಜೂನ್ ತಿಂಗಳಿಂದ ಇಲ್ಲಿಯವರೆಗೂ ಯಾವ ಕೆಲಸ ಕೂಡ ಚಾಲು ಆಗಿಲ್ಲ. ನನ್ನ ಮತ ಕ್ಷೇತ್ರವಾದ ಕಮಲಾಪುರದಲ್ಲಿ ಸಾಕಷ್ಟು ಕುಡಿಯುವ ನೀರಿನ ತೊಂದರೆ ಇದೆ. ನಾನು ಉದಾಹರಣೆಗೆ ಹೇಳುವುದಾದರೆ ನನ್ನ ಮತಕ್ಷೇತ್ರವಾದ ಕಮಲಾಪುರದಲ್ಲಿ 15 ಸಾವಿರ ಜನಸಂಖ್ಯೆ ಇದೆ. ಅವರು ಸುಮಾರು ಒಂದು ಕಿಲೋಮೀಟರ್ ದೂರದಿಂದ ನೀರು ತರುತ್ತಿದ್ದಾರೆ ಮತ್ತೇ ಗಿಣಿಸುಲ್ತಾನ್ ಎನ್ನತಕ್ಕಂಥ ಊರು ಇದೆ ಅವರು ಸಹ ಒಂದು ಕಿಲೋಮೀಟರ್ ದೂರದಿಂದ ನೀರು ತರುತ್ತಿದ್ದಾರೆ. ನಾನು ಆ ಊರಿಗೆ ಹೋದಾಗ ಟ್ಯಾಂಕರ್ ಮೂಲಕ ನೀರು ಸರಬರಾಜು ಆಗುತ್ತಿತ್ತು. ಆದರೆ ಹಳ್ಳಿಗಳಲ್ಲಿ ಇನ್ನೂ ಮಡಿವಂತಿಕೆ ಹೋಗಿಲ್ಲ, ಟ್ಯಾಂಕರ್‌ಗಳು ಮೂಲಕ ನೀರು ಹೋದರೆ ಆ ಟ್ಯಾಂಕರ್‌ಗಳು ಶ್ರೀಮಂತರ ಮನೆಯ ಮುಂದೆ ಹೋಗಿ ನಿಲ್ಲುತ್ತವೆ. ಮೊದಲು ನೀರು ಶ್ರೀಮಂತರೇ ತೆಗೆದುಕೊಳ್ಳಬೇಕು ಆಮೇಲೆ ಉಳಿದವರು ನೀರು ತೆಗೆದುಕೊಳ್ಳಬೇಕು. ಇದರಿಂದ ದಲಿತರಿಗೆ ನೀರು ಸಿಗುತ್ತಿಲ್ಲ. ಇದರಿಂದ ನಮ್ಮ ಕ್ಷೇತ್ರದಲ್ಲಿ ಹೆಚ್ಚು ಕೆರೆಗಳು ಆಗಬೇಕು, ಬೋರ್‌ವೆಲ್‌ಗಳನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಯಾವುದಾದರೂ ಕೆಲಸ ಚಾಲು ಆಗಬೇಕಾದರೆ ಸರ್ಕಾರಿ ಅಧಿಕಾರಿಗಳನ್ನು ಕೇಳುತ್ತಿದ್ದೆ ಜವಹಾರ್ ರೋಜ್‌ಗಾರ್ ಯೋಜನೆಯಲ್ಲಿ ಆಗಲಿ ಬೇರೆ ಯಾವುದೇ ಒಂದು ಯೋಜನೆಯಲ್ಲಿ ಕೆಲಸ ಚಾಲು ಮಾಡಿ ಅಂತ ಕೇಳಿದಾಗ ಅವರು ನನಗೆ ಹೇಳುತ್ತಿದ್ದಾರೆ ಜವಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಬರತಕ್ಕಂಥ ನಾಲ್ಕು ಕೋಟಿ ರೂಪಾಯಿ ಚಿಂಚೋಳಿ ತಾಲ್ಲೂಕಿಗೆ ಹೋಗಿದೆ ಅದರಿಂದ ಬೇರೆ ಕ್ಷೇತ್ರದ ಕೆಲಸ ಆಗುತ್ತಿಲ್ಲ ಅಂತ ಹೇಳುತ್ತಿದ್ದಾರೆ. ಇದ್ದ ಜವಹರ್ ರೋಜ್‌ಗಾರ್ ಯೋಜನೆ ಕೆಲಸ ಹೋದರೆ ನನ್ನ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರ, ಕೂಲಿಕಾರ್ಮಿಕರು ಹೆಚ್ಚು ಇರುವ ಕ್ಷೇತ್ರ. ಅವರಿಗೆ ಕೆಲಸ ಸಿಗುತ್ತಿಲ್ಲ ಇದ್ದ ಜವಹರ್ ರೋಜ್‌ಗಾರ್ ಯೊಜನೆ ಬೇರೆ ತಾಲ್ಲೂಕಿಗೆ ಹೋದರೆ ಅವರು ಹೇಗೆ ಬದುಕಬೇಕು ಆದ್ದರಿಂದ ನಾನು ಪದೇ ಪದೇ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ, ನನ್ನ ಕ್ಷೇತ್ರದಲ್ಲಿರುವ ಕೂಲಿಕಾರ್ಮಿಕರಿಗೆ ರೇಷನ್ ಕಾರ್ಡ್‌ನಲ್ಲಿ ಕೊಡುವ ದವಸ ಧಾನ್ಯಗಳು ಹೆಚ್ಚು ಮಾಡಬೇಕು ಬರಗಾಲ ಇರುವುದರಿಂದ ನನ್ನ ಕ್ಷೇತ್ರದ ಜನರಿಗೆ ಹೆಚ್ಚು ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಎಲ್ಲಾ ತರಹದ ಬರಗಾಲ ಇದೆ ಅಂತ ನಾನು ಭಾವಿಸಿದ್ದೇನೆ. ನಾನು ಒಂದು ಮಾತನ್ನು ಹೇಳುತ್ತೇನೆ ಮಂತ್ರಿಗಳ ಕ್ಷೇತ್ರ ಇರಬಹುದು ಅವರ ಕ್ಷೇತ್ರದಲ್ಲಿ ಟೀಚರ್ಸ್ ಕೊರತೆ ಇದೆ ಆಸ್ಪತ್ರೆಗಳ ಕೊರತೆ ಇದೆ ನಾನು ಹಳ್ಳಿಗಳ ಕಡೆ ಹೋದರೆ ಅಲ್ಲಿನ ಮಕ್ಕಳು ಕೇಳುತ್ತಾರೆ ನಮಗೆ ಏನೂ ಕೊಡಬೇಡಿ ಟೀಚರ್ಸ್ ಕೊಡಿ ಅಂತ ಕೇಳುತ್ತಾರೆ. ನನ್ನ ಕ್ಷೇತ್ರ ಮೀಸಲು ಕ್ಷೇತ್ರ ಇದೆ. ಆದ್ದರಿಂದ ನನ್ನ ಕ್ಷೇತ್ರಕ್ಕೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ನನ್ನ ಕ್ಷೇತ್ರ ಇದ್ದ ಹಾಗೆ ಇಡೀ ಕರ್ನಾಟಕ ಇದೇ ರೀತಿ ಇದೆ

ಎನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತೇನೆ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ನನ್ನ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:-ಈಗ ಬರಗಾಲದ ಬಗ್ಗೆ ಚರ್ಚೆ ಮುಕ್ತಾಯವಾಯಿತು, ಇದರ ಬಗ್ಗೆ 7 ನೇ ತಾರೀಖಿಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದು. ಈಗ ವಿತ್ತೀಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳೋಣ.

## ವಿತ್ತೀಯ ಕಾರ್ಯಕಲಾಪಗಳು

## 1995-96 ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡಣೆ.

1)ಶ್ರೀ ಡಿ.ಮಂಜುನಾಥ್ (ಮಾನ್ಯ ಉನ್ನತ ಶಿಕ್ಷಣ ಸಚಿವರು):-

ಅಭಿಯಾಚನೆ ಕ್ರಮಾಂಕ 11- ಉನ್ನತ ಶಿಕ್ಷಣ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಉನ್ನತ ಶಿಕ್ಷಣಕ್ಕೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 272,57,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

2)ಶ್ರೀ ಎಂ.ಸಿ.ನಾಣಯ್ಯ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ ಶ್ರೀ ಸಿ.ಬೈರೇಗೌಡ (ಮಾನ್ಯ ಕೃಷಿ ಸಚಿವರು):-

ಅಭಿಯಾಚನೆ ಕ್ರಮಾಂಕ -೨೬- ವಾರ್ತಾ ಮತ್ತು ಪ್ರಚಾರ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವಾರ್ತಾ ಮತ್ತು ಪ್ರಚಾರ''ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 11,50,56,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ -೩೫-ರಾಜ್ಯ ವಿಧಾನಮಂಡಲ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ರಾಜ್ಯ ವಿಧಾನಮಂಡಲಕ್ಕೆ'' ಸಂದಾಯ ಮಾಡವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,10.62,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.